ಸಂಪುಟ: 06 ಸಂಚಿಕೆ: 190 ಪುಟಗಳು: 08 ಶುಕ್ರವಾರ 25 ಸೆಪ್ಟೆಂಬರ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 + 91 8035621249 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಮಾಡುವ ಮನಸ್ಸಿದ್ದವನು ಎಷ್ಟೇ ಕಷ್ಟವಾದರೂ ಹಿಡಿದ ಕೆಲಸವನ್ನು ಮಾಡೇ ಮಾಡುತ್ತಾನೆ. ಕೈಲಾಗದ ಹೇಡಿ ಮಾತ್ರ ಇಲ್ಲದ ನೆಪಗಳನ್ನು ಹೇಳುತ್ತಾನೆ. ಜನ ಏನೇ ಮಾತಾಡಲಿ ನೀವು ಏನಂತಾ ನಿಮಗೆ ಗೊತ್ತಿದ್ದರೆ ಸಾಕು...

## ವಿಬಿ-ಜಿರಾಮ್‌ಜಿ ಯೋಜನೆಯಡಿ 1.60 ಕೋಟಿ ಮಾನವ ದಿನಗಳ ಸೃಷ್ಟಿ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ತೀವ್ರ ಬರ ಪರಿಸ್ಥಿತಿ ಇರುವುದರಿಂದ ವಿಬಿ-ಜಿರಾಮ್‌ಜಿ ಯೋಜನೆಯಡಿ 1.60 ಕೋಟಿ ಮಾನವ ದಿನಗಳನ್ನು ಸೃಷ್ಟಿಸಲಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರಖಂಡ್ರೆ ವಿಧಾನಸಭೆಗೆ ತಿಳಿಸಿದರು. ಬರ ಕುರಿತ ವಿಶೇಷ ಚರ್ಚೆಯಲ್ಲಿ ಬಿಜೆಪಿ ಶಾಸಕ ವಿ.ಸುನೀಲ್‌ಕುಮಾರ್‌ರವರು ವಿಬಿ-ಜಿರಾಮ್‌ಜಿ ಯೋಜನೆಯನ್ನು ದೊಡ್ಡ ಪ್ರಮಾಣದಲ್ಲಿ ಬಳಸಿಕೊಳ್ಳಲು ಸಮರೋಪಾದಿಯಲ್ಲಿ ಸಿದ್ಧತೆ ಮಾಡಿಕೊಳ್ಳಬೇಕಿತ್ತು. ಆದರೆ ಆ ಕಾರ್ಯವಾಗಿಲ್ಲ ಎಂದು ಆಕ್ಷೇಪಿಸಿದರು. ಆಗ ಮಧ್ಯಪ್ರವೇಶಿಸಿದ ಸಚಿವರು, ಕೃಷಿ ಹೊಂಡ, ಚೆಕ್ ಡ್ಯಾಂ ನಿರ್ಮಾಣ, ಕೆರೆಗಳ ಹೂಳೆತ್ತುವುದು, ಕೆರೆಗಳ ಪುನಶ್ಚೇತನ,



### ಜನರಿಗೆ ಉದ್ಯೋಗ ನೀಡಲು ಕ್ರಮ

1 ಸಾವಿರ ಕೋಟಿ ರೂ.ಗಳನ್ನು ಜಿಲ್ಲೆಗಳಿಗೆ ಮುಂಗಡವಾಗಿ ನೀಡಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತಲಾ 1,700 ಕೋಟಿ ರೂ.ಗಳನ್ನು ಬಳಸಲಾಗುತ್ತಿದೆ. ಮನ್ರೇಗಾ ಯೋಜನೆಯನ್ನು ಬದಲಾಯಿಸಿ ಕೇಂದ್ರ ಸರ್ಕಾರ ನೀಡುವ ಅನುದಾನವನ್ನು ಕಡಿತಗೊಳಿಸಿದೆ. ಆದರೆ ಯಾರೂ ಗುಳೆ ಹೋಗದಂತೆ ರಾಜ್ಯ ಸರ್ಕಾರ ಜನರಿಗೆ ಉದ್ಯೋಗ ನೀಡಲು ಕ್ರಮ ಕೈಗೊಂಡಿದ್ದು ಎಸ್‌ಒಪಿಯನ್ನು ಬಿಡುಗಡೆ ಮಾಡಲಾಗಿದೆ.

ಅಂತರ್ಜಲ ಹೆಚ್ಚಳದಂತಹ ಕಾಮಗಾರಿಗಳು ಸೇರಿದಂತೆ 318 ಕಾಮಗಾರಿಗಳನ್ನು ಈ ವರ್ಷ ವಿಬಿ-ಜಿರಾಮ್‌ಜಿ ಯೋಜನೆಯಡಿ ಕೈಗೊಳ್ಳಲಾಗುತ್ತಿದೆ.

2,900 ಕೋಟಿ ರೂ.ಗಳನ್ನು ಇದಕ್ಕಾಗಿ ಒದಗಿಸಲಾಗುತ್ತಿದೆ. ಪೂರ್ವ ಸಿದ್ಧತೆ ಮಾಡಿಕೊಂಡಿಲ್ಲ ಎಂಬ ಆರೋಪ ಸರಿಯಲ್ಲ ಎಂದರು. ಈ ಯೋಜನೆಯಡಿ ಹಣ ಬಿಡುಗಡೆ ಕುರಿತಂತೆ ದೂರುಗಳು ಇದ್ದು, ಅವುಗಳನ್ನು ಸರಿಪಡಿಸಿದ ನಂತರ ಹಣ ಮಂಜೂರಾಗುತ್ತದೆ ಎಂದರು. ಮಧ್ಯಪ್ರವೇಶಿಸಿದ ಬಿ.ಆರ್.ಪಾಟೀಲ್‌ರವರು ಗುಜರಾತ್ ಮತ್ತು ರಾಜಸ್ಥಾನ ಸರ್ಕಾರಗಳು ಈ ಯೋಜನೆ ಅನುಷ್ಠಾನಕ್ಕೆ ಹಿಂದೇಟು ಹಾಕಲು ಕಾರಣವೇನು ಎಂದು ಪ್ರಶ್ನಿಸಿದರು. ಆಗ ಸಚಿವರು ಆ ರಾಜ್ಯಗಳು ಈ ಯೋಜನೆಯನ್ನು ಒಪ್ಪಿ ಅನುಷ್ಠಾನಗೊಳಿಸುತ್ತಿಲ್ಲ ಎಂದು ಹೇಳಿದರು.

**ವಿಶ್ವಸಂಸ್ಥೆಯಲ್ಲಿ ಪಾಕಿಸ್ತಾನದ ವಿರುದ್ಧ ಕಾಶ್ಮೀರಿ ಮಹಿಳೆ ತಸ್ಲೀಮಾ ಅಖ್ತರ್ ಗುಡುಗಿದ್ದಾರೆ. ಪಾಕ್ ವಿರುದ್ಧ ಮಾತನಾಡುವುದಕ್ಕೆ ನನಗೆ ಯಾವುದೇ ಭಯವಿಲ್ಲ ಅಂತ ಖಡಕ್ ಆಗಿ ನುಡಿದಿದ್ದಾರೆ. ಪಾಕಿಸ್ತಾನ ಆಕ್ರಮಿತ ಕಾಶ್ಮೀರವನ್ನು ಸ್ಮಶಾನವನ್ನಾಗಿ ಮಾಡಿದ್ದಾರೆ ಎಂದು ಪಾಕ್ ವಿರುದ್ಧ ಮಹಿಳೆ ಕಿಡಿಕಾರಿದ್ದಾರೆ. ಜಿನೀವಾದಲ್ಲಿ ನಡೆದ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ 63ನೇ ಅಧಿವೇಶನದಲ್ಲಿ ಬಾರಾಮುಲ್ಲಾದ ತಸ್ಲೀಮಾ ಮಾತನಾಡಿ, ಆ ಪ್ರದೇಶದಲ್ಲಿನ ಪ್ರತಿಭಟನೆಗಳ ವಿರುದ್ಧ ಪಾಕಿಸ್ತಾನ ನಡೆಸಿದ ದಮನಕಾರಿ ಕ್ರಮ ಖಂಡನೀಯ ಎಂದು ಆಕ್ರೋಶ ಹೊರಹಾಕಿದ್ದಾರೆ. ತಸ್ಲೀಮಾ ಅಖ್ತರ್ ಅವರು ಕಾಶ್ಮೀರದ ಭಯೋತ್ಪಾದನಾ ಸಂತ್ರಸ್ತರ ಸಂಘದೊಂದಿಗೆ ಸಂಬಂಧ ಹೊಂದಿರುವ ಸಾಮಾಜಿಕ-ರಾಜಕೀಯ ಕಾರ್ಯಕರ್ತೆ. ಜಿನೀವಾದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಪಿಒಕೆಯಲ್ಲಿನ ಮಾನವ ಹಕ್ಕುಗಳ ಪರಿಸ್ಥಿತಿಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಮೂಲಭೂತ ಹಕ್ಕುಗಳಿಗಾಗಿ ಪ್ರತಿಭಟಿಸುತ್ತಿದ್ದ ನಾಗರಿಕರ ಮೇಲೆ ಪಾಕಿಸ್ತಾನಿ ಭದ್ರತಾ ಪಡೆಗಳು ಗುಂಡು ಹಾರಿಸುತ್ತಿವೆ ಎಂದು ಆರೋಪಿಸಿದ್ದಾರೆ. ಪ್ರತಿಯೊಂದು ಹತ್ಯೆಯ ಕುರಿತೂ ಸ್ವತಂತ್ರ ತನಿಖೆ ನಡೆಯಬೇಕು. ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಮುಕ್ತ ಹಾಗೂ ನ್ಯಾಯಯುತವಾಗಿ ಪಡೆಯುವ ಅವಕಾಶವಿರಬೇಕು ಎಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಒತ್ತಾಯಿಸಿದ್ದಾರೆ. ಸಭೆ ಬಳಿಕ ಖಾಸಗಿ ಸುದ್ದಿವಾಹಿನಿ ಜೊತೆ ಮಾತನಾಡಿ, ಪಾಕಿಸ್ತಾನವು ಎಂದಿಗೂ ಕಾಶ್ಮೀರಿಗಳ ಹಿತಾಸಕ್ತಿಯ ದೃಷ್ಟಿಯಿಂದ ಪ್ರಾಮಾಣಿಕವಾಗಿ ವರ್ತಿಸಲು ಸಾಧ್ಯವಿಲ್ಲ. ಮೊದಲು ಭಯೋತ್ಪಾದಕರನ್ನು ನುಸುಳಿಸುವ ಮೂಲಕ ಜಮ್ಮು-ಕಾಶ್ಮೀರವನ್ನು ಸ್ಮಶಾನವನ್ನಾಗಿ ಮಾಡಲು ಅವರು ಪ್ರಯತ್ನಿಸಿದರು. ಈಗ ಅಮಾಯಕ ಹಾಗೂ ನಿಶ್ಯಸ್ತ್ರ ಪ್ರತಿಭಟನಾಕಾರರನ್ನು ಕೊಲ್ಲುವ ಮೂಲಕ ಪಿಒಕೆ ಪ್ರದೇಶವನ್ನು ಸ್ಮಶಾನವನ್ನಾಗಿ ಪರಿವರ್ತಿಸಿದ್ದಾರೆ ಎಂದು ಆರೋಪಿಸಿದ್ದಾರೆ.**

## ಇನ್ಮುಂದೆ ಕೃತಕ ಪನೀರ್‌ಗೆ ಅನಲಾಗ್ ಪನೀರ್ ಎಂದು ಹೆಸರು

• ಉದಯವಾಹಿನಿ, ಬೆಂಗಳೂರು

ಪನೀರ್ ಪ್ರಿಯರಿಗೆ ಕೇಂದ್ರ ಸರ್ಕಾರ ಶಾಕ್ ಕೊಟ್ಟಿದೆ. ಇನ್ಮುಂದೆ ಕೃತಕ ಪನೀರ್‌ಗೆ ಅನಲಾಗ್ ಪನೀರ್ ಎಂದು ಹೆಸರು ಬದಲಾಯಿಸಲು ನೋಟಿಫಿಕೇಷನ್ ಹೊರಡಿಸಿದೆ. ಹಾಲಿನಿಂದ ತಯಾರಾಗದ ಪಾಮ್ ಆಯಿಲ್, ಹಾಲಿನ ಪುಡಿಯಿಂದ ತಯಾರಾಗುವ ಪನೀರ್‌ಗೆ ಪನೀರ್ ಅಂತ ಕರೆಯುವಂತಿಲ್ಲ. ಬದಲಿಗೆ ಅನಲಾಗ್ ಪನೀರ್‌ಗೆ ಹೆಸರು ಬದಲಾಯಿಸಬೇಕೆಂದು ಹೋಟೆಲ್, ಬೇಕರಿ, ಮದುವೆ ಮಂಟಪಗಳಿಗೆ ಕೇಂದ್ರ ಸೂಚನೆ ನೀಡಿದೆ. ಹಲವು ರಾಜ್ಯಗಳಲ್ಲಿ ಈಗಾಗಲೇ ಕೃತಕ ಪನೀರ್ ಬ್ಯಾನ್ ಆಗಿದೆ. ಕೇಂದ್ರ ಸರ್ಕಾರ ಗೆಜೆಟ್ ನೋಟಿಫಿಕೇಷನ್ ಹೊರಡಿಸಿದೆ. ಇನ್ನೂ ಹಾಲಿನಿಂದ ತಯಾರಿಸದ ಅನಲಾಗ್ ಪನೀರ್ ಅನಲಾಗ್ ಪನೀರ್ ಉತ್ಪಾದನೆ, ಮಾರಾಟ ನಿರ್ಬಂಧಕ್ಕೆ ಎಫ್‌ಎಸ್ ಎಸ್‌ಎಐ ಪ್ರಸ್ತಾವನೆ ಸಲ್ಲಿಸಿದೆ.

ಪನೀರ್ ಹೆಸರಿನಲ್ಲಿ ಗ್ರಾಹಕರಿಗೆ ತಪ್ಪು ಮಾಹಿತಿ ನೀಡುವುದಕ್ಕೆ ಕಡಿವಾಣ ಹಾಕಬೇಕು. ಲೇಬಲ್, ಮಾರ್ಕೆಟಿಂಗ್‌ನಲ್ಲೂ ಪನೀರ್ ಪದ ಬಳಕೆಗೆ ನಿರ್ಬಂಧ ಹೇರುವಂತೆ ಪ್ರಸ್ತಾವನೆಯಲ್ಲಿ ಉಲ್ಲೇಖಿಸಿದೆ. ಇದು ಪ್ರಾಸ್ತಾವಿತ ತಿದ್ದುಪಡಿಯಾಗಿದ್ದು, ಈ ಸಂಬಂಧ ಸಾರ್ವಜನಿಕರು ಆಕ್ಷೇಪಣೆ ಸಲ್ಲಿಕೆಗೆ 60 ದಿನ ಕಾಲಾವಕಾಶ ನೀಡಿದೆ. ಸಲಹೆ-ಆಕ್ಷೇಪಣೆ ಪರಿಶೀಲನೆ ಬಳಿಕ ಅಂತಿಮ ನಿರ್ಧಾರ ಜಾರಿಯಾಗಲಿದೆ.

## ಪಿಯುಸಿ ಪರೀಕ್ಷಾ ಶುಲ್ಕ ಶೇ.50ರಷ್ಟು ಹೆಚ್ಚಳ



• ಉದಯವಾಹಿನಿ, ಬೆಂಗಳೂರು

ಎಸ್‌ಎಸ್‌ಎಲ್‌ಸಿ ಶುಲ್ಕ ಪರಿಷ್ಕರಣೆಯ ಬೆನ್ನಲ್ಲೇ, ರಾಜ್ಯ ಸರ್ಕಾರವು ಪದವಿ ಪೂರ್ವ ವಿದ್ಯಾರ್ಥಿಗಳಿಗೂ ಶುಲ್ಕ ಹೆಚ್ಚಳದ ಶಾಕ್ ನೀಡಿದೆ. ಪರೀಕ್ಷಾ ಶುಲ್ಕ ಸೇರಿದಂತೆ ಒಟ್ಟು 26 ಬಗೆಯ ವಿವಿಧ ಸೇವೆಗಳ ದರವನ್ನು ಶೇ. 50ರಷ್ಟು ಹೆಚ್ಚಿಸಿ ಅಧಿಕೃತ ಆದೇಶ ಹೊರಡಿಸಲಾಗಿದೆ. ಈ ಪರಿಷ್ಕೃತ ದರಗಳು 2026-27ನೇ ಶೈಕ್ಷಣಿಕ ಸಾಲಿನಿಂದಲೇ ಅನ್ವಯವಾಗಲಿವೆ. ಕಳೆದ 8 ವರ್ಷಗಳಿಂದ ಯಾವುದೇ ಶುಲ್ಕ ಏರಿಕೆ ಮಾಡಿರದ ಕಾರಣ ಪ್ರಸ್ತುತ ದರ ಪರಿಷ್ಕರಣೆ ಅನಿವಾರ್ಯ ಎಂದು ಸರ್ಕಾರ ತನ್ನ ನಿರ್ಧಾರವನ್ನು ಸಮರ್ಥಿಸಿಕೊಂಡಿದೆ. ಶೈಕ್ಷಣಿಕ ವೆಚ್ಚಗಳು, ಮುದ್ರಣ ಮತ್ತು ಪರೀಕ್ಷಾ ನಿರ್ವಹಣಾ ವೆಚ್ಚಗಳು ಗಣನೀಯವಾಗಿ ಹೆಚ್ಚಿರುವ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಇಲಾಖೆ ತಿಳಿಸಿದೆ. ಆದಾಗ್ಯೂ, ಏಕಾಏಕಿ ಶೇ. 50ರಷ್ಟು ಶುಲ್ಕ ಹೆಚ್ಚಳ ಮಾಡಿರುವುದು ವಿದ್ಯಾರ್ಥಿಗಳು ಮತ್ತು ಪೋಷಕರ ಆರ್ಥಿಕ ಹೊರೆ ಹೆಚ್ಚಿಸಲಿದೆ ಎಂಬ ಆಕ್ಷೇಪಗಳು ವ್ಯಕ್ತವಾಗಿವೆ.

## ಅಡುಗೆ ಎಣ್ಣೆ ಮೇಲಿನ ಆಮದು ಸುಂಕ ಇಳಿಕೆ

• ಉದಯವಾಹಿನಿ, ಬೆಂಗಳೂರು

ಸಾಲು ಸಾಲು ಹಬ್ಬಗಳು ಬರುತ್ತಿರುವ ಹೊತ್ತಿನಲ್ಲೇ ಸಾರ್ವಜನಿಕರಿಗೆ ಗುಡ್‌ನ್ಯೂಸ್ ಸಿಕ್ಕಿದೆ. ಅಡುಗೆ ಎಣ್ಣೆ ಮೇಲಿನ ಆಮದು ಸುಂಕ ಕಡಿತಗೊಳಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಹಬ್ಬದ ಸೀಸನ್ ಹೊತ್ತಲ್ಲೇ ಕೇಂದ್ರ ಸರ್ಕಾರ, ತಾಳೆ ಎಣ್ಣೆ, ಸೋಯಾ ಎಣ್ಣೆ ಮತ್ತು ಸೂರ್ಯಕಾಂತಿ ಎಣ್ಣೆ ಸೇರಿದಂತೆ ಪ್ರಮುಖ ಅಡುಗೆ ಎಣ್ಣೆಗಳ ಮೇಲಿನ ಆಮದು ಸುಂಕವನ್ನು ಕಡಿತಗೊಳಿಸಿದೆ. ಇದರ ಬೆನ್ನಲ್ಲೇ ಅಡುಗೆ ಎಣ್ಣೆಗಳ ಬೆಲೆ ಕಡಿಮೆಯಾಗುವ ಸಾಧ್ಯತೆಯಿದೆ. ಅಡುಗೆ ಎಣ್ಣೆಯ ಬೆಲೆಯಲ್ಲಿ ಇಳಿಕೆಯಾಗುವ ನಿರೀಕ್ಷೆಯಿದೆ. ಪಾಮ್ ಎಣ್ಣೆ ಮತ್ತು ಎಣ್ಣೆಯ ಮೇಲಿನ ಆಮದು ಸುಂಕವನ್ನು ಶೇ.10ರಿಂದ ಶೇ.5ಕ್ಕೆ ಇಳಿಸಲಾಗಿದೆ. ಸೂರ್ಯಕಾಂತಿ ಎಣ್ಣೆಯ ಮೇಲಿನ ಆಮದು ಸುಂಕವನ್ನು ಶೇ.10ರಿಂದ ಶೂನ್ಯಕ್ಕೆ ಇಳಿಸಲಾಗಿದೆ. ಭಾರತಕ್ಕೆ ಬೇಕಾಗುವ ಒಟ್ಟು ಅಡುಗೆ ಎಣ್ಣೆಯಲ್ಲಿ ಸುಮಾರು ಮೂರನೇ ಎರಡರಷ್ಟು ಭಾಗ ಆಮದು ಮೂಲಕವೇ ಬರುತ್ತದೆ. ಮಲೇಷ್ಯಾ, ಇಂಡೋನೇಷಿಯಾ, ಅರ್ಜೆಂಟೀನಾ, ರಷ್ಯಾ ಮತ್ತು ಉಕ್ರೇನ್ ದೇಶಗಳಿಂದ ಪಾಮ್ ಎಣ್ಣೆ, ಸೋಯಾ ಎಣ್ಣೆ ಮತ್ತು ಸೂರ್ಯಕಾಂತಿ ಎಣ್ಣೆಯನ್ನು ಆಮದು ಮಾಡಿಕೊಳ್ಳಲಾಗುತ್ತದೆ.

## ಶಾಸಕ ಜನಾರ್ದನ ರೆಡ್ಡಿಗೆ ಶಾಕ್ ಕೊಟ್ಟ ಸರ್ಕಾರ

• ಉದಯವಾಹಿನಿ, ಬೆಂಗಳೂರು

ಆಯಂಬಿಡೆಂಟ್ ಕಂಪನಿಯಿಂದ ಗ್ರಾಹಕರಿಗೆ ವಂಚನೆ ಪ್ರಕರಣದಿಂದ ಶಾಸಕ ಗಾಲಿ ಜನಾರ್ದನ ರೆಡ್ಡಿ, ಮೆಹಫೂಜ್ ಅಲಿ ಖಾನ್ ಅವರನ್ನು ಕೈಬಿಟ್ಟಿರುವುದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಮೇಲ್ಮನವಿ ಸಲ್ಲಿಸಿದೆ. 8 ತಿಂಗಳ ಬಳಿಕ ಜನಪ್ರತಿನಿಧಿಗಳ ಕೋರ್ಟ್‌ನ ಆದೇಶ ಪ್ರಶ್ನಿಸಿ ಸರ್ಕಾರ ಹೈಕೋರ್ಟ್ ಮೆಟ್ಟಿಲೇರಿದ್ದು, ಈ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಶಾಸಕ ಜನಾರ್ದನ ರೆಡ್ಡಿ ಮೆಹಫೂಜ್ ಅಲಿಖಾನ್‌ಗೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ. ಆಯಂಬಿಡೆಂಟ್ ಕಂಪನಿಯಿಂದ 20 ಕೋಟಿ ರೂ. ಪಡೆದ ಆರೋಪವಿತ್ತು. ಇಡಿ ತನಿಖೆ ನಡೆದರೆ ಸಹಾಯ ಮಾಡುವುದಾಗಿ ಹಣ ಪಡೆದ ಆರೋಪವಿತ್ತು. 8 ತಿಂಗಳುಗಳ ಬಳಿಕ ಜನಾರ್ದನ ರೆಡ್ಡಿ, ಮೆಹಫೂಜ್ ಅಲಿಖಾನ್ ಅವರನ್ನು ಪ್ರಕರಣದಿಂದ ಕೈಬಿಟ್ಟಿರುವ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲನ್ಮನವಿ ಸಲ್ಲಿಸಿದ್ದು, ಈ ಅರ್ಜಿ ವಿಚಾರಣೆ ನ್ಯಾಯಮೂರ್ತಿ ಅನಂತ್ ರಾಮನಾಥ್ ಹೆಗ್ಡೆ ಅವರಿದ್ದ ಹೈಕೋರ್ಟ್ ಪೀಠ, ಇಬ್ಬರಿಗೂ ನೋಟಿಸ್ ನೀಡಿದೆ.

# ಭಾರತ ಸಹಿಸಲ್ಲ ತಂಟೆಗೆ ಬಂದ್ರೆ ಬಿಡಲ್ಲ



• ಉದಯವಾಹಿನಿ, ವಿಶ್ವಸಂಸ್ಥೆ

ವಿಶ್ವಸಂಸ್ಥೆ ಸೇರಿದಂತೆ ಹಾಲಿ ಇರುವ ಅಂತಾರಾಷ್ಟ್ರೀಯ ವ್ಯವಸ್ಥೆ ಸಂಪೂರ್ಣವಾಗಿ ವಿಫಲವಾಗಿದ್ದು, ಭಾರತ-ಪಾಕಿಸ್ತಾನದಂತಹ ಸಂಘರ್ಷಗಳನ್ನು ಪರಿಹರಿಸಲು ಸಮರ್ಥವಾದ ಕ್ರಿಯಾತ್ಮಕ ವ್ಯವಸ್ಥೆ ಪ್ರಸ್ತುತ ಜಗತ್ತಿನಲ್ಲಿ ಇಲ್ಲ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಕಳವಳ ವ್ಯಕ್ತಪಡಿಸಿದ್ದಾರೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಶ್ವಸಂಸ್ಥೆಯು ಅಗಾಧ ಸಾಮರ್ಥ್ಯವನ್ನು ಹೊಂದಿದ್ದರೂ ಅದು ತನ್ನ ಮೂಲ ಉದ್ದೇಶಕ್ಕೆ ತಕ್ಕಂತೆ ಕೆಲಸ ಮಾಡುತ್ತಿಲ್ಲ ಎಂದು ಟೀಕಿಸಿದರು. ವಿಶ್ವಸಂಸ್ಥೆ ಮತ್ತು ಜಾಗತಿಕ ವ್ಯವಸ್ಥೆಗಳು ತಮಗೆ ವಹಿಸಲಾದ ಜವಾಬ್ದಾರಿಯನ್ನು ಮೀರಿ, ತಾವು ತಲೆಹಾಕಬಾರದ ಎಲ್ಲಾ ಅನಗತ್ಯ ವಿಷಯಗಳಲ್ಲಿ ತೊಡಗಿಸಿಕೊಂಡಿವೆ. ಪರಿಣಾಮವಾಗಿ ಪ್ರಪಂಚದ ಯಾವುದೇ ಪ್ರಮುಖ ಯುದ್ಧ ಅಥವಾ ಸಂಘರ್ಷವನ್ನು ಬಗೆಹರಿಸಲು ಅದಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಆರೋಪಿಸಿದರು. ಥೈಲ್ಯಾಂಡ್-ಕಾಂಬೋಡಿಯಾ ನಡುವಿನ ಘರ್ಷಣೆ ಅಥವಾ ಭಾರತ-ಪಾಕಿಸ್ತಾನ ನಡುವಿನ ಸಂಭಾವ್ಯ ಸಂಘರ್ಷಗಳನ್ನು ಪರಿಹರಿಸಬಲ್ಲ ಪ್ರಬಲ ಜಾಗತಿಕ ವೇದಿಕೆ ಇದ್ದಿದ್ದರೆ ಉತ್ತಮವಾಗಿರುತ್ತಿತ್ತು. ಆದರೆ ಪ್ರಸ್ತುತ ಅಂತಹ ಯಾವುದೇ ಕ್ರಿಯಾತ್ಮಕ ವ್ಯವಸ್ಥೆ ಅಸ್ತಿತ್ವದಲ್ಲಿಲ್ಲ ಎಂದರು. ಜಾಗತಿಕ ವ್ಯವಸ್ಥೆ ವಿಫಲವಾದಾಗ ಪ್ರತಿ ರಾಷ್ಟ್ರವೂ ತನ್ನ ರಾಷ್ಟ್ರೀಯ ಹಿತಾಸಕ್ತಿಗೆ ತಕ್ಕಂತೆ ವರ್ತಿಸುತ್ತದೆ. ಡೊನಾಲ್ಡ್ ಟ್ರಂಪ್ ಆಡಳಿತದಲ್ಲಿ ಅಮೆರಿಕವು ಅಂತರರಾಷ್ಟ್ರೀಯ ವ್ಯವಸ್ಥೆಗಿಂತ ಹೆಚ್ಚಾಗಿ ತನ್ನ ದೇಶದ ಹಿತಾಸಕ್ತಿಗೆ ಮಾತ್ರ ಮೊದಲ ಆದ್ಯತೆ ನೀಡಲಿದೆ ಎಂದು ಸ್ಪಷ್ಟಪಡಿಸಿದರು. ಮತ್ತು ಪಾಕಿಸ್ತಾನ ನಡುವಿನ ಯಾವುದೇ ವಿವಾದವನ್ನು ಕೇವಲ ದ್ವಿಪಕ್ಷೀಯ ಮಾತುಕತೆಯ ಮೂಲಕವೇ ಬಗೆಹರಿಸಿಕೊಳ್ಳಬೇಕು. ಇದರಲ್ಲಿ ಅಮೆರಿಕ ಅಥವಾ ವಿಶ್ವಸಂಸ್ಥೆ ಸೇರಿದಂತೆ ಯಾವುದೇ ಮೂರನೇ ವ್ಯಕ್ತಿಯ ಮಧ್ಯಸ್ಥಿಕೆಯನ್ನು ಭಾರತ ಎಂದಿಗೂ ಒಪ್ಪುವುದಿಲ್ಲ. ಹಾಲಿ ವಿಶ್ವಸಂಸ್ಥೆಯು ಇಂದಿನ ಜಾಗತಿಕ ವಾಸ್ತವಗಳನ್ನು ಪ್ರತಿನಿಧಿಸುತ್ತಿಲ್ಲ ಎಂದು ಭಾರತ ಸೇರಿದಂತೆ ಜಿ-4 (G4) ರಾಷ್ಟ್ರಗಳು (ಭಾರತ, ಜಪಾನ್, ಜರ್ಮನಿ, ಬ್ರೆಜಿಲ್) ದೀರ್ಘಕಾಲದಿಂದ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ವಿಸ್ತರಣೆ ಮತ್ತು ಖಾಯಂ ಸದಸ್ಯತ್ವಕ್ಕಾಗಿ ಒತ್ತಾಯಿಸುತ್ತಿವೆ. ಟ್ರಂಪ್ ಆಡಳಿತವು ಮೊದಲಿನಿಂದಲೂ ಜಾಗತಿಕ ಸಂಸ್ಥೆಗಳಿಗೆ ಅಮೆರಿಕ ನೀಡುವ ಭಾರೀ ಪ್ರಮಾಣದ ಧನಸಹಾಯವನ್ನು ವಿರೋಧಿಸುತ್ತಾ ಬಂದಿದ್ದು, ವಿಶ್ವಸಂಸ್ಥೆ ತನ್ನ ಕಾರ್ಯಕ್ಷಮತೆಯನ್ನು ಸಾಬೀತುಪಡಿಸದಿದ್ದರೆ ಅನುದಾನ ಕಡಿತಗೊಳಿಸುವ ಸುಳಿವನ್ನು ನೀಡುತ್ತಲೇ ಇದೆ.

**1** ಹೊಸ ಶಕ್ತಿಶಾಲಿ ಅಂತಾರಾಷ್ಟ್ರೀಯ ವ್ಯವಸ್ಥೆಗೆ ಕರೆ

**2** ವಿಶ್ವಸಂಸ್ಥೆ ಕಾರ್ಯವೈಖರಿ ಪರಿಣಾಮಕಾರಿ ಅಲ್ಲ

**3** ಭಾರತ-ಪಾಕಿಸ್ತಾನ ಸಂಘರ್ಷ ಉಲ್ಲೇಖಿಸಿ ಹೊಸ ವ್ಯವಸ್ಥೆಗೆ ಡಿಮ್ಯಾಂಡ್

### ಭಾರತದ ಧ್ವನಿ ಗಟ್ಟಿ

ವಿಶ್ವಸಂಸ್ಥೆಯ ಭದ್ರತಾ ಮಂಡಳಿ ವಿಸ್ತರಣೆಗೆ ಭಾರತ ನಿರಂತರ ಒತ್ತಾಯ ಮಾಡುತ್ತಲೇ ಹೊಸ ಜಾಗತಿಕ ರಚನೆಗೆ ಅನುಗುಣವಾಗಿ ಭದ್ರತಾ ಮಂಡಳಿಯಲ್ಲಿ ಶಾಶ್ವತ ಸ್ಥಾನ ನೀಡಬೇಕೆಂದು ಆಗ್ರಹಿಸುತ್ತಿದೆ. ಭಾರತದ ಪ್ರಯತ್ನಗಳಿಗೆ ಒಕ್ಕೂಟ ಬೆಂಬಲ ಘೋಷಿಸಿದ್ದು, ಭಾರತದ ಧ್ವನಿ ಗಟ್ಟಿಯಾಗುತ್ತಿರುವುದು ಧನಾತ್ಮಕ ಬೆಳವಣಿಗೆಯಾಗಿದೆ. ಭದ್ರತಾ ಮಂಡಳಿ ವಿಸ್ತರಣೆಗೆ ಟರ್ಕಿ ಪಟ್ಟು ಹಿಡಿದಿದ್ದು, ಜಗತ್ತು ಐದಕ್ಕಿಂತ ದೊಡ್ಡದು ಎಂಬ ಅದರ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗಾನ್ ಹೇಳಿಕೆ ಜಾಗತಿಕ ಮಟ್ಟದಲ್ಲಿ ಸದ್ದು ಮಾಡುತ್ತಿದೆ.





### ಹೊಸ ರಚನೆಗೆ ನಾಂದಿ

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ಭಾರತ-ಪಾಕಿಸ್ತಾನ ಸಂಘರ್ಷವನ್ನು ಉಲ್ಲೇಖಿಸಿದ್ದಾರೆ. ಥೈಲ್ಯಾಂಡ್ ಮತ್ತು ಕಾಂಬೋಡಿಯಾ ನಡುವೆ ನಡೆದ ಯುದ್ಧ ಅಥವಾ ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಭಾವ್ಯ ಸಂಘರ್ಷವನ್ನು ನಿಭಾಯಿಸಬಲ್ಲ ಸಮರ್ಥ ಅಂತಾರಾಷ್ಟ್ರೀಯ ವ್ಯವಸ್ಥೆ ಇದ್ದರೆ ತುಂಬಾ ಒಳ್ಳೆಯದು. ಸದ್ಯಕ್ಕೆ, ಅಂತಹ ಸಮಸ್ಯೆಗಳನ್ನು ಬಗೆಹರಿಸಬಲ್ಲ ಸಮರ್ಥ ಅಂತಾರಾಷ್ಟ್ರೀಯ ವ್ಯವಸ್ಥೆ ನಮ್ಮಲ್ಲಿ ಇಲ್ಲ ಎಂದು ರುಬಿಯೊ ಹೇಳಿದ್ದಾರೆ. ಮುಂದುವರೆದು, ಶಕ್ತಿಶಾಲಿ ವ್ಯವಸ್ಥೆ ಇಲ್ಲದಿದ್ದಾಗ, ರಾಷ್ಟ್ರಗಳು ತಮ್ಮ ಸ್ವಂತ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ವರ್ತಿಸುತ್ತವೆ. ಡೊನಾಲ್ಡ್ ಟ್ರಂಪ್ ಆಡಳಿತ ಕೂಡ ಅಂತಾರಾಷ್ಟ್ರೀಯ ವ್ಯವಸ್ಥೆಯ ಹಿತಾಸಕ್ತಿಗಿಂತ ಹೆಚ್ಚಾಗಿ, ಅಮೆರಿಕದ ರಾಷ್ಟ್ರೀಯ ಹಿತಾಸಕ್ತಿಯನ್ನೇ ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸುತ್ತದೆ. ಅಮೆರಿಕದ ಹಿತಾಸಕ್ತಿಗಿಂತ ಅಂತಾರಾಷ್ಟ್ರೀಯ ವ್ಯವಸ್ಥೆಗೆ ನಾವು ಎಂದಿಗೂ ಹೆಚ್ಚಿನ ಆದ್ಯತೆ ನೀಡುವುದಿಲ್ಲ ಎಂದು ಮಾರ್ಕೊ ರುಬಿಯೊ ಇದೇ ವೇಳೆ ಸ್ಪಷ್ಟಪಡಿಸಿದ್ದಾರೆ. ಮಾರ್ಕೊ ರುಬಿಯೊ ಅವರ ಹೇಳಿಕೆ ವಿಶ್ವಸಂಸ್ಥೆ ಮೇಲೆ ಅಮೆರಿಕದ ನಂಬಿಕೆ ಕಡಿಮೆಯಾಗುತ್ತಿದೆ ಎಂಬುದರ ಮುನ್ಸೂಚನೆ ಎಂದು ಹಲವು ರಾಜಕೀಯ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ವಿಶ್ವಸಂಸ್ಥೆ ಬದಲಾಗಿ ಹೊಸ ಶಕ್ತಿಶಾಲಿ ಅಂತಾರಾಷ್ಟ್ರೀಯ ವ್ಯವಸ್ಥೆಗೆ ಕರೆ ನೀಡಿರುವುದು, ಭವಿಷ್ಯದಲ್ಲಿ ಹೊಸ ರಚನೆಗೆ ನಾಂದಿ ಹಾಡಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

## ಭಾರತ ತಿರುಗೇಟು



ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾತನಾಡಿದ್ದ ಡೊನಾಲ್ಡ್ ಟ್ರಂಪ್, ಕಳೆದ ವರ್ಷ ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷವನ್ನು ತಾವೇ ಮಧ್ಯಸ್ಥಿಕೆವಹಿಸಿ ಕೊನೆಗೊಳಿಸಿದ್ದಾಗಿ ಹೇಳಿಕೊಂಡ ಮರುದಿನವೇ ರೂಬಿಯೊ ಈ ಹೇಳಿಕೆ ನೀಡಿದ್ದಾರೆ.

ವಾಷಿಂಗ್ಟನ್ ಮಧ್ಯಸ್ಥಿಕೆಯಲ್ಲಿ ನಡೆದ ದೀರ್ಘ ಮಾತುಕತೆಯ ಉಭಯ ದೇಶಗಳು ಕದನ ವಿರಾಮಕ್ಕೆ ಒಪ್ಪಿಕೊಂಡಿದ್ದವು ಎಂಬ ಟ್ರಂಪ್ ವಾದವನ್ನು ಭಾರತ ಮತ್ತೊಮ್ಮೆ ಸಾರಾಸಗಟಾಗಿ ತಳ್ಳಿಹಾಕಿದೆ. ಪಾಕಿಸ್ತಾನದೊಂದಿಗಿನ ಗಡಿ ಕದನ ವಿರಾಮ ಒಪ್ಪಂದವು ಎರಡೂ ದೇಶಗಳ ಸೇನಾ ಕಾರ್ಯಾಚರಣೆಗಳ ಮಹಾನಿರ್ದೇಶಕರ ನಡುವೆ ನಡೆದ ನೇರ ಮಾತುಕತೆಯ ಫಲವೇ ಹೊರತು, ಇದರಲ್ಲಿ ಯಾವುದೇ ಮೂರನೇ ವ್ಯಕ್ತಿ ಅಥವಾ ದೇಶದ ಹಸ್ತಕ್ಷೇಪವಿಲ್ಲ ಎಂದು ನವದೆಹಲಿ ಸ್ಪಷ್ಟಪಡಿಸಿದೆ.

## ಭೀಕರ ವೈಮಾನಿಕ ದಾಳಿ ನಡೆಸಿದ ಪಾಕಿಸ್ತಾನ

ಡ್ರೋನ್ ದಾಳಿಗೆ ಪ್ರತಿಯಾಗಿ ಅಫ್ಘಾನಿಸ್ತಾನದ 10 ಪ್ರಮುಖ ನೆಲೆಗಳ ಮೇಲೆ ಭೀಕರ ವೈಮಾನಿಕ ದಾಳಿ ನಡೆಸಿದ ಪಾಕಿಸ್ತಾನ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದ ನಡುವಿನ ಗಡಿ ಸಂಘರ್ಷವು ತೀವ್ರ ಸ್ವರೂಪ ಪಡೆದುಕೊಂಡಿದ್ದು, ಗುರುವಾರ ಅಫ್ಘಾನಿಸ್ತಾನದ 10 ಪ್ರಮುಖ ನೆಲೆಗಳ ಮೇಲೆ ಪಾಕಿಸ್ತಾನದ ವಾಯುಪಡೆ ನಿಖರ ವೈಮಾನಿಕ ಮತ್ತು ಡ್ರೋನ್ ದಾಳಿಗಳನ್ನು ನಡೆಸಿದೆ. ತನ್ನ ಗಡಿ ಠಾಣೆಗಳ ಮೇಲೆ ಅಫ್ಘಾನಿಸ್ತಾನದಿಂದ ಎಂಟು ಡ್ರೋನ್‌ಗಳನ್ನು ಹಾರಿಸಿ ಶೆಲ್ ದಾಳಿ ನಡೆಸಿದ್ದಕ್ಕೆ ಪ್ರತಿಯಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಪಾಕಿಸ್ತಾನ ಹೇಳಿಕೊಂಡಿದೆ. ಪಾಕಿಸ್ತಾನದ ಮಾಹಿತಿ ಸಚಿವ ಅತೌಲ್ಲಾ ತರಾರ್ ಅವರು ಈ ದಾಳಿಯನ್ನು ಅಧಿಕೃತವಾಗಿ ಖಚಿತಪಡಿಸಿದ್ದು, ಡ್ರೋನ್‌ಗಳನ್ನು ಸಂಗ್ರಹಿಸಲು ಹಾಗೂ ಉಡಾಯಿಸಲು ಬಳಸುತ್ತಿದ್ದ 10 ಮಿಲಿಟರಿ ನೆಲೆಗಳನ್ನು ಮಾತ್ರ ಗುರಿಯಾಗಿಸಿಕೊಂಡು ಅತ್ಯಂತ ಜಾಗರೂಕತೆಯಿಂದ ಸ್ವರಕ್ಷಣೆಯ ಹಕ್ಕಿನಡಿಯಲ್ಲಿ' ದಾಳಿ ನಡೆಸಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಅಫ್ಘಾನ್ ತಾಲಿಬಾನ್ ಸರ್ಕಾರದ ಬೆದರಿಕೆಗಳು ಅಥವಾ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಯತ್ನಗಳು ಸತ್ಯವನ್ನು ಮುಚ್ಚಿಡಲು ಸಾಧ್ಯವಿಲ್ಲ. ತನ್ನ ಸಾರ್ವಭೌಮತ್ವ ಮತ್ತು ನಾಗರಿಕರನ್ನು ರಕ್ಷಿಸಿಕೊಳ್ಳುವ ಸಂಪೂರ್ಣ ಹಕ್ಕು ಪಾಕಿಸ್ತಾನಕ್ಕಿದೆ. ಪಾಕ್ ನೆಲದ ವಿರುದ್ಧ ಭಯೋತ್ಪಾದನೆ ನಡೆಸಲು ಅಫ್ಘಾನ್ ನೆಲವನ್ನು ಬಳಸುವುದನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಎಂದು ಅವರು ಎಚ್ಚರಿಸಿದ್ದಾರೆ. ಖೈಬರ್ ಪಖ್ತುಂಖ್ವಾದ ಕೊಹಾಟ್‌ನಲ್ಲಿರುವ ಹಳೆಯ ಪೊಲೀಸ್ ಲೈನ್ಸ್ ಮೇಲೆ ಉಗ್ರರು ನಡೆಸಿದ ಆತ್ಮಾಹುತಿ ಹಾಗೂ ಗುಂಡಿನ ದಾಳಿಯಲ್ಲಿ 23 ಮಂದಿ ಪೊಲೀಸರು/ನಾಗರಿಕರು ಸಾವನ್ನಪ್ಪಿ, ಸುಮಾರು 100 ಜನರು ಗಾಯಗೊಂಡಿದ್ದರು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನವು ಸೋಮವಾರ ಅಫ್ಘಾನಿಸ್ತಾನದ ಗಡಿ ಪ್ರಾಂತ್ಯಗಳಾದ ಕುನಾರ್ ಮತ್ತು ಪಕ್ತಿಕಾ ಮೇಲೆ ದಾಳಿ ನಡೆಸಿ 28 ಉಗ್ರರನ್ನು ಹತ್ಯೆ ಮಾಡಿರುವುದಾಗಿ ತಿಳಿಸಿತ್ತು.



# ಭೀಕರ ಬರ ಪರಿಸ್ಥಿತಿಯಿಂದ ವಿದ್ಯುತ್ ಅಭಾವ : ಸಿಎಂ ಡಿಕೆಶಿ ಆತಂಕ

## ಬರ ಪರಿಸ್ಥಿತಿಯ ವೇಳೆಯಲ್ಲಿ ಬೆಳೆ ನಷ್ಟ, ನೀರು ಮತ್ತು ವಿದ್ಯುತ್ತಿನ ಸಮಸ್ಯೆ ತೀವ್ರವಾಗಿದೆ. ದಿನನಿತ್ಯದ ಬೇಡಿಕೆ 20 ಸಾವಿರ ಮೆಗಾ ವ್ಯಾಟ್‌ಗೆ ತಲುಪಿದೆ

• ಉದಯವಾಹಿನಿ, ಬೆಂಗಳೂರು

ಮಳೆ ಕೊರತೆಯಿಂದ ದೇಶಾದ್ಯಂತ ಎದುರಾಗಿರುವ ಭೀಕರ ಬರ ಪರಿಸ್ಥಿತಿ ಕಾರಣಕ್ಕೆ ವಿದ್ಯುತ್ ಅಭಾವ ತೀವ್ರವಾಗಿದೆ. ನೆರೆ ರಾಜ್ಯಗಳಿಂದಲೂ ಖರೀದಿಸಲು ವಿದ್ಯುತ್ ಲಭ್ಯವಾಗುತ್ತಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆತಂಕ ವ್ಯಕ್ತಪಡಿಸಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂಧನ ಸಚಿವರು ದಿನನಿತ್ಯವೂ ವಿದ್ಯುತ್ ಬೇಡಿಕೆ ಮತ್ತು ಪೂರೈಕೆಯ ಮೇಲೆ ನಿಗಾ ವಹಿಸಿದ್ದಾರೆ. ಅಧಿಕಾರಿಗಳು ಜನರಿಗೆ ಸಹಾಯ ಮಾಡಲು ಲಭ್ಯ ಇರುವ ಎಲ್ಲಾ ಸಾಧ್ಯತೆಗಳನ್ನು ಪರಿಶೀಲಿಸುತ್ತಿದ್ದಾರೆ ಎಂದು ಹೇಳಿದರು.

ಬರ ಪರಿಸ್ಥಿತಿಯ ವೇಳೆಯಲ್ಲಿ ಬೆಳೆ ನಷ್ಟ, ನೀರು ಮತ್ತು ವಿದ್ಯುತ್ತಿನ ಸಮಸ್ಯೆ ತೀವ್ರವಾಗಿದೆ. ದಿನನಿತ್ಯದ ಬೇಡಿಕೆ 20 ಸಾವಿರ ಮೆಗಾ ವ್ಯಾಟ್‌ಗೆ ತಲುಪಿದೆ ಎಂದು ಹೇಳಿದರು. ಬೇರೆ ರಾಜ್ಯಗಳಿಂದ ವಿದ್ಯುತ್ ಖರೀದಿಸಲು ಪ್ರಯತ್ನಿಸುತ್ತಿದ್ದೇವೆ. ಆದರೆ ಎಲ್ಲಿಯೂ ಲಭ್ಯವಿಲ್ಲ. ಪ್ರತಿ ಯೂನಿಟ್ ವಿದ್ಯುತ್ ಬೆಲೆ ರೂ. 20'ಳಿಂದ 23ಗಳವರೆಗೂ ಏರಿಕೆಯಾಗಿದೆ ಎಂದು ವಿವರಿಸಿದರು. ಕಲ್ಲಿದ್ದಲ ಒಂದೆರಡು ದಾಸ್ತಾನು ಒಂದೆರಡು ದಿನಕ್ಕೆ ಮುಗಿಯುತ್ತದೆ. ಅನಂತರ ಉಷ್ಣ ವಿದ್ಯುತ್ ಉತ್ಪಾದನೆ ಕೂಡ ತಗ್ಗಬಹುದು. ನೀರಿನ ಕೊರತೆಯಿಂದ ಜಲ ವಿದ್ಯುತ್ ಸಮಸ್ಯೆ ಇದೆ ಎಂದರು. ಜೈವಿಕ ಮಾರ್ಗದ ಮೂಲಕ ಇಂಧನ ಉತ್ಪಾದಿಸುವ ಸಕ್ಕರೆ ಕಾರ್ಖಾನೆಗಳ ಮಾಲೀಕರಿಗೆ ನಿರ್ದೇಶನ ನೀಡಲಾಗಿದೆ. ಅಲ್ಲಿ ತಯಾರಾಗುವ ವಿದ್ಯುತ್ತನ್ನು ಬೇರೆ ಕಡೆಗೆ ಮಾರಾಟ ಮಾಡಬಾರದು, ರಾಜ್ಯ ಸರ್ಕಾರಕ್ಕೆ ಪೂರೈಸಬೇಕು ಎಂಬ ಷರತ್ತು ವಿಧಿಸಲಾಗುವುದು. ಕೆಲವು ನಿರ್ಬಂಧಗಳನ್ನು ವಿಧಿಸುವ ಮೂಲಕ ವಿದ್ಯುತ್ ಕೊರತೆಯನ್ನು ಸರಿದೂಗಿಸುವುದು ಅನಿವಾರ್ಯವಾಗಿದೆ ಎಂದು ಹೇಳಿದರು.

ಕರ್ನಾಟಕ ಮಾತ್ರವಲ್ಲದೆ ದೇಶದ ಬಹುತೇಕ ರಾಜ್ಯಗಳಲ್ಲೂ ಇದೆ ಸಮಸ್ಯೆ ಇದೆ ಎಂದು ವಿವರಿಸಿದರು. ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿ ನಿಭಾಯಿಸುವುದು ಸುಲಭವಲ್ಲ. ಆದರೂ ನಾವು ಅದನ್ನು ನಿರ್ವಹಣೆ ಮಾಡುತ್ತೇವೆ ಎಂದು ಸಮರ್ಥಿಸಿಕೊಂಡರು.



### ಬರ ನಿರ್ವಹಣೆಗೆ ಮಧ್ಯಂತರ ಪರಿಹಾರ

ರಾಜ್ಯದಲ್ಲಿ ಇನ್ನೂರಕ್ಕೂ ಹೆಚ್ಚು ತಾಲ್ಲೂಕುಗಳು ಬರ ಪರಿಸ್ಥಿತಿಯಿಂದ ಬಳಲುತ್ತಿವೆ. ಕರ್ನಾಟಕಕ್ಕೆ ಹೆಚ್ಚಿನ ನೆರವು ನೀಡುವುದು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಕರ್ತವ್ಯ ಎಂದು ಡಿ.ಕೆ. ಶಿವಕುಮಾರ್ ಒತ್ತಾಯಿಸಿದರು. ಪ್ರಧಾನಿ ಅವರ ಭೇಟಿಗೆ ಸಮಯ ಕೇಳಲಾಗುವುದು, ಅವಕಾಶ ಸಿಕ್ಕ ತಕ್ಷಣವೇ ರಾಜ್ಯದಿಂದ ಸರ್ವ ಪಕ್ಷ ನಿಯೋಗವನ್ನು ಕರೆದುಕೊಂಡು ಹೋಗುತ್ತೇನೆ. ಬರ ನಿರ್ವಹಣೆಗೆ ಮಧ್ಯಂತರ ಪರಿಹಾರ ನೀಡುವಂತೆ ಒತ್ತಾಯಿಸುತ್ತೇವೆ ಎಂದು ಹೇಳಿದರು.

ಆರ್ಥಿಕ ಇಲಾಖೆ ಕಾಲಕಾಲಕ್ಕೆ ಎಚ್ಚರಿಕೆಯ ಪತ್ರ ಬರೆಯುತ್ತದೆ. ಅದರಲ್ಲಿ ಹೊಸದೇನೂ ಇಲ್ಲ. ಈ ಹಿಂದೆ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಗಳಾಗಿದ್ದಾಗಲು ಆರ್ಥಿಕ ಇಲಾಖೆ ಪತ್ರ ಬರೆದು ಎಚ್ಚರಿಕೆ ನೀಡಿದೆ. ಅವುಗಳನ್ನು ಬಿಡುಗಡೆ ಮಾಡುತ್ತೇನೆ.

ಈಗ ಅದೇ ರೀತಿಯ ಪತ್ರವನ್ನು ಮುಂದಿಟ್ಟುಕೊಂಡು ಬಿಜೆಪಿ ರಾಜಕಾರಣ ನಡೆಸುತ್ತಿದೆ. ದೊಡ್ಡದಾಗಿ ಬಿಂಬಿಸಲಾಗುತ್ತಿದೆ, ನನ್ನ ರಾಜೀನಾಮೆ ಕೇಳುತ್ತಿದ್ದಾರೆ. ಆರ್ಥಿಕ ಶವಯಾತ್ರೆ ಮಾಡುತ್ತಿದ್ದಾರೆ. ಅದಕ್ಕೆ ನಾನು ವಿರೋಧ ವ್ಯಕ್ತಪಡಿಸುವುದಿಲ್ಲ ಎಂದರು.

ಬಿಜೆಪಿಯವರು ಅಧಿಕಾರದಲ್ಲಿದ್ದಾಗ ಎಷ್ಟು ನೀರಾವರಿ ಯೋಜನೆಗಳನ್ನು ಮಂಜೂರು ಮಾಡಿದರು, ಎಷ್ಟು ಹಣ ಬಳಕೆಯಾಗಿತ್ತು ಎಂಬುದನ್ನು ನಾನು ಬಹಿರಂಗಪಡಿಸುತ್ತೇನೆ. ಟೀಕಿಸುವುದು ಸುಲಭ.

ಆದರೆ ನಿರ್ವಹಣೆ ಕಷ್ಟ. ನಾವು ನಿರ್ವಹಣೆ ಮಾಡುತ್ತಿದ್ದೇವೆ ಎಂದು ಹೇಳಿದರು.

ಜಾತಿ ಮತ್ತು ಧರ್ಮದ ಆಧಾರದಲ್ಲಿ ಭಾವನಾತಕ ವಿಚಾರವಾಗಿ ನಾನು ರಾಜಕಾರಣ ಮಾಡುವುದಿಲ್ಲ. ಜನರ ಬದುಕಿನ ಮೇಲೆ ರಾಜಕಾರಣ ಮಾಡುತ್ತೇವೆ ಎಂದು ಹೇಳಿದರು. ವಿಧಾನಸಭೆಯಲ್ಲಿ ಬರ ನಿರ್ವಹಣೆ ಕುರಿತು ಎರಡು ದಿನಗಳ ಚರ್ಚೆಯಾಗಿದೆ. ವ್ಯಾಪಕ ಅಧ್ಯಯನ ಮಾಡಿರುವ ಪರಮೇಶ್ವರ್ ಅವರು ಇಂದು ಚರ್ಚೆಗೆ ಉತ್ತರ ನೀಡುತ್ತಾರೆ ಎಂದು ಹೇಳಿದರು. ವಿರೋಧ ಪಕ್ಷಗಳು ಟೀಕೆ ಮಾಡುವುದಕ್ಕಷ್ಟೇ ಸೀಮಿತವಾಗಿರದೇ, ರಾಜ್ಯದ ನೆರವಿಗೆ ಬರಬೇಕು. ಸರ್ವ ಪಕ್ಷ ನಿಯೋಗದಲ್ಲಿ ಭಾಗವಹಿಸಿ ಕೇಂದ್ರದ ಮೇಲೆ ಒತ್ತಡ ಹೇರಲು ಸಹಕರಿಸಬೇಕು ಎಂದು ಹೇಳಿದರು.



**ಈ ದಿನದ ದರ** ಪೆಟ್ರೋಲ್: 111.68₹/L ಡೀಸೆಲ್ : 99.56₹/L ಬಂಗಾರ: ₹ 15,268/Gram 24ct ₹ 13,995 /Gram 22ct ಬೆಳ್ಳಿ: ₹235.00/

# ಸರ್ಕಾರಕ್ಕೆ ಅನ್ನದಾತನಿಗಿಂತ ಅದಾನಿ ಹೆಚ್ಚು ಮುಖ್ಯವಾಗಿದೆ: ವಿ ಸುನಿಲ್‌ಕುಮಾರ್ ಟೀಕೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ರೈತರ ಕಲ್ಯಾಣಕ್ಕಿಂತ ರಿಯಲ್ ಎಸ್ಟೇಟ್‌ಗೆ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ ಆದ್ಯತೆ ನೀಡುತ್ತಿದೆ ಎಂದು ಬಿಜೆಪಿ ಶಾಸಕ ವಿ. ಸುನಿಲ್ ಕುಮಾರ್ ಗುರುವಾರ ವಿಧಾನಸಭೆಯಲ್ಲಿ ತೀವ್ರ ವಾಗ್ದಾಳಿ ನಡೆಸಿದರು. ಈ ಸರ್ಕಾರ ಅನ್ನದಾತನಿಗಿಂತ ಅದಾನಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದೆ ಎಂದು ಕಾರ್ಕಳ ಶಾಸಕ ಕುಮಾರ್ ಅವರು ವಿಧಾನಸಭೆಯಲ್ಲಿ ಬರ ಪರಿಸ್ಥಿತಿ ಕುರಿತು ನಡೆದ ಚರ್ಚೆಯಲ್ಲಿ ಹೇಳಿದರು. ಇದು ರೈತಪರ ಸರ್ಕಾರವಲ್ಲ, ರಿಯಲ್ ಎಸ್ಟೇಟ್ ಸರ್ಕಾರ ಎಂದು ಅವರು ಟೀಕಿಸಿದರು. ಆಗಸ್ಟ್ 23ರಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉದ್ಯಮಿ ಗೌತಮ್ ಅದಾನಿ ಅವರೊಂದಿಗೆ ನಡೆಸಿದ ಸಭೆಯನ್ನು ಉಲ್ಲೇಖಿಸಿ ಸುನಿಲ್ ಕುಮಾರ್ ಈ ಹೇಳಿಕೆ ನೀಡಿದರು. ತಾವು ಹುಟ್ಟಿನಿಂದಲೇ ಕೃಷಿಕ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಗಾಗ ಹೇಳುತ್ತಿರುತ್ತಾರೆ.

ಅಂತಹ ವ್ಯಕ್ತಿಯೊಬ್ಬರು ರೈತರು ಎದುರಿಸುತ್ತಿರುವ ಸಂಕಷ್ಟಗಳನ್ನು ಅರ್ಥಮಾಡಿಕೊಳ್ಳಬೇಕು. ಆದರೆ ಶಿವಕುಮಾರ್ ಅವರು ರೈತರ ಅಳಲಿಗೆ ಕಿವಿಗೊಡುತ್ತಿಲ್ಲ ಎಂದು ಹೇಳಿದರು. ಡಿ ಕೆ ಶಿವಕುಮಾರ್ ನೇತೃತ್ವದ ಸರ್ಕಾರ ಸೆಪ್ಟೆಂಬರ್ 10ರಂದು ಅಧಿಕಾರದ 100 ದಿನಗಳನ್ನು ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಸಂಭ್ರಮಾಚರಣೆ ಮಾಡಬಾರದಿತ್ತು ಎಂದು ಸುನಿಲ್ ಕುಮಾರ್ ಹೇಳಿದರು. ಸರ್ಕಾರ ಎಲ್ಲವನ್ನೂ ಬದಿಗಿಟ್ಟು ಬರ ಪರಿಸ್ಥಿತಿಯತ್ತ ಗಮನ ಹರಿಸಬೇಕಿತ್ತು ಮತ್ತು ರೈತರಲ್ಲಿ ಆತ್ಮವಿಶ್ವಾಸ ಮೂಡಿಸಬೇಕಿತ್ತು. ಈ ಸರ್ಕಾರ ಪತ್ರಿಕೆಗಳ ಜಾಹೀರಾತುಗಳಿಗೆ ಖರ್ಚು ಮಾಡಿದ ಹಣದಿಂದಲೇ ಒಂದು ತಾಲ್ಲೂಕಿನಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಬಹುದಿತ್ತು ಎಂದು ಹೇಳಿದರು.

ಬರ ನಿರ್ವಹಣೆಯ ಮೇಲ್ವಿಚಾರಣೆಗಾಗಿ ಎಷ್ಟು ಸಚಿವರು ಜಿಲ್ಲೆಗಳಿಗೆ ಭೇಟಿ ನೀಡಿದ್ದಾರೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು ಎಂದು ಸುನಿಲ್ ಕುಮಾರ್ ಆಗ್ರಹಿಸಿದರು.

# ಯಡಿಯೂರಪ್ಪ, ಬೊಮ್ಮಾಯಿ ಸರ್ಕಾರಕ್ಕೆ ಆರ್ಥಿಕ ಇಲಾಖೆ ಕೊಟ್ಟ ಎಚ್ಚರಿಕೆ ದಾಖಲೆ ಬಿಡುಗಡೆ ಮಾಡಲೇ: ಸಿಎಂ ಡಿಕೆಶಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ 200ಕ್ಕೂ ಹೆಚ್ಚು ತಾಲ್ಲೂಕುಗಳು ಬರಕ್ಕೆ ತತ್ತರಿಸಿದ್ದು, ರೈತರ ಬೆಳೆಗಳು ನಾಶವಾಗಿವೆ. ವಿದ್ಯುತ್ ಉತ್ಪಾದನೆ ಕುಸಿದಿದೆ. ನೀರಿನ ಅಭಾವ ಹೆಚ್ಚಾಗಿದೆ. ಹೀಗಾಗಿ ಕರ್ನಾಟಕಕ್ಕೆ ನೆರವು ನೀಡುವುದು ಪ್ರಧಾನಮಂತ್ರಿಗಳ ಕರ್ತವ್ಯ ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸದಾಶಿವನಗರ ನಿವಾಸದ ಬಳಿ ಮಾತನಾಡಿದ ಅವರು, ಬರ ಪರಿಹಾರ ವಿಚಾರವಾಗಿ ದೆಹಲಿಗೆ ಸರ್ವಪಕ್ಷ ನಿಯೋಗ ತೆರಳುವ ಬಗ್ಗೆ ಪ್ರತಿಕ್ರಿಯಿಸುತ್ತಾ, ಸರ್ವಪಕ್ಷ ನಿಯೋಗ ದೆಹಲಿಗೆ ಹೋಗಲಿದೆ, ಪ್ರಧಾನಮಂತ್ರಿಗಳ ಭೇಟಿಗೆ ಸಮಯಾವಕಾಶ ಕೇಳಿದ್ದು, ಉಪಮುಖ್ಯಮಂತ್ರಿಗಳು ಬರ ಪರಿಸ್ಥಿತಿಯ ಆಳವಾದ ಅಧ್ಯಯನ ಮಾಡಿದ್ದಾರೆ. ಈಗ ಮಧ್ಯಂತರ ಪರಿಹಾರ ನೀಡಿ, ನಂತರ ಬರ ಅಧ್ಯಯನ ಮಾಡಿ ಹೆಚ್ಚು ಪರಿಹಾರ ನೀಡಬೇಕು. ವಿರೋಧ ಪಕ್ಷಗಳ ನಾಯಕರು ಹಾಗೂ ಸಂಸದರು ನಮಗೆ ನೆರವು ನೀಡುವ ವಿಶ್ವಾಸವಿದೆ. ಕರ್ನಾಟಕಕ್ಕೆ ನೆರವು ನೀಡಬೇಕಾಗಿರುವುದು ಪ್ರಧಾನಮಂತ್ರಿಗಳ ಕರ್ತವ್ಯ ಎಂದರು. ಬೇರೆ ರಾಜ್ಯಗಳಿಂದ ಪ್ರತಿ ಯೂನಿಟ್‌ಗೆ 20-22 ರೂ. ವರೆಗೆ ನೀಡಿ ವಿದ್ಯುತ್ ಖರೀದಿ ಮಾಡಲಾಗುತ್ತಿದೆ. ನಮ್ಮ ನಾಗರಿಕರ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ನಾವು ಇಂಧನ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ.

## ರಾಜ್ಯದ ಅನುದಾನದ ಬಗ್ಗೆ ಮಾತನಾಡಲು ಬಿಜೆಪಿ ಸಂಸದರಿಗೆ ಧಮ್ ಇಲ್ಲ: ಸಚಿವ ಬಾಲಕೃಷ್ಣ ಆಕ್ರೋಶ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ರಾಜ್ಯಕ್ಕೆ ನ್ಯಾಯಯುತವಾಗಿ ಸಿಗಬೇಕಾದ ಅನುದಾನವನ್ನು ಕೇಂದ್ರ ನೀಡುತ್ತಿಲ್ಲ. ಈ ಬಗ್ಗೆ ಧ್ವನಿ ಎತ್ತಬೇಕಾದ ರಾಜ್ಯದ ಬಿಜೆಪಿ ಸಂಸದರಿಗೆ ಧಮ್ ಇಲ್ಲ ಎಂದು ಪೌರಾಡಳಿತ ಸಚಿವ ಹೆಚ್.ಸಿ.ಬಾಲಕೃಷ್ಣ ಕಿಡಿಕಾರಿದ್ದಾರೆ. ವಿಧಾನ ಪರಿಷತ್‌ನಲ್ಲಿ ಬರ ಕುರಿತ ವಿಶೇಷ ಚರ್ಚೆ ಸಂಬಂಧ ಬಿಜೆಪಿ ಸದಸ್ಯ ಎಸ್.ಅರುಣ್ ಮಾತನಾಡುವಾಗ ರಾಜ್ಯದಲ್ಲಿ ತಲೆದೂರಿರುವ ಬರಗಾಲ ಸಂಬಂಧ ಕೇಂದ್ರವು ಎನ್‌ಡಿಆರ್‌ಎಫ್ ನಿಧಿಯನ್ನು ನೀಡುತ್ತದೆ. ಆದರೆ, ಕೇಂದ್ರದೊಂದಿಗೆ ಸದಾ ರಾಜ್ಯ ಸರ್ಕಾರ ಜಟಾಪಟಿ ನಡೆಸುವ ಕಾರಣದಿಂದಾಗಿ ರಾಜ್ಯಕ್ಕೆ ಬರಬೇಕಾದ ಅನುದಾನ ದೊರೆಯುತ್ತಿಲ್ಲ. ಎಲ್ಲರ ವಿಶ್ವಾಸ ಗಳಿಸಿಕೊಂಡು ಸರ್ವಪಕ್ಷ ನಿಯೋಗವನ್ನು ಕೊಂಡೊಯ್ದಿದ್ದರೆ ರಾಜ್ಯಕ್ಕೆ ಅನುದಾನ ದೊರೆಯುತ್ತಿತ್ತು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿರೋಧಿಸಿದ ಸಚಿವ ಬಾಲಕೃಷ್ಣ, ರಾಜ್ಯಕ್ಕೆ ದೊರೆಯಬೇಕಾದ ಅನುದಾನ ಸಂಬಂಧ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ದೆಹಲಿಗೆ ಹೋಗಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಸುಪ್ರೀಂ ಕೋರ್ಟ್ ಮೊರೆ ಹೋಗಿ ನಮ್ಮ ಹಕ್ಕನ್ನು ಪಡೆದುಕೊಳ್ಳಲಾಯಿತು. ಅನುದಾನ ವಿಚಾರದಲ್ಲಿ ಮಾತನಾಡುವುದಕ್ಕೆ ರಾಜ್ಯದ ಬಿಜೆಪಿ ಸಂಸದರಿಗೆ ಧಮ್ ಇಲ್ಲ ಎಂದು ಕಿಡಿಕಾರಿದರು. ಇದಕ್ಕೆ ತೀವ್ರ ಆಕ್ಷೇಪಿಸಿದ ವಿಪಕ್ಷ ಸದಸ್ಯರು ಸಚಿವ ಬಾಲಕೃಷ್ಣ ವಿರುದ್ಧ ಮುಗಿಬಿದ್ದರು. ಈ ರೀತಿಯಾಗಿ ಮಾತನಾಡುವುದು ಸರಿಯಲ್ಲ. ಜವಾಬ್ದಾರಿಯುತ ಸರ್ಕಾರದ ಪ್ರತಿನಿಧಿಯಾಗಿ ಕೇಂದ್ರಕ್ಕೆ ಮನವರಿಕೆ ಮಾಡುವ ನಿಟ್ಟಿನಲ್ಲಿ ಪ್ರಯತ್ನವಿರಬೇಕು. ನಮ್ಮ ವಿರುದ್ಧ ಆಕ್ರೋಶ ವ್ಯಕ್ತಪಡಿಸುವುದು ಸರಿಯಲ್ಲ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಹೆಚ್.ಸಿ.ಬಾಲಕೃಷ್ಣ, ಬರೀ ಬೊಗಳೆ ಭಾಷಣ ಮಾಡುವುದು ಬಿಜೆಪಿಯವರ ಖಯಾಲಿಯಾಗಿದೆ.

## ಮಹಿಳಾ ಭದ್ರತೆ ಕೇವಲ ಕಾನೂನಲ್ಲ, ಸಾಮಾಜಿಕ ಹೊಣೆಗಾರಿಕೆ: 'ಸುರಕ್ಷಿತ ನಗರ' ಶ್ರೇಯಾಂಕದ ವಿವರ ನೀಡಿದ ಸೀಮಂತ್ ಕುಮಾರ್ ಸಿಂಗ್

• ಉದಯವಾಹಿನಿ, ಬೆಂಗಳೂರು

ಕೇವಲ ಕಾನೂನು ಮತ್ತು ಮೂಲಸೌಕರ್ಯಗಳ ನಿರ್ಮಾಣವಾದರೆ ಸಾಲದು, ಅದರ ಸರಿಯಾದ ಅನುಷ್ಠಾನ ಮಾತ್ರವೇ ಇಡೀ ವ್ಯವಸ್ಥೆಯ ವಿಶ್ವಾಸನೀಯತೆಯನ್ನು ನಿರ್ಧರಿಸುತ್ತದೆ ಎಂದು ನಿವೃತ್ತ ಐಪಿಎಸ್ ಅಧಿಕಾರಿ ಹಾಗೂ ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯಮಂಡಳಿಯ ಸದಸ್ಯ ರಾಘವೇಂದ್ರ ಔರಾದ್ಕರ್ ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರಿನ ಸ್ಪೋರ್ಟಿ ಸಭಾಂಗಣದಲ್ಲಿ ಆರಂಭವಾದ 3ನೇ ಆವೃತ್ತಿಯ ರಾಷ್ಟ್ರೀಯ ಮಹಿಳಾ ಸಮ್ಮೇಳನದಲ್ಲಿ ಭಾಗಿಯಾಗಿ ಅವರು ಮಾತನಾಡಿದರು. ಇಂದಿಗೂ ಹಗಲಿನ ವೇಳೆಯಲ್ಲೂ ಒಬ್ಬ ಮಹಿಳೆ ಅಂಡರ್‌ಪಾಸ್ ದಾಟಿ ಹೋಗಬೇಕೆಂದರೆ ಎರಡು ಬಾರಿ ಯೋಚಿಸುವಂತಾಗಿದೆ. ಇದೇ ಇಂದಿನ ವಾಸ್ತವ. ಪೊಲೀಸ್ ಪಡೆ ಕೇವಲ ಕಾನೂನು ಜಾರಿಗೊಳಿಸುವ ಸಂಸ್ಥೆಯಾಗದೇ ಸಾಮಾಜಿಕ ಬದಲಾವಣೆಯ ಹರಿಕಾರನಾಗಬೇಕು. ನಮ್ಮ ಪ್ರಜಾಪ್ರಭುತ್ವವನ್ನು ಪ್ರಬುದ್ಧ ಎಂದು ಕರೆದುಕೊಳ್ಳಬೇಕಾದರೆ, ಮಹಿಳೆಯರು ತಮ್ಮ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಸ್ವತಂತ್ರವಾಗಿ ಚಲಾಯಿಸುವಂತಾಗಬೇಕು. ಅದಕ್ಕಾಗಿ ನಮಗೆ ಸಂವೇದನಾಶೀಲ ಪೊಲೀಸ್ ವ್ಯವಸ್ಥೆ, ಆಡಳಿತ ಮತ್ತು ಸಮಾಜದ ಅಗತ್ಯವಿದೆ. ಈ ಪರಿಸ್ಥಿತಿಯನ್ನು ಬದಲಾಯಿಸಲು ಪೋಷಕರ ಮನಸ್ಥಿತಿ ಬದಲಾಗುವುದು ಅತ್ಯಂತ ಮುಖ್ಯ ಎಂದು ಅವರು ತಿಳಿಸಿದರು. ಇದೇ ಸಂದರ್ಭದಲ್ಲಿ ಸ್ವತಃ ಮಹಿಳಾ ಪೊಲೀಸ್ ಸಿಬ್ಬಂದಿ ಸಮಸ್ಯೆಗಳ ಕುರಿತು ಬೆಳಕು ಚೆಲ್ಲಿದ ಅವರು,

ಕಾನ್ಸ್‌ಟೇಬಲ್ ಹಂತದಿಂದ ಹಿಡಿದು ಇನ್ಸ್‌ಪೆಕ್ಟರ್ ಹಂತದವರೆಗಿನ ಮಹಿಳಾ ಸಿಬ್ಬಂದಿಗೆ ಸುಸಜ್ಜಿತ ವಿಶ್ರಾಂತಿ ಕೊಠಡಿಗಳು, ಹಾಸ್ಟೆಲ್ ಸೌಲಭ್ಯಗಳು, ಕರ್ತವ್ಯದ ಸ್ಥಳದಲ್ಲಿ ಶಿಶುಪಾಲನಾ (ಚೈಲ್ಡ್ ಕೇರ್) ಕೇಂದ್ರಗಳು, ರಾತ್ರಿ ವೇಳೆ ಸಾರಿಗೆ ಸೌಲಭ್ಯ ಹಾಗೂ ನಿಯಮಿತ ಮಾನಸಿಕ ಆರೋಗ್ಯ ಆಪ್ತಸಮಾಲೋಚನೆಗಳ ಅಗತ್ಯವಿದೆ. ಪುರುಷ ಸಿಬ್ಬಂದಿಗೆ ಮಾತ್ರ ಬಾಡಿ - ವೋರ್ನ್ ಕ್ಯಾಮೆರಾಗಳನ್ನು ನೀಡಿ ಮಹಿಳೆಯರಿಗೆ ನೀಡದಿರುವುದು ತಾರತಮ್ಯದ ಭಾವನೆ ಮೂಡಿಸುತ್ತಿದ್ದು, ಮಹಿಳಾ ಸಿಬ್ಬಂದಿಗೆ ಪ್ರತ್ಯೇಕ ವಿನ್ಯಾಸದ ಹೆಲ್ಮೆಟ್ ಮತ್ತು ಬಾಡಿ ಪ್ರೊಟೆಕ್ಟರ್‌ಗಳನ್ನು ಒದಗಿಸಬೇಕು ಎಂದು ಸರ್ಕಾರದ ಗಮನ ಸೆಳೆದರು. ತೆಲಂಗಾಣದ 'ಭರವಸಾ' ಮಾದರಿಯ ಸಮಗ್ರ ಮಹಿಳಾ ಸುರಕ್ಷತಾ ಕೇಂದ್ರ ಹಾಗೂ ರಾಜ್ಯಮಟ್ಟದ 'ಮಹಿಳಾ ಸುರಕ್ಷತಾ ಡ್ಯಾಶ್‌ಬೋರ್ಡ್' ಜಾರಿಗೆ ತರಲು ಸಲಹೆ ನೀಡಿದರು.

## ಟ್ರಾಫಿಕ್, ಕಸ ಬೆಂಗಳೂರಿನ Top-2 ಸಮಸ್ಯೆಗಳು ಕೃಷ್ಣ ಬೈರೇಗೌಡ

• ಉದಯವಾಹಿನಿ, ಬೆಂಗಳೂರು

ಟ್ರಾಫಿಕ್ ಹಾಗೂ ಕಸದ ಸಮಸ್ಯೆ ಬೆಂಗಳೂರಿನ ಟಾಪ್ ಟು ಸಮಸ್ಯೆಗಳು ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಕಸ ನಿರ್ವಹಣೆ ಜಟಿಲ ಸಮಸ್ಯೆಯಾಗಿದೆ. ಹೇಗೆ ಪರಿಸ್ಥಿತಿ ಸುಧಾರಿಸಬೇಕು ಅನ್ನೋದರ ಬಗ್ಗೆ ಸಲಹೆ ತೆಗೆದುಕೊಳ್ಳಲು ಇಂದು ಸಾರ್ವಜನಿಕರ ಸಂವಾದ ನಡೆಸಿದ್ದೇವೆ. ವ್ಯವಸ್ಥೆಯಲ್ಲೂ ಸುಧಾರಣೆ ಮಾಡಬೇಕಿದೆ. ಟ್ರಾಫಿಕ್ ಮತ್ತು ಕಸ ಬೆಂಗಳೂರಿನ ಟಾಪ್ ಟು ಸಮಸ್ಯೆಗಳಾಗಿವೆ ಎಂದು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಟ್ರಾಫಿಕ್ ವಾರ್ಡನ್ ಮಾದರಿಯಲ್ಲಿ ಕಸದ ವಾರ್ಡನ್ ಮಾಡಲು ನಿರ್ಧರಿಸಿದ್ದೇವೆ. ಜನರಿಗೆ ಬೆಂಗಳೂರು ಸ್ವಚ್ಛವಾಗಿರಬೇಕು ಅನ್ನೋ ಆಸಕ್ತಿ ಇದೆ. ಹೀಗಾಗಿ ಆಸಕ್ತ ಜನ ವಾರ್ಡನ್ ಆಗಿ ನೇಮಕ ಮಾಡಿಕೊಳ್ಳುವ ಯೋಜನೆ ಇದೆ. ಜೊತೆಗೆ ಕಸದ ಸ್ವಚ್ಛತೆಯ ವಿಚಾರದಲ್ಲಿ ಜನರನ್ನು ಕೂಡ ಇನ್ವಾಲ್ವ್ ಮಾಡಿಕೊಳ್ಳೋಕೆ ನಿರ್ಧರಿಸಿದ್ದೇವೆ. ಎಂದಿದ್ದಾರೆ. ವಿರೋಧ ಪಕ್ಷದ ಶಾಸಕರ ಕ್ಷೇತ್ರ ಸ್ವಚ್ಛವಾಗಿಲ್ಲ ಅನ್ನೋ ಬಗ್ಗೆ ಆರ್.ಅಶೋಕ್ ಆರೋಪ ಬಗ್ಗೆ ಮಾತನಾಡಿ, ಅಕ್ಕಪಕ್ಕದ ವಾರ್ಡ್ ವೈಸ್ ಸ್ವಚ್ಛತೆ ಒಂದೇ ತರಹ ಇರಲ್ಲ. ಇದು ಅಧಿಕಾರಿಗಳ ಅಥವಾ ಕಾಂಟ್ರಾಕ್ಟರ್ ನಿರ್ಲಕ್ಷ್ಯ ಇರುತ್ತದೆ.

## ದರ್ಶನ್‌ಗೆ ಸಂಕಷ್ಟ ಸೆ.28 ರಂದು ಪ್ರದೋಷ್ ಮಾಫಿ ಸಾಕ್ಷಿ ದಾಖಲಿಸಲು ಕೋರ್ಟ್ ಆದೇಶ

• ಉದಯವಾಹಿನಿ, ಬೆಂಗಳೂರು

ರೇಣುಕಾಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರದೋಷ್ ಮಾಫಿ ಸಾಕ್ಷಿ ದಾಖಲಿಸಲು ಸೆ.28ಕ್ಕೆ ಕೋರ್ಟ್ ದಿನಾಂಕ ನಿಗದಿ ಮಾಡಿದೆ. ಪ್ರದೂಷ್ ಮಾಫಿ ಸಾಕ್ಷಿ ತಡೆಯಲು ದರ್ಶನ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದ ಬೆನ್ನಲ್ಲೇ, ಮಾಫಿ ಸಾಕ್ಷಿ ದಾಖಲಿಸಲು 59ನೇ ಸೆಷನ್ಸ್ ಕೋರ್ಟ್ ಆದೇಶ ನೀಡಿದೆ. ಕೋರ್ಟ್ ಆದೇಶದ ಬೆನ್ನಲ್ಲೇ ದರ್ಶನ್‌ಗೆ ಸಂಕಷ್ಟ ಎದುರಾಗಿದೆ.

ಮಾಫಿ ಸಾಕ್ಷಿ ಹೇಳಿಕೆ ದಿನಾಂಕ ನಿಗದಿ ಬೆನ್ನಲ್ಲೇ, ಹೈಕೋರ್ಟ್ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್‌ಗೆ ದರ್ಶನ್ ಮೇಲ್ಮನವಿ ಸಲ್ಲಿಸಲು ಮುಂದಾಗಿದ್ದಾರೆ. ಈ ಬಗ್ಗೆ ದರ್ಶನ್ ಪರ ವಕೀಲರು, ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಕೆ ಮಾಡಲು ನಿರ್ಧರಿಸಿದ್ದೇವೆ ಎಂದು ವಿಚಾರಣಾ ನ್ಯಾಯಾಲಯಕ್ಕೆ ಮಾಹಿತಿ ನೀಡಿದ್ದಾರೆ. ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುತ್ತಿರುವುದರಿಂದ ಪ್ರದೂಷ್ ಮಾಫಿ ಸಾಕ್ಷಿ ಹೇಳಿಕೆ ಮುಂದೂಡಲು ಮನವಿ ಮಾಡಿದ್ದು, ಮನವಿಯನ್ನು ನ್ಯಾಯಾಲಯ ತಳ್ಳಿಹಾಕಿದೆ. ಇದಕ್ಕೆ ನ್ಯಾಯಾಲಯ, ಸುಪ್ರೀಂ ಕೋರ್ಟ್ ಟ್ರಯಲ್‌ಗೆ ಟೈಂ ಬಾಂಡ್ ಹಾಕಿದೆ. ಹೀಗಾಗಿ ದಿನಾಂಕ ಮುಂದೂಡಲು ಸಾಧ್ಯವಿಲ್ಲ ಎಂದು ದರ್ಶನ್ ಪರ ವಕೀಲರಿಗೆ ತಿಳಿಸಿದೆ.

# SIR ಪ್ರಕ್ರಿಯೆ ರದ್ದುಪಡಿಸಿ, ಹೊಸದಾಗಿ ಪಟ್ಟಿ ಪರಿಷ್ಕರಿಸಿ- ಸಿಎಂ ಎಂಎಲ್‌ಸಿ ಶಿವಕುಮಾರ್ ಆಗ್ರಹ

### ಕರ್ನಾಟಕದಲ್ಲೂ 1 ಕೋಟಿಗೂ ಅಧಿಕ ಮತಗಳನ್ನು ತೆಗೆದುಹಾಕಲಾಗಿದೆ. ರಾಜ್ಯದ ಮುಖ್ಯಮಂತ್ರಿಯಾಗಿ ಈ ಪ್ರಕ್ರಿಯೆಗೆ ಸಹಕಾರ ನೀಡಿದ್ದೇನೆ

• ಉದಯವಾಹಿನಿ, ಬೆಂಗಳೂರು

1 ಮತದಾನದ ಹಕ್ಕು ಎಂದರೆ ಬದುಕುವ
2 ಸಾಮಾನ್ಯ ಜನರ ಮತದಾನದ ಹಕ್ಕನ್ನು
3 ಈ ಪ್ರಕ್ರಿಯೆ ಸರಿಯಾಗಿ ನಡೆಯುತ್ತಿಲ್ಲ

ಪ್ರಜಾಪ್ರಭುತ್ವ ಮತ್ತು ಪ್ರತಿಯೊಬ್ಬ ನಾಗರಿಕನ ಮತದಾನದ ಹಕ್ಕನ್ನು ರಕ್ಷಿಸುವ ನಿಟ್ಟಿನಲ್ಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ತಕ್ಷಣ ರಾಜೀನಾಮೆ ನೀಡಬೇಕು. ಪ್ರಸ್ತುತ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ರದ್ದುಪಡಿಸಿ, ಹೊಸದಾಗಿ ಮತದಾರರ ಪಟ್ಟಿ ಪರಿಷ್ಕರಿಸಬೇಕು ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ಆಗ್ರಹಿಸಿದರು.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ಮತದಾನದ ಹಕ್ಕು ಎಂದರೆ ಬದುಕುವ ಹಕ್ಕು. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ದೇಶದ ಮತದಾನದ ಹಕ್ಕಿನ ಪರವಾಗಿ ಬೆಂಗಳೂರಿನಿಂದಲೇ ಧ್ವನಿ ಎತ್ತಿದ್ದಾರೆ.

ಕೇಂದ್ರ ಸರ್ಕಾರ ಹೇಗೆ ಮತಗಳ್ಳತನ ಮಾಡಿ, ಮತದಾರರ ಹಕ್ಕನ್ನು ಕಸಿಯುತ್ತಿದೆ ಎಂದು ಬಹಿರಂಗಪಡಿಸಿದ್ದಾರೆ. ಸಾಮಾನ್ಯ ಜನರ ಮತದಾನದ ಹಕ್ಕನ್ನು ರಾಜಕೀಯ ಉದ್ದೇಶಗಳಿಗಾಗಿ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿದರು. ಈ ಅಕ್ರಮ ವ್ಯವಸ್ಥೆ ಮೂಲಕ ಈಗಾಗಲೇ ಪಶ್ಚಿಮ ಬಂಗಾಳ, ಬಿಹಾರ ಸೇರಿದಂತೆ ಹಲವು ರಾಜ್ಯಗಳಲ್ಲಿ ಸರ್ಕಾರವನ್ನು ನುಂಗಿದ್ದಾರೆ. ಈಗ ಕರ್ನಾಟಕ ಸೇರಿದಂತೆ ಎಲ್ಲೆಡೆಯೂ ಇದನ್ನು ಮಾಡಲು ಪ್ರಯತ್ನಿಸಲಾಗುತ್ತಿದೆ.

ಕರ್ನಾಟಕದಲ್ಲೂ 1 ಕೋಟಿಗೂ ಅಧಿಕ ಮತಗಳನ್ನು ತೆಗೆದುಹಾಕಲಾಗಿದೆ. ರಾಜ್ಯದ ಮುಖ್ಯಮಂತ್ರಿಯಾಗಿ ಈ ಪ್ರಕ್ರಿಯೆಗೆ ಸಹಕಾರ ನೀಡಿದ್ದೇನೆ. ಆದರೆ ಈ ಪ್ರಕ್ರಿಯೆ ಸರಿಯಾಗಿ ನಡೆಯುತ್ತಿಲ್ಲ. ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ ಮತ್ತಷ್ಟು ಸಮಯ ನೀಡುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಬುಧವಾರ ಮನವಿ ಮಾಡಿದ್ದೇನೆ. ಮತದಾರರ ಪಟ್ಟಿ ಅಂತಿಮವಾಗಲಿ, ನಂತರ ಇದರ ವಿರುದ್ಧ ಯಾವ ರೀತಿ ಧ್ವನಿ ಎತ್ತಿ ಹೋರಾಟ ಮಾಡಬೇಕು ಎಂದು ತಿಳಿಸುವೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

ಚುನಾವಣಾ ಆಯೋಗದೊಳಗಿನ ಸದಸ್ಯರ ನಡುವೆ ಭಿನ್ನಾಭಿಪ್ರಾಯಗಳು ವ್ಯಕ್ತವಾಗುತ್ತಿದ್ದು, ಆಯೋಗದ ಸ್ವಾಯತ್ತ ಸ್ಥಾನವನ್ನು ದುರುಪಯೋಗಪಡಿಸಿ ಕೊಳ್ಳಲಾಗುತ್ತಿದೆ. ಬಹುಮತದ (ಮೂರನೇ ಎರಡರಷ್ಟು) ಸದಸ್ಯರ ಬೆಂಬಲ ಸಿಗದೇ ಏಕಪಕ್ಷೀಯವಾಗಿ ಯಾವುದೇ ಘೋಷಣೆ, ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ. ಚುನಾವಣಾ ಆಯೋಗದ ಹೆಸರಿನಲ್ಲಿ ರಾಜ್ಯಗಳ ಅಧಿಕಾರಿಗಳನ್ನು ಬೆದರಿಸಲು ಸಾಧ್ಯವಿಲ್ಲ.

ಮತದಾರರ ಪಟ್ಟಿಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಫಾರ್ಮ್ 6, 7 ಮತ್ತು 8 ಸೇರಿದಂತೆ ಅನೇಕ ಅರ್ಜಿಗಳಿದ್ದು, ಈ ಪ್ರಕ್ರಿಯೆ ಪ್ರಜಾಸತಾತ್ಮಕವಾಗಿಲ್ಲ. ಇಲ್ಲಿ ಅನಕ್ಷರಸ್ಥರು ಮತ್ತು ದುರ್ಬಲ ವರ್ಗಗಳ ಜನರ ಧ್ವನಿ ಹತ್ತಿಕ್ಕುವ ಕೆಲಸವಾಗುತ್ತಿದೆ. ಈವರೆಗೂ ಆಗಿರುವ ಪ್ರಕ್ರಿಯೆಯನ್ನು ನಾವು ಖಂಡಿಸುತ್ತೇವೆ. ಇದು ಕೇವಲ ಅಭಿಪ್ರಾಯದ ವಿಚಾರವಲ್ಲ. ಇದು ಮೂಲಭೂತ ಹಕ್ಕಿನ ವಿಚಾರ. ಇದು ಸಾಮಾನ್ಯ ಜನರ ಧ್ವನಿ ಎಂದು ಹೇಳಿದರು. ಚುನಾವಣಾ ಆಯೋಗದ ಹೆಸರಿನಲ್ಲಿ ವಿವಿಧ ರಾಜ್ಯಗಳ ಅಧಿಕಾರಿಗಳಿಗೆ ಒತ್ತಡ ಅಥವಾ ಬೆದರಿಕೆ ಹಾಕುವುದು ಸರಿಯಲ್ಲ. ಈ ವಿಚಾರವನ್ನು ಸಂಸತ್ತಿನಲ್ಲೂ ಸೇರಿದಂತೆ ದೊಡ್ಡ ಮಟ್ಟದಲ್ಲಿ ಚರ್ಚಿಸಬೇಕಾಗಿದೆ. ಪ್ರತಿಯೊಂದು ಮತಕ್ಕೂ ಅದರ ಹಕ್ಕನ್ನು ಖಚಿತಪಡಿಸುವ ನಿಟ್ಟಿನಲ್ಲಿ ಪರಿಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಬೇಕು ಮತ್ತು ಮತದಾರರ ದತ್ತಾಂಶವನ್ನು ಮರುಪರಿಶೀಲಿಸಬೇಕು ಎಂದು ತಿಳಿಸಿದರು.

> ನೈತಿಕ ಹೊಣೆಗಾರಿಕೆಯನ್ನು ಅರಿತು ಮುಖ್ಯ ಚುನಾವಣಾ ಆಯುಕ್ತ ಸ್ವಯಂಪ್ರೇರಿತವಾಗಿ ರಾಜೀನಾಮೆ ನೀಡುವುದು ಉತ್ತಮ. ಹೊಸ ಎಸ್‌ಐಆರ್ ಪ್ರಕ್ರಿಯೆ ನಡೆಸಬೇಕು ಮತ್ತು ಪ್ರತಿಯೊಬ್ಬ ನಾಗರಿಕನ ಮತದಾನದ ಹಕ್ಕನ್ನು ಖಚಿತಪಡಿಸಬೇಕು ಎಂದು ಒತ್ತಾಯಿಸಿದರು.
> -ಸಿಎಂ ಡಿ ಕೆ ಶಿವಕುಮಾರ್

**ದೊಡ್ಡಮಟ್ಟದಲ್ಲಿ ಚರ್ಚೆ**

ನಾವು ಕಾಂಗ್ರೆಸ್ ಮತ ಅಥವಾ ಬಿಜೆಪಿ ಮತದ ಬಗ್ಗೆ ಮಾತನಾಡುತ್ತಿಲ್ಲ. ಪ್ರತಿಯೊಬ್ಬರಿಗೂ ಮತದಾನದ ಹಕ್ಕಿದೆ. ಅದು ಬದುಕುವ ಹಕ್ಕಿಗೆ ಸಮಾನ. ಯಾರ ಹಕ್ಕನ್ನೂ ಹತ್ತಿಕ್ಕಲು ಸಾಧ್ಯವಿಲ್ಲ. ನಮ್ಮ ರಾಜ್ಯದಲ್ಲಿ ಈ ವಿಚಾರವಾಗಿ ದೊಡ್ಡಮಟ್ಟದಲ್ಲಿ ಚರ್ಚೆ ಮಾಡಬೇಕು

> ಈಗ ಕರೆಯಲಾಗಿರುವ ವಿಶೇಷ ಅಧಿವೇಶನ ಕೇವಲ ಬರ ಹಾಗೂ ಕಸ್ತೂರಿ ರಂಗನ್ ವರದಿ ಕುರಿತು ಕರೆಯಲಾಗಿದೆ. ಇಂದು ಅಧಿವೇಶನ ಮುಗಿದ ಬಳಿಕ ಪರಿಶೀಲನೆ ಮಾಡುವೆ. ಇದು ಗಂಭೀರ ವಿಷಯವಾಗಿದೆ ಎಂದು ಅವರು ಹೇಳಿದರು. -ಸಿಎಂ ಡಿ ಕೆ ಶಿವಕುಮಾರ್

## 'ಬೆಂಗ್ಳೂರಲ್ಲಿ ಆಫೀಸಲ್ಲಿ ಕೂತು ಧಿಮಾಕು ಮಾಡ್ತಿದ್ದೀರಾ, ನಿಮ್ಮನ್ನ ಗುಲ್ಬರ್ಗಕ್ಕೆ ಟ್ರಾನ್ಸ್ ಫರ್ ಮಾಡಿಸ್ತೀನಿ

• ಉದಯವಾಹಿನಿ, ಬೆಂಗಳೂರು

ಪೌರಾಡಳಿತ ಸಚಿವ ಹೆಚ್ ಸಿ ಬಾಲಕೃಷ್ಣ ಇಂದು ಮುಂಜಾನೆ ಬೆಂಗಳೂರಿನ ಮಾದನಾಯಕನಹಳ್ಳಿ ನಗರಸಭೆಗೆ ದಿಢೀರ್ ಭೇಟಿ ನೀಡಿ, ಅಲ್ಲಿನ ವಾಸ್ತವ ಸ್ಥಿತಿಗತಿಗಳನ್ನು ಅರಿಯುವ ಪ್ರಯತ್ನ ಮಾಡಿದರು. ಈ ವೇಳೆ ಜನಪರವಾದ ಕೆಲಸ ಸರಿಯಾಗಿ ಮಾಡದಿದ್ದರೆ ನಿಮ್ಮನ್ನು ಗುಲ್ಬರ್ಗಕ್ಕೆ ವರ್ಗಾವಣೆ ಮಾಡಬೇಕಾಗುತ್ತದೆ ಹುಷಾರ್ ಎಂದು ವಾರ್ನಿಂಗ್ ಮಾಡಿದ ಪ್ರಸಂಗ ನಡೆಯಿತು.

ವಾರ್ಡ್‌ಗಳಲ್ಲಿ ಪ್ರತಿನಿತ್ಯ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಪೌರಕಾರ್ಮಿಕರೊಂದಿಗೆ ಮಾತುಕತೆ ನಡೆಸಿ, ಅವರ ದಿನನಿತ್ಯದ ಕಾರ್ಯವೈಖರಿ, ಸಮಸ್ಯೆಗಳು ಹಾಗೂ ಅಗತ್ಯತೆಗಳ ಕುರಿತು ಮಾಹಿತಿ ಪಡೆದರು.

ನಗರಗಳ ಸ್ವಚ್ಛತೆ, ಆರೋಗ್ಯ ಮತ್ತು ಸೌಂದರ್ಯವನ್ನು ಕಾಪಾಡುವ ಪೌರಕಾರ್ಮಿಕರ ಶ್ರೇಯೋಭಿವೃದ್ಧಿಗೆ ಹಾಗೂ ಅವರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಿ ಆತ್ಮಸ್ಥೈರ್ಯ ತುಂಬಲು ಸರ್ಕಾರ ಸದಾ ಬದ್ಧವಾಗಿದೆ ಎಂದು ಸಚಿವರು ಹೇಳಿದರು.

ಜನಸಾಮಾನ್ಯರಿಗೆ ಸ್ಪಂದಿಸುವ, ಪಾರದರ್ಶಕ ಹಾಗೂ ಜನಸ್ನೇಹಿ ಆಡಳಿತ ನೀಡುವುದು ನಮ್ಮ ಸರ್ಕಾರದ ಪ್ರಮುಖ ಧ್ಯೇಯವಾಗಿದೆ.


ಉದಯವಾಹಿನಿ ಚಿತ್ರ

ಈ ನಿಟ್ಟಿನಲ್ಲಿ ಕಚೇರಿಗಳಲ್ಲೇ ಕುಳಿತು ವರದಿ ಪಡೆಯುವುದಕ್ಕಿಂತ, ನೈಜ ಸ್ಥಿತಿಗತಿಗಳನ್ನು ಖುದ್ದಾಗಿ ಪರಿಶೀಲಿಸಿ, ಸಮಸ್ಯೆಗಳನ್ನು ಗುರುತಿಸಿ, ಸ್ಥಳದಲ್ಲಿಯೇ ಕ್ರಮ ಕೈಗೊಳ್ಳುವ ಉದ್ದೇಶದಿಂದ ರಾಜ್ಯಾದ್ಯಂತ ' ನಡೆಸಲು ಮುಂದಾಗಿದ್ದೇವೆ ಎಂದರು. ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಪಟ್ಟಣ ಪಂಚಾಯಿತಿಗಳು, ಪುರಸಭೆಗಳು ಹಾಗೂ ನಗರಸಭೆಗಳಿಗೆ ಭೇಟಿ ನೀಡಿ, ಆಡಳಿತ ವ್ಯವಸ್ಥೆಯ ಕಾರ್ಯಕ್ಷಮತೆಯನ್ನು ಪರಿಶೀಲಿಸಿ, ಅಗತ್ಯ ಸುಧಾರಣೆಗಳನ್ನು ಕೈಗೊಂಡು, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಮೂಲಾಗ್ರ ಬದಲಾವಣೆ ತರಲು ಪ್ರಾಮಾಣಿಕವಾಗಿ ಶ್ರಮಿಸಲಾಗುವುದು ಎಂದು ಹೇಳಿದ್ದಾರೆ.

## ನಂದಿನಿ ಹಾಲಿನ ದರ ಪ್ರತಿ ಲೀಟರ್‌ಗೆ 5 ರೂ. ಹೆಚ್ಚಳಕ್ಕೆ ಸರ್ಕಾರ ಸಮ್ಮತಿ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ನಂದಿನಿ ಹಾಲಿನ ದರವನ್ನು ಪ್ರತಿ ಲೀಟರ್‌ಗೆ 5 ರೂಪಾಯಿಗಳಷ್ಟು ಹೆಚ್ಚಳ ಮಾಡಲು ರಾಜ್ಯ ಸರ್ಕಾರ ಅಂತಿಮವಾಗಿ ಸಮ್ಮತಿ ಸೂಚಿಸಿದೆ. ಶೀಘ್ರದಲ್ಲೇ ಈ ಕುರಿತು ಅಧಿಕೃತ ಆದೇಶ ಹೊರಬೀಳುವ ಸಾಧ್ಯತೆಯಿದೆ. ಹಾಲು ಉತ್ಪಾದನಾ ಹಾಗೂ ನಿರ್ವಹಣಾ ವೆಚ್ಚಗಳು ತೀವ್ರವಾಗಿ ಏರಿಕೆಯಾಗಿರುವ ಹಿನ್ನೆಲೆಯಲ್ಲಿ, ನಂದಿನಿ ಹಾಲಿನ ಮಾರಾಟ ದರವನ್ನು ಹೆಚ್ಚಿಸಬೇಕು ಎಂದು ರಾಜ್ಯದ 16 ಹಾಲು ಒಕ್ಕೂಟಗಳ ಸಂಘವು ಸರ್ಕಾರಕ್ಕೆ ತೀವ್ರ ಒತ್ತಡ ಹೇರಿತ್ತು. ಆರಂಭದಲ್ಲಿ ಪ್ರತಿ ಲೀಟರ್‌ಗೆ ಬರೋಬ್ಬರಿ 10 ರೂ.ಗಳಷ್ಟು ಏರಿಕೆ ಮಾಡುವಂತೆ ಒಕ್ಕೂಟಗಳು ಬೇಡಿಕೆ ಇಟ್ಟಿದ್ದವು. ಒಂದು ವೇಳೆ ದರ ಏರಿಕೆ ಮಾಡದಿದ್ದರೆ 'ವಿಧಾನಸೌಧ ಚಲೋ' ನಡೆಸುವುದಾಗಿಯೂ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದವು.



ಉದಯವಾಹಿನಿ ಚಿತ್ರ

ಒಕ್ಕೂಟಗಳ ಈ ಎಚ್ಚರಿಕೆ ಹಾಗೂ ಹಾಲು ಉತ್ಪಾದಕರ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಿರುವ ಸರ್ಕಾರ, ಅಂತಿಮವಾಗಿ ಮಧ್ಯಮ ಮಾರ್ಗವನ್ನು ಕಂಡುಕೊಂಡಿದೆ. ಗ್ರಾಹಕರಿಗೆ ವಿಪರೀತ ಆರ್ಥಿಕ ಹೊರೆಯೂ ಆಗಬಾರದು ಹಾಗೂ ರೈತರಿಗೂ ಮತ್ತು ಉತ್ಪಾದಕರಿಗೂ ಅನುಕೂಲವಾಗಬೇಕು ಎಂಬ ಉದ್ದೇಶದಿಂದ ಸರ್ಕಾರವು ಹಾಲಿನ ದರವನ್ನು ಲೀಟರ್‌ಗೆ 4 ರಿಂದ 5 ರೂ.ಗಳವರೆಗೆ ಹೆಚ್ಚಳ ಮಾಡಲು ನಿರ್ಧರಿಸಿದೆ. ಇತ್ತೀಚೆಗಷ್ಟೇ ಹಾಲು ಒಕ್ಕೂಟಗಳ ನಿಯೋಗವು ಸಿಎಂ ಡಿಕೆ ಶಿವಕುಮಾರ್ ಅವರನ್ನು ಭೇಟಿಯಾಗಿ ನಂದಿನಿ ಹಾಲಿನ ಖರೀದಿ ಮತ್ತು ಮಾರಾಟ ದರವನ್ನು ಪ್ರತಿ ಲೀಟರ್‌ಗೆ 8 ರೂ. ಯಿಂದ 10 ರೂ.ನಷ್ಟು ಏರಿಕೆ ಮಾಡುವಂತೆ ಮನವಿ ಸಲ್ಲಿಸಿತ್ತು. ಇದರ ಬೆನ್ನಲ್ಲೇ ಸಿಎಂ 16 ಜಿಲ್ಲೆಗಳ ಹಾಲು ಸಹಕಾರ ಸಂಘಗಳ ಬೇಡಿಕೆಗೆ ಒಪ್ಪಿಗೆ ಸೂಚಿಸಿದ್ದು, ಶೀಘ್ರದಲ್ಲೇ ಹಾಲಿನ ದರ ಲೀ.ಗೆ 4-5 ರೂ. ಹೆಚ್ಚಳವಾಗುವ ಸಾಧ್ಯತೆಯಿದೆ.

**ಗ್ರಾಹಕರ ಜೇಬಿಗೆ ಕತ್ತರಿ**

ಹಾಲು ಉತ್ಪಾದಕ ರೈತರ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ದರ ಏರಿಕೆ ಅನಿವಾರ್ಯವಾಗಿದೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿದ್ದು, ಪರಿಷ್ಕೃತ ದರವು ಶೀಘ್ರದಲ್ಲೇ ಗ್ರಾಹಕರ ಜೇಬಿಗೆ ಕತರಿ ಬೀಳಲಿದೆ.

## ರಾಜ್ಯದಲ್ಲಿ ಇನ್ಶೂರೆನ್ಸ್ ವಂಚನೆ ಜಾಲಕ್ಕೆ ಬ್ರೇಕ್ ಹಾಕಲು ವಿಶೇಷ ತನಿಖಾ ತಂಡ ರಚನೆ

• ಉದಯವಾಹಿನಿ, ಬೆಂಗಳೂರು

ಇನ್ಶೂರೆನ್ಸ್ ಕಂಪನಿಗಳಿಗೆ ವಂಚನೆ ಎಸಗುವ ಪ್ರಕರಣಗಳಿಗೆ ಬ್ರೇಕ್ ಹಾಕಲು ರಾಜ್ಯ ಸರ್ಕಾರ ಮಹತ್ವದ ಹೆಜ್ಜೆಯಿಟ್ಟಿದೆ. ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಇನ್ಶೂರೆನ್ಸ್ ಕ್ರೈಮ್ ಸಂಬಂಧಿಸಿದ ಪ್ರಕರಣಗಳ ತನಿಖೆಗೆ ವಿಶೇಷ ತನಿಖಾ ತಂಡವನ್ನು ರಚಿಸಿ ಒಳಾಡಳಿತ ಇಲಾಖೆ ಅಧಿಕೃತ ಆದೇಶ ಹೊರಡಿಸಿದೆ.

ವಿಮಾ ಕಂಪನಿಗಳಿಂದ ಬರುವ ನಕಲಿ ಕ್ಲೇಮ್ ವಂಚನೆಯ ಪ್ರತಿಯೊಂದು ದೂರುಗಳನ್ನು ನೋಂದಾಯಿಸಿಕೊಂಡು, ಅವುಗಳ ತನಿಖೆ ನಡೆಸುವುದು ಈ ಎಸ್‌ಐಟಿ ತಂಡದ ಮುಖ್ಯ


ಉದಯವಾಹಿನಿ ಚಿತ್ರ

ಉದ್ದೇಶವಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಸರ್ಕಾರ ಹೊರಡಿಸಿರುವ ಆದೇಶದ ಪ್ರಕಾರ, ಈ ಉನ್ನತ ಮಟ್ಟದ ತನಿಖಾ ತಂಡದ ಅಧ್ಯಕ್ಷರಾಗಿ ಬೆಂಗಳೂರಿನ ಅಪರಾಧ ಮತ್ತು ತಾಂತ್ರಿಕ ಸಂಶೋಧನಾ ಸೇವೆಗಳು ಡಿಐಜಿಪಿ ಕಾರ್ಯನಿರ್ವಹಿಸಲಿದ್ದಾರೆ. ಈ ತಂಡದಲ್ಲಿ ಸಿಐಡಿ ಎಸ್‌ಪಿ ಒಬ್ಬರು ಡಿವೈಎಸ್‌ಪಿ ಹಾಗೂ ಮೂವರು ಪೊಲೀಸ್ ಇನ್‌ಸ್ಪೆಕ್ಟರ್‌ಗಳು ಇರಲಿದ್ದಾರೆ. ಅತ್ಯಂತ ಪ್ರಮುಖವಾಗಿ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಸೆಕ್ಷನ್ 2(1)ಅಡಿ ಕರ್ನಾಟಕದ ವ್ಯಾಪ್ತಿಯನ್ನ ಹೊಂದಿರುವಂತೆ ಈ ಎಸ್‌ಐಟಿಯನ್ನು ಅಧಿಕೃತ 'ಪೊಲೀಸ್ ಸ್ಟೇಷನ್' ಎಂದು ಘೋಷಿಸಲಾಗಿದೆ. ಇದರಿಂದಾಗಿ ತನಿಖಾಧಿಕಾರಿಗಳು ತನಿಖೆ ಪೂರ್ಣಗೊಳಿಸಿದ ಬಳಿಕ ಸೆಕ್ಷನ್ 193ರ ಅಡಿ ನೇರವಾಗಿ ಸಂಬಂಧಪಟ್ಟ ನ್ಯಾಯಾಲಯಗಳಿಗೆ ಅಂತಿಮ ವರದಿಯನ್ನು ಸಲ್ಲಿಸುವ ಸಂಪೂರ್ಣ ಅಧಿಕಾರವನ್ನು ಹೊಂದಿರಲಿದ್ದಾರೆ. ಈ ತನಿಖಾ ಪ್ರಕ್ರಿಯೆಯು ಬೆಂಗಳೂರು ಪೊಲೀಸ್ ಪ್ರಧಾನ ಕಚೇರಿಯ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಅವರ ನೇರ ಮೇಲ್ವಿಚಾರಣೆಯಲ್ಲಿ ನಡೆಯಲಿದೆ.

## 30 ಸಚಿವರು ಕನ್ನಡಿಯಲ್ಲಿ ತಮ್ಮ ಮುಖ ನೋಡಿಕೊಳ್ಳಿ, ಆಗ ನಿಮ್ಮ 100 ದಿನಗಳ ಸಾಧನೆ ಗೊತ್ತಾಗುತ್ತದೆ: ಸುನೀಲ್ ಕುಮಾರ್

• ಉದಯವಾಹಿನಿ, ಬೆಂಗಳೂರು

ದೊಡ್ಡ ಕನ್ನಡಿಯಲ್ಲಿ ಮೂವತ್ತು ಸಚಿವರು ಮುಖ ನೋಡಿಕೊಳ್ಳಲಿ. ಆಗ ನಿಮ್ಮ ನೂರು ದಿನಗಳ ಸಾಧನೆ ಗೊತ್ತಾಗುತ್ತದೆ ಎಂದು ಶಾಸಕ ಸುನೀಲ್ ಕುಮಾರ್ ವಾಗ್ದಾಳಿ ನಡೆಸಿದರು.

ವಿಧಾನಸಭೆಯಲ್ಲಿ ಬರದ ಚರ್ಚೆ ವೇಳೆ ಮಾತನಾಡಿದ ಅವರು, ಇದು ರೈತ ಪರ ಸರ್ಕಾರ ಅಲ್ಲ. ಇದು ರಿಯಲ್ ಎಸ್ಟೇಟ್ ಸರ್ಕಾರ. ಬರ ಅಂತ ಬಂದಾಗ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕಾಗಿತ್ತು. ಆದರೆ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಸರ್ಕಾರದ ಆದ್ಯತೆ ಯಾವ ರೀತಿ ಇದೆ ಅಂತ ಜನರಿಗೆ ಗೊತ್ತಾಗಿದೆ. ಜನ್ಮದಾತವಾಗಿ ರೈತರಾಗಿರೋರಿಗೆ ರೈತರ ಸಂಕಷ್ಟ ಗೊತ್ತಿರುತ್ತದೆ. ಬೈ ಬರ್ತ್ ರೈತ ಅಂತ ಹೇಳುವ ಸಿಎಂಗೆ ರೈತರ ಸಂಕಷ್ಟ ಇನ್ನು ಅರ್ಥ ಆಗಿಲ್ಲ ಅನಿಸುತ್ತದೆ ಎಂದು ಟೀಕಿಸಿದರು.

ರೈತ ಗೀತೆ ಕೊಟ್ಟಿದ್ದು ಯಡಿಯೂರಪ್ಪನವರು. ಬರ ಸಂಧರ್ಭದಲ್ಲಿ ರೈತರಿಗೆ ಧೈರ್ಯ ತುಂಬಬೇಕಾಗಿತ್ತು. ಈ ಸರ್ಕಾರದಲ್ಲಿ ಅನ್ನದಾತರನ್ನು ಕೇಳುವರಿಲ್ಲ ಅನ್ನೋ ರೀತಿ ಆಗಿದೆ. ಹಂತ ಹಂತವಾಗಿ ಬರ ತಾಲ್ಲೂಕು ಘೋಷಣೆ ನೋಡಿದರೆ, ಯಾರದ್ದೋ ಒತ್ತಡಕ್ಕೆ ಮಣಿದು ಘೋಷಣೆ ಮಾಡ್ತಿದ್ದಾರೆ ಅನಿಸುತ್ತದೆ. ಸಿಎಂ ಹೆಲಿಕಾಪ್ಟರ್‌ನಲ್ಲಿ ಪ್ರವಾಸ ಮಾಡ್ತಾರೆ. ನೂರು ದಿನದಲ್ಲಿ ಮಂತ್ರಿ ಮಂಡಲ ಎಲ್ಲಿದೆ ಎಂಬುದು ಗೊತ್ತಿಲ್ಲ. ಬರ ತಾಲ್ಲೂಕು ಅಂತ ಘೋಷಣೆ ಮಾಡಿ ಅಂತ ಶಾಸಕರು ರಾಜೀನಾಮೆ ನೀಡ್ತಾರೆ. ಇದನ್ನು ನೋಡಿದ್ರೆ ರಿಯಲ್ ಎಸ್ಟೇಟ್ ಸರ್ಕಾರ ಎಂಬುದು ನಿಮ್ಮ ನಡವಳಿಕೆಯಿಂದ ಗೊತ್ತಾಗ್ತಿದೆ.


ಉದಯವಾಹಿನಿ ಚಿತ್ರ

ನಿಮ್ಮ ಸರ್ಕಾರ ಅಧಿಕಾರ ಬದಲಾವಣೆ ವಿಚಾರವಾಗಿ ಎಲ್ಲರೂ ದೆಹಲಿಯಲ್ಲಿ ಇದ್ರು. ಮೂರು ತಿಂಗಳ ಹಿಂದೆನೇ ಬರ ಬರುತ್ತೆ ಅಂತ ಎಚ್ಚರಿಕೆ ಕೊಟ್ಟಾಗ ನೀವು ಇರಲಿಲ್ಲ ಎಂದು ವಾಗ್ದಾಳಿ ನಡೆಸಿದರು. ತಮಿಳುನಾಡಿನಲ್ಲಿ ನಿಮ್ಮಂತ ಜ್ಞಾನ ಬಂಡಾರದ ಸಿಎಂ ಇಲ್ಲ. ಆದರೆ ಅಲ್ಲಿ ಬರ ಬಗ್ಗೆ ಹಲವು ಕ್ರಮ ಕೈಗೊಂಡಿದ್ದಾರೆ. ಬರ ಬಗ್ಗೆ ಕಮಿಟಿ ಮಾಡ್ತಾರೆ. ಅವರ ಕಮಿಟಿಯವರು ಬರ ಬರುತ್ತೆ ಅಂತ ಕಾವೇರಿ ವಿಚಾರದಲ್ಲಿ ಕೋರ್ಟ್ ಹೋದ್ರು. ಅದರಿಂದಲೇ ತೀರ್ಪು ಅವರ ಪರವಾಗಿ ಬಂತು.

# ಇನ್ನೆರಡು ವಾರದಲ್ಲಿ ನಮ್ಮ ಮೆಟ್ರೋ ಪಿಂಕ್ ಲೈನ್ ಆರಂಭ

### ನಮ್ಮ ಮೆಟ್ರೋ ಪಿಂಕ್ ಲೈನ್ ಕಾಮಗಾರಿ ಅಂತಿಮ ಹಂತಕ್ಕೆ ತಲುಪಿದೆ. ಇದಕ್ಕೆ ಪೂರಕವಾಗಿ ಹೊಸ ರೈಲುಗಳ ಚಾಲನೆಗೆ ರೈಲ್ವೆ ಮಂಡಳಿ ಅಧಿಕೃತ ಅನುಮೋದನೆ

• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೋ ಪಿಂಕ್ ಲೈನ್ ಕಾಮಗಾರಿ ಅಂತಿಮ ಹಂತಕ್ಕೆ ತಲುಪಿದ್ದು, ಮುಂದಿನ ಎರಡು ವಾರಗಳಲ್ಲಿ ಪ್ರಾಯೋಗಿಕ ಸಂಚಾರ ಅಥವಾ ಕಾರ್ಯಾಚರಣೆ ಆರಂಭವಾಗುವ ಸಾಧ್ಯತೆ ದಟ್ಟವಾಗಿದೆ. ಇದಕ್ಕೆ ಪೂರಕವಾಗಿ ಹೊಸ ರೈಲುಗಳ ಚಾಲನೆಗೆ ರೈಲ್ವೆ ಮಂಡಳಿ ಅಧಿಕೃತ ಅನುಮೋದನೆ ನೀಡಿದ್ದು, ಅಕ್ಟೋಬರ್ ಮಧ್ಯಭಾಗದಲ್ಲಿ ಈ ಮಾರ್ಗ ಉದ್ಘಾಟನೆಯಾಗುವ ಸಾಧ್ಯತೆ ದಟ್ಟವಾಗಿದೆ.

1 ಪ್ರತಿ 10 ನಿಮಿಷಕ್ಕೊಂದು ರೈಲು
2 ಪ್ರತಿ 6 ನಿಮಿಷಕ್ಕೊಂದು ರೈಲು
3 ಮೊದಲ ಹಂತದ ಸಿಗ್ನಲಿಂಗ್

ಪಿಂಕ್ ಲೈನ್‌ನ ಮೊದಲ ಹಂತವಾಗಿ ಬನ್ನೇರುಘಟ್ಟ ರಸ್ತೆಯ ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗಿನ (ಸ್ವಾಗತ್ ಕ್ರಾಸ್) 7.5 ಕಿಲೋಮೀಟರ್ ಉದ್ದದ ಎಲಿವೇಟೆಡ್ (ಮೇಲ್ಸೇತುವೆ) ಮಾರ್ಗ ಸಾರ್ವಜನಿಕ ಮುಕ್ತವಾಗಲಿದೆ.

**ಈ ಮಾರ್ಗದಲ್ಲಿ ಒಟ್ಟು 6 ನಿಲ್ದಾಣಗಳು ಇರಲಿವೆ:** ಕಾಳೇನ ಅಗ್ರಹಾರ, ಹುಳಿಮಾವು, ಐಐಎಂಬಿ, ಜೆ.ಪಿ. ನಗರ 4ನೇ ಹಂತ, ಜಯದೇವ ಆಸ್ಪತ್ರೆ



ಉದಯವಾಹಿನಿ ಚಿತ್ರ

(ಇಲ್ಲಿ ಹಳದಿ ಮಾರ್ಗಕ್ಕೆ ಇಂಟರ್‌ಚೇಂಜ್ ಸೌಲಭ್ಯವಿದೆ) ಹಾಗೂ ತಾವರೆಕೆರೆ.ಮುಂದುವರೆದು, ಮೊದಲ ಹಂತದ ಎಲಿವೇಟೆಡ್ ಮಾರ್ಗ ಮುಕ್ತಾಯವಾಗುವ ತಾವರೆಕೆರೆಯಿಂದ (ಸ್ವಾಗತ್ ಕ್ರಾಸ್) ನಾಗವಾರದವರೆಗೆ ಒಟ್ಟು 13.92 ಕಿಲೋಮೀಟರ್ ಉದ್ದದ ಸುರಂಗ ಮಾರ್ಗ ಇದಾಗಿದೆ. **ಈ ಬೃಹತ್ ಸುರಂಗ ಮಾರ್ಗದಲ್ಲಿ ಒಟ್ಟು 12 ಅಂಡರ್‌ಗ್ರೌಂಡ್ ನಿಲ್ದಾಣಗಳು ಬರಲಿವೆ:** ಡೈರಿ ಸರ್ಕಲ್, ಲಕ್ಕಸಂದ್ರ, ಲ್ಯಾಂಗ್‌ಫೋರ್ಡ್ ಟೌನ್, ರಾಷ್ಟ್ರೀಯ ಮಿಲಿಟರಿ ಶಾಲೆ, ಎಂ.ಜಿ. ರಸ್ತೆ (ಇಲ್ಲಿ ನೇರಳೆ ಮಾರ್ಗಕ್ಕೆ ಪ್ರಮುಖ ಇಂಟರ್‌ಚೇಂಜ್ ಕಲ್ಪಿಸುತ್ತದೆ), ಶಿವಾಜಿನಗರ, ಕಂಟೋನ್ಮೆಂಟ್ ರೈಲ್ವೆ ನಿಲ್ದಾಣ, ಭಾರತೀಯ ರೈಲ್ವೆ ಸಂಪರ್ಕ ಪಾಟರ್ಸ್ ಟೌನ್, ಟ್ಯಾನರಿ ರಸ್ತೆ, ವೆಂಕಟೇಶಪುರ, ಅರೇಬಿಕ್ ಕಾಲೇಜ್, ನಾಗವಾರ (ಅಂತಿಮ ನಿಲ್ದಾಣವಾಗಿದ್ದು, ಇಲ್ಲಿಂದ ವಿಮಾನ ನಿಲ್ದಾಣದ ಬ್ಲೂ ಲೈನ್‌ಗೆ ಸಂಪರ್ಕ ಸಿಗಲಿದೆ).

ಕೆಲವು ದಿನಗಳ ಹಿಂದಷ್ಟೇ ನಮ್ಮ ಮೆಟ್ರೋ ಪಿಂಕ್ ಲೈನ್ ಮಾರ್ಗದ ಕಾರ್ಯಚಾರಣೆಯ ಮೊದಲ ಹಂತದ ಸಿಗ್ನಲಿಂಗ್ ವ್ಯವಸ್ಥೆಗೆ ಸಂಬಂಧಿಸಿದಂತೆ ಸ್ವತಂತ್ರ ತನಿಖಾ ಸಂಸ್ಥೆಯಿಂದ 'ಇಂಡಿಪೆಂಡೆಂಟ್ ಸೇಫ್ಟಿ ಅಸೆಸರ್' ಪ್ರಮಾಣಪತ್ರ ಲಭ್ಯವಾಗಿತ್ತು. ಇದರ ಬೆನ್ನಲ್ಲೇ, ಇದೀಗ ಬಿಇಎಂಎಲ್ ನಿರ್ಮಿತ ಕೋಚ್‌ಗಳ ಓಟಕ್ಕೂ ರೈಲ್ವೆ ಮಂಡಳಿ ತಾತ್ಕಾಲಿಕ ಮಂಜೂರಾತಿ ನೀಡಿದೆ. ಮತ್ತೊಂದೆಡೆ, ಬಿಎಂಆರ್‌ಸಿಎಲ್ ಹಿರಿಯ ಅಧಿಕಾರಿಗಳ ಮಾಹಿತಿಯ ಪ್ರಕಾರ, ಈ ಇಡೀ ಸುರಂಗ ಮಾರ್ಗದಲ್ಲಿ ರೈಲುಗಳ ಪ್ರಾಯೋಗಿಕ ಸಂಚಾರ ಮುಂದಿನ ವರ್ಷದ ಆರಂಭದಲ್ಲಿ ನಡೆಯಲಿದೆ. ಎಲ್ಲಾ ಸುರಕ್ಷತಾ ತಪಾಸಣೆಗಳು ಮುಗಿದು 2027ರ ಜೂನ್ ಅಥವಾ ಜುಲೈ ವೇಳೆಗೆ ಈ ಸುರಂಗ ಮಾರ್ಗವು ಸಾರ್ವಜನಿಕ ಸಂಚಾರಕ್ಕೆ ಮುಕ್ತವಾಗುವ ಸಾಧ್ಯತೆ ಇದೆ. ಒಟ್ಟಾರೆಯಾಗಿ, ಈ ಸುರಂಗ ಮಾರ್ಗವು ಪೂರ್ಣಗೊಂಡರೆ ಬನ್ನೇರುಘಟ್ಟ ರಸ್ತೆಯಿಂದ ನೇರವಾಗಿ ಎಂ.ಜಿ. ರಸ್ತೆ ಮತ್ತು ನಾಗವಾರಕ್ಕೆ ಕೇವಲ 25-30 ನಿಮಿಷಗಳಲ್ಲಿ ತಲುಪಬಹುದು.

> ಅದರಂತೆ, ಅಕ್ಟೋಬರ್ ಮೊದಲ ವಾರದಲ್ಲಿ 2 ದಿನಗಳ ಕಾಲ ಮೆಟ್ರೋ ರೈಲ್ವೆ ಸುರಕ್ಷತಾ ಆಯುಕ್ತರ ತಂಡವು ಅಂತಿಮ ತಪಾಸಣೆ ನಡೆಸಲಿದ್ದು, ಇದಾದ ತಕ್ಷಣ ರಾಜ್ಯ ಮತ್ತು ಕೇಂದ್ರ ಸರ್ಕಾರದ ಒಪ್ಪಿಗೆ ಪಡೆದು ಅಕ್ಟೋಬರ್ ಎರಡನೇ ವಾರ ಅಥವಾ ಮಧ್ಯಭಾಗದಲ್ಲಿ ವಾಣಿಜ್ಯ ಸಂಚಾರ ಆರಂಭವಾಗಲಿದೆ.

**6 ನಿಮಿಷಕ್ಕೊಂದು ರೈಲು ಸಂಚರಿಸಲಿದೆ**

ಏತನ್ಮಧ್ಯೆ, ಆರಂಭಿಕ ಹಂತದಲ್ಲಿ ಬಿಎಂಆರ್‌ಸಿಎಲ್ ಈ ಮಾರ್ಗದಲ್ಲಿ ಒಟ್ಟು 6 ರೈಲುಗಳನ್ನು ಕಾರ್ಯಾಚರಣೆಗೊಳಿಸಲು ಯೋಜಿಸಿದೆ. ಅದರಂತೆ, ಸಾಮಾನ್ಯ ವೇಳೆಯಲ್ಲಿ ಪ್ರತಿ 10 ನಿಮಿಷಕ್ಕೊಂದು ರೈಲು ಹಾಗೂ ಪೀಕ್ ಅವರ್‌ನಲ್ಲಿ ಪ್ರತಿ 6 ನಿಮಿಷಕ್ಕೊಂದು ರೈಲು ಸಂಚರಿಸಲಿದೆ.

ಕೆಪಿಎಸ್‌ಸಿ ವಿಚಾರವಾಗಿ ಕೇಳಿದ ಪ್ರಶ್ನೆಗೆ, ಕೆಪಿಎಸ್‌ಸಿ ವಿಚಾರದಲ್ಲಿಯೂ ಹಲವು ಹಿರಿಯ ನಾಯಕರು ತಮ್ಮ ಅಭಿಪ್ರಾಯಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ

# ತಮಿಳುನಾಡಿಗೆ ಕಾವೇರಿ ನೀರು: ಸರ್ಕಾರದಿಂದ ನ್ಯಾಯಾಲಯದಲ್ಲಿ ಮೇಲ್ಮನವಿ

**ಉದಯವಾಹಿನಿ, ಚಿತ್ರದುರ್ಗ**

ತಮಿಳುನಾಡಿಗೆ ಕಾವೇರಿ ನೀರು ಬಿಡುವ ವಿಚಾರವಾಗಿ ರಾಜ್ಯ ಸರ್ಕಾರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಿದೆ ಎಂದು ಡಿ ಕೆ ಶಿವಕುಮಾರ್ ತಿಳಿಸಿದರು.ಚಿತ್ರದುರ್ಗದ ಸಿರಿಗೆರೆ ಮಠದ ಹೆಲಿಪ್ಯಾಡ್ ಬಳಿ ಶಿವಕುಮಾರ್ ಅವರು ಮಾಧ್ಯಮಗಳೊಂದಿಗೆ ಮಾತನಾಡಿದರು. ನೀರಿದ್ದರೆ ಬಿಡುತ್ತೇವೆ. ಆದರೆ ನಮಗೂ ಒಳಹರಿವು ನಿಂತುಹೋಗಿದೆ. ಮಳೆ ಕೂಡ ನಿಂತಿದೆ. ಈ ವಿಚಾರದಲ್ಲಿ ನಮ್ಮ ಮೇಲೆ ಸಾಕಷ್ಟು ಒತ್ತಡವಿದೆ. ನೀರಿನ ಪರಿಸ್ಥಿತಿಯನ್ನು ಪರಿಶೀಲಿಸಿ, ನೀರಾವರಿ ಸಚಿವರೊಂದಿಗೆ ಚರ್ಚಿಸಿದ ಬಳಿಕ ಮುಂದಿನ ಕ್ರಮದ ಬಗ್ಗೆ ತಿಳಿಸುತ್ತೇನೆ ಎಂದು ಹೇಳಿದರು.

ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ನಿರ್ಮಾಣವಾಗಿರುವ ಹಿನ್ನೆಲೆ ರೈತರಿಗೆ ಯಾವ ರೀತಿಯಲ್ಲಿ ನೆರವು ನೀಡಬೇಕು ಹಾಗೂ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಯಾವ ರೀತಿಯ ಸಹಕಾರ ಅಗತ್ಯವಿದೆ ಎಂಬುದರ ಕುರಿತು ರೂಪುರೇಷೆ ಸಿದ್ಧಪಡಿಸಬೇಕಾಗಿದೆ. ಈ ವಿಚಾರಗಳ ಕುರಿತು ವಿಧಾನಸಭೆಯಲ್ಲಿಯೂ ಚರ್ಚೆ ನಡೆದಿದೆ. ಸರ್ಕಾರ ಅಗತ್ಯ ಕ್ರಮಗಳ ಬಗ್ಗೆ ಚರ್ಚಿಸಲಿದೆ. ಸರ್ವಪಕ್ಷ ನಿಯೋಗದೊಂದಿಗೆ ಕೇಂದ್ರ ಸರ್ಕಾರದ ಗಮನ ಸೆಳೆಯುವ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರು ಸಹಕಾರ ನೀಡುತ್ತಿರುವುದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು. ಕಸ್ತೂರಿ ರಂಗನ್ ವರದಿ ಹಾಗೂ ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಸಂಬಂಧಿಸಿದ ವಿಚಾರದಲ್ಲಿ ಮಲೆನಾಡು ಮತ್ತು ಕರಾವಳಿ ಭಾಗದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರ ಕೈಗೊಂಡಿರುವ



1. ಗ್ಯಾರಂಟಿ ಯೋಜನೆಗಳು ಬಡವರ ಪರವಾಗಿವೆ
2.ಕೆಪಿಎಸ್‌ಸಿ ಪರೀಕ್ಷೆ: ಅರ್ಹರಿಗೆ ನ್ಯಾಯ ಸಿಗಬೇಕು
3.ಸುಮಾರು 20-30 ಮಂದಿ ನಾಯಕರು ತಿಳಿಸಿದ್ದಾರೆ

ನಿರ್ಣಯಕ್ಕೆ ವಿವಿಧ ಪಕ್ಷಗಳ ನಾಯಕರು ಸಹಮತ ವ್ಯಕ್ತಪಡಿಸಿದ್ದಾರೆ. ಸರ್ಕಾರ ರೈತರ ಹಿತಕ್ಕಾಗಿ ಕೆಲಸ ಮಾಡುತ್ತಿದೆ. ನಮ್ಮ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದೇವೆ. ರಾಜ್ಯದ ಜನರು ನಮ್ಮ ಮೇಲೆ ನಂಬಿಕೆ

> ಪರೀಕ್ಷೆ ಮತ್ತು ಸಂದರ್ಶನವನ್ನು ಪರಿಶುದ್ಧವಾಗಿ ನಡೆಸುವುದು ಸಂಬಂಧಪಟ್ಟವರ ಜವಾಬ್ದಾರಿ. ಹಿಂದೆ ನಡೆದಿರುವ ಹಲವು ಘಟನೆಗಳ ಹಿನ್ನೆಲೆಯಲ್ಲಿ ಈ ಬಗ್ಗೆ ಕೆಲವರು ಸಲಹೆಗಳನ್ನು ನೀಡಿದ್ದಾರೆ. ಕಾನೂನು ಚೌಕಟ್ಟಿನಲ್ಲಿ ಎಲ್ಲವನ್ನೂ ಪರಿಶೀಲಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು.
>
> – ಡಿಕೆಶಿ, ಮುಖ್ಯಮಂತ್ರಿ

ಇಟ್ಟಿದ್ದಾರೆ. ಆ ನಂಬಿಕೆ ಉಳಿಸಿಕೊಂಡು ಜನಹಿತ ಕಾಪಾಡುವ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದರು.ಗ್ಯಾರಂಟಿ ಯೋಜನೆಗಳು ಬಡವರ ಪರವಾಗಿವೆ ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ಬಗ್ಗೆ ಬಿಜೆಪಿ ನಾಯಕರ ಹೇಳಿಕೆ ಬಗ್ಗೆ ಕೇಳಿದಾಗ, ಗ್ಯಾರಂಟಿ ಯೋಜನೆಗಳನ್ನು ಪರಿಷ್ಕರಿಸಿ, ಸೌಲಭ್ಯಗಳನ್ನು ಬಡವರಿಗೆ ಮಾತ್ರ ನೀಡುವಂತೆ ಬಿಜೆಪಿ ಶಾಸಕ ಸುರೇಶ್ ಗೌಡ ಸೇರಿದಂತೆ ಕೆಲವು ವಿರೋಧ ಪಕ್ಷಗಳ ಶಾಸಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ವಿವಿಧ ನಾಯಕರಿಗೆ ತಮ್ಮದೇ ಆದ ಅಭಿಪ್ರಾಯಗಳಿವೆ. ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲು ಸಾಧ್ಯವಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿಯ ಹಲವು ಕೇಂದ್ರ ಸಚಿವರು ಹಾಗೂ ನಾಯಕರು ಈ ಹಿಂದೆ ಹೇಳಿದ್ದರೂ, ರಾಜ್ಯ ಸರ್ಕಾರ ಮಾತ್ರ ಬಡವರ ಪರವಾಗಿ ನೆರವು ನೀಡುವ ಕಾರ್ಯವನ್ನು ಮುಂದುವರಿಸಲಿದೆ ಎಂದರು.

# ಗಣಿಗಾರಿಕೆಯಿಂದ ಬಡವರ ಮನೆಗಳಿಗೆ ಹಾನಿ ಪರಿಹಾರಕ್ಕೆ ಆಗ್ರಹ

**ಉದಯವಾಹಿನಿ ಚಿಂಚೋಳಿ**

ತಾಲ್ಲೂಕಿನ ಚೆಟ್ಟಿನಾಡು ಕಾರ್ಖಾನೆಯಲ್ಲಿ ನಡೆಸುತ್ತಿರುವ ಗಣಿಗಾರಿಕೆಯಿಂದ ರೋಡ್ ಕಲ್ಲೂರ ಗ್ರಾಮದಲ್ಲಿರುವ ಬಡಜನರ ಮನೆಗಳು ಬಿರುಕುಬಿಟ್ಟ ಮನೆಗಳು ಕುಸಿದು ಬೀಳುವ ಸ್ಥಿತಿಯಲ್ಲಿವೆ ಹಾಗಾಗಿ ಕ್ಷೇತ್ರಕ್ಕೆ ಒಳಪಡುವ ಇಬ್ಬರು ಸಂಸದರು,ಇಬ್ಬರು ಶಾಸಕರು ಮುತುವರ್ಜಿ ವಹಿಸಿ ಬಡಕುಟುಂಬಗಳಿಗೆ ನೂತನ ನಿವೇಶನ ಜೋತೆ ಪರಿಹಾರ ನೀಡಬೇಕು ಎಂದು ಜೆಡಿಎಸ್ ತಾಲ್ಲೂಕಾಧ್ಯಕ್ಷ ರವಿಶಂಕರರೆಡ್ಡಿ ಮುತ್ತಂಗಿ ಆಗ್ರಹಿಸಿದರು.

ಪಟ್ಟಣದಲ್ಲಿ ಜೆಡಿಎಸ್ ಪಕ್ಷದಿಂದ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಚೆಟ್ಟಿನಾಡು ಕಾರ್ಖಾನೆ ಪಕ್ಕದ ತೇಲಂಗಾಣದ ಸಂಗಮ್ ಕೆ.ಗ್ರಾಮದಲ್ಲಿ ಮನೆಗಳಲ್ಲಿ ಸ್ವಲ್ಪ ನೀರು ನುಗ್ಗಿ ದಾವಸ ದಾನ್ಯಗಳು ನಷ್ಟವಾಗಿ ಮನೆಗಳಿಗೆ ಹಾನಿಯಾದರೆ ತೇಲಂಗಾಣದ ತಾಂಡೂರ ಕ್ಷೇತ್ರದ ಶಾಸಕ ಮನೋಹರರೆಡ್ಡಿ,ಸಂಸದ ಕೋಂಡಾ ವಿಶ್ವೇಶರರೆಡ್ಡಿ ಮುತುವರ್ಜಿ ವಹಿಸಿ ಅಲ್ಲಿನ 57 ಫಲಾನುಭವಿಗಳಿಗೆ ಪ್ರತಿ ಕುಟುಂಬಕ್ಕೆ 30ಲಕ್ಷ ರೂ.ಪರಿಹಾರ ಧನ ನೀಡಲಾಗಿದೆ.

ಕಳೆದ 15ವರ್ಷಗಳ ಹಿಂದೆ ಚಿಂಚೋಳಿಯಲ್ಲಿ ಚೆಟ್ಟಿನಾಡು ಕಾರ್ಖಾನೆ ಪ್ರಾರಂಭವಾಗಿದೆ ಆದರೆ ಇಂದಿನವರೆಗೆ ಕಾರ್ಖಾನೆ ಪಕ್ಕದಲ್ಲಿರುವ ರೋಡ್ ಕಲ್ಲೂರ ಗ್ರಾಮದಲ್ಲಿ ಕಾರ್ಖಾನೆಯಲ್ಲಿ



ನಡೆಯುತ್ತಿರುವ ಗಣಿಗಾರಿಕೆಗೆಯಿಂದ ಮನೆಗಳು ಬಿರುಕು ಕಾಣಿಸಿಕೊಂಡು ಕುಸಿದು ಬಿಳುವ ಸ್ಥಿತಿಗೆ ತಲುಪಿವೆ ಆದರೆ ಈ ಕ್ಷೇತ್ರದ ಇಬ್ಬರು ಶಾಸಕರು,ಇಬ್ಬರು ಸಂಸದರು ಜನರ ಬಗ್ಗೆ ಕಾಳಜಿ ತೋರದೆ ನಿರ್ಲಕ್ಷ್ಯ ವಹಿಸುತ್ತಿರುವುದು ಯಾತಕ್ಕಾಗಿ ಜನರ ಹಿತ ಈ ಜನಪ್ರತಿನಿಧಿಗಳಿಗೆ ಬೇಕಾಗಿಲ್ಲವೆ ಎಂದು ಪ್ರಶ್ನೆಸಿದರು. ಶೀಘ್ರದಲ್ಲೇ ಇನ್ನುಳಿದ ಉದ್ಯೋಗ ಆಕಾಂಕ್ಷಿಗಳಿಗೆ ಮತ್ತು ಜಮೀನು ನೀಡಿದ ಫಲಾನುಭವಿಗಳಿಗೆ ಉದ್ಯೋಗ ನೀಡಬೇಕು ಇಲ್ಲಾದಿದ್ದರೆ 10ದಿನಗಳಲ್ಲಿ ಕಾರ್ಖಾನೆ ಎದುರುಗಡೆ ಜೆಡಿಎಸ್ ಪಕ್ಷದಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಅಧ್ಯಕ್ಷ ರವಿಶಂಕರರೆಡ್ಡಿ ಮುತ್ತಂಗಿ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಹಣಮಂತ ಪೂಜಾರಿ, ಮಂಜೂರ ಅಹೇಮದ್, ಖದೀರ್, ಸೋಹೇಲ್, ಫರ್ಧಿನ್, ಎಂಡಿ ರಹೇಮಾನ್, ನವಾಜ್ ಇದ್ದರು.

# ಸಿಡಿಲು ಬಡಿದು ಮಸ್ಕಿಯಲ್ಲಿ 36ಕುರಿ ಸಾವು

**ಉದಯವಾಹಿನಿ, ಮಸ್ಕಿ**

ಸುರಿದ ಮಳೆಗೆ ಸಿಡಿಲು ಬಡಿದು 36 ಆಡುಗಳು ಸಾವನ್ನಪ್ಪಿರುವ ಘಟನೆ ಪಟ್ಟಣದ ಬಯಲು ಆಂಜನೇಯ ದೇವಸ್ಥಾನದ ಬಳಿ ಘಟನೆ ನಡೆದಿದೆ.



ಪಟ್ಟಣದ ನಾಯಕ ಸಮುದಾಯದ ರೈತಗಳಾದ ಬಸವರಾಜ ತಂದೆ ಆದಪ್ಪ ಮತ್ತು ಗಿರಿಜಾಪತಿ ತಂದೆ ಫಕೀರಪ್ಪ ಅವರಿಗೆ ಸೇರಿದ 37 ಆಡುಗಳಲ್ಲಿ ಒಂದು ಆಡು ಮಾತ್ರ ಪ್ರಾಣಾಪಯದಿಂದ ಪಾರಾಗಿದೆ. 36 ಆಡುಗಳು ಸ್ಥಳದಲ್ಲೆ ಸಾವನ್ನಪ್ಪಿದೆ. ಘಟನೆ ಕುರಿತು ಮಾಹಿತಿ ತಿಳಿದ ಕೂಡಲೇ ತಹಶೀಲ್ದಾರ ಮಂಜುನಾಥ ಬೋಗಾವತಿ, ಕಂದಾಯ ನೀರಿಕ್ಷಕ ಮಹಾಂತೇಶ, ಗ್ರಾಮ ಆಡಳಿತಾಧಿಕಾರಿ ಗಂಗಪ್ಪ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ರೈತರಿಗೆ ಸರ್ಕಾರದಿಂದ ಸೂಕ್ತ ಪರಿಹಾರ ಒದಗಿಸುವ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

# ತಾಲ್ಲೂಕನ್ನು ಬರಪೀಡಿತವೆಂದು ಘೋಷಿಸಿ

**ಉದಯವಾಹಿನಿ, ಔರಾದ್**

ಔರಾದ(ಬಿ) ತಾಲ್ಲೂಕನ್ನು ಕೂಡಲೇ ಬರಪೀಡಿತ ಪ್ರದೇಶವೆಂದು ಘೋಷಿಸಿ, ಬರದಿಂದ ಸಂಕಷ್ಟಕ್ಕೊಳಗಾಗಿರುವ ರೈತರಿಗೆ ಸರ್ಕಾರದ ಪರಿಹಾರ ಹಾಗೂ ಅಗತ್ಯ ನೆರವು ಒದಗಿಸುವಂತೆ ಶಾಸಕ ಪ್ರಭು ಬಿ.ಚವ್ಹಾಣ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರನ್ನು ಒತ್ತಾಯಿಸಿದ್ದಾರೆ.



> ಔರಾದ(ಬಿ) ಹಾಗೂ ಕಮಲನಗರ ಎರಡೂ ತಾಲ್ಲೂಕುಗಳಲ್ಲೂ ವಾಸ್ತವ ಪರಿಸ್ಥಿತಿ ಗಂಭೀರವಾಗಿದ್ದು, ಬರದ ತೀವ್ರತೆಯನ್ನು ಮರುಪರಿಶೀಲಿಸಿ ಎರಡೂ ತಾಲ್ಲೂಕುಗಳನ್ನು ತೀವ್ರ ಸ್ವರೂಪದ ಬರಪೀಡಿತ ಪ್ರದೇಶಗಳ ಪಟ್ಟಿಗೆ ಸೇರಿಸಬೇಕು.
>
> – ಚವ್ಹಾಣ, ಶಾಸಕ

ವಿಧಾನಸೌಧದಲ್ಲಿ ಸೆ.23 ರಂದು ಮುಖ್ಯಮಂತ್ರಿಗಳನ್ನು ಖುದ್ದಾಗಿ ಭೇಟಿ ಮಾಡಿದ ಶಾಸಕರು, ಔರಾದ(ಬಿ) ತಾಲ್ಲೂಕಿನಲ್ಲಿ ಉಂಟಾಗಿರುವ ಮಳೆ ಕೊರತೆ ಹಾಗೂ ರೈತರು ಎದುರಿಸುತ್ತಿರುವ ಗಂಭೀರ ಬರ ಪರಿಸ್ಥಿತಿಯ ಕುರಿತು ವಿವರವಾಗಿ ಮನವರಿಕೆ ಮಾಡಿಕೊಟ್ಟರು.

ಬೀದರ ಜಿಲ್ಲೆಯ ಔರಾದ(ಬಿ) ತಾಲ್ಲೂಕನ್ನು ಹೊರತುಪಡಿಸಿ ಉಳಿದ ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಲಾಗಿದೆ. ಔರಾದ(ಬಿ) ತಾಲ್ಲೂಕಿನಲ್ಲಿ ಬಹುತೇಕ ಕೃಷಿ ಮಳೆಯಾಧಾರಿತವಾಗಿದ್ದು, ಈ ಬಾರಿ ಮುಂಗಾರು ಮಳೆಯೂ ತಡವಾಗಿ ಆರಂಭವಾಗಿದ್ದಲ್ಲದೆ, ಬೆಳೆಗಳ ಹೂ ಮತ್ತು ಕಾಯಿ ಬಿಡುವ ಹಂತದಲ್ಲಿ ಮಳೆ ಕೈಕೊಟ್ಟಿದೆ. ಪರಿಣಾಮವಾಗಿ ಉದ್ದು, ಹೆಸರು, ಸೋಯಾಬೀನ್, ತೊಗರಿ ಸೇರಿದಂತೆ ವಿವಿಧ ಬೆಳೆಗಳು ಒಣಗಿ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಈ ಹಿಂದೆಯೂ ಹಲವು ಬಾರಿ ಮುಖ್ಯಮಂತ್ರಿಗಳು, ಸಂಬಂಧಪಟ್ಟ ಸಚಿವರು ಹಾಗೂ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಔರಾದ(ಬಿ) ತಾಲ್ಲೂಕಿನ ಬರ ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತರಲಾಗಿದೆ. ಅಲ್ಲದೆ, ರೈತರ ಸಮಸ್ಯೆಗಳಿಗೆ ಸ್ಪಂದಿಸುವಂತೆ ಆಗ್ರಹಿಸಿ ಔರಾದ ಪಟ್ಟಣದಲ್ಲಿ ರೈತರೊಂದಿಗೆ ಬೃಹತ್ ಪ್ರತಿಭಟನೆಯನ್ನೂ ನಡೆಸಲಾಗಿದೆ. ಆದರೂ ಔರಾದ(ಬಿ) ತಾಲ್ಲೂಕು ಬರಪೀಡಿತ ಪಟ್ಟಿಯಿಂದ ಹೊರಗುಳಿದಿರುವುದು ರೈತರಿಗೆ ಅನ್ಯಾಯವಾಗಿದೆ ಎಂದು ಪ್ರಭು ಚವ್ಹಾಣ ಅವರು ತಿಳಿಸಿದ್ದಾರೆ.

# ಧೀರ್ಘಕಾಲದ ರೋಗಗಳ ನಿವಾರಣೆಗೆ ಆಯುರ್ವೇದ ಉಪಯುಕ್ತ

**ಉದಯವಾಹಿನಿ, ಚಿತ್ರದುರ್ಗ**

ಕರ್ನಾಟಕ ಸರ್ಕಾರ, ಆಯುಷ್ ಇಲಾಖೆ ಬೆಂಗಳೂರು, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಚಿತ್ರದುರ್ಗ, ಜಿಲ್ಲಾ ಆಯುಷ್ ಇಲಾಖೆ ಚಿತ್ರದುರ್ಗ ಹಾಗೂ ಎಸ್ ಜೆ ಎಂ ವಿಶ್ವವಿದ್ಯಾಲಯದ ಇವರ ಆಶ್ರಯದಲ್ಲಿ, ಎಸ್.ಜೆ.ಎಂ ಕಾಲೇಜ್ ಆಫ್ ಫಾರ್ಮಸಿ ಸಭಾಂಗಣದಲ್ಲಿ ದಿನಾಂಕ 23-9-2026 ರ ಬುಧವಾರ 11ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಅಂಗವಾಗಿ ಉಪನ್ಯಾಸ ಮಾಲಿಕೆ, ವಸ್ತು ಪ್ರದರ್ಶನ ರಕ್ತದಾನ ಮತ್ತು ಉಚಿತ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ರಕ್ತದಾನ ಶಿಬಿರದಲ್ಲಿ ಸ್ವಯಂ ರಕ್ತದಾನ ಮಾಡಿ ಮಾತನಾಡಿದ ಚಿತ್ರದುರ್ಗ ಜಿಲ್ಲಾ ಆಯುಷ್ ಇಲಾಖೆಯ ಜಿಲ್ಲಾ ಆಯುಷ್ ಅಧಿಕಾರಿ ಡಾ.ಚಂದ್ರಕಾಂತ್ ನಾಗಸಮುದ್ರ ಮಾತನಾಡಿ ರಕ್ತದಾನವು ಪ್ರತಿಯೊಬ್ಬ ವ್ಯಕ್ತಿಯು ಸಮಾಜಕ್ಕೆ ಮಾಡಬಹುದಾದ ಅತ್ಯಂತ ಶ್ರೇಷ್ಠ ಹಾಗೂ ಪವಿತ್ರವಾದ ಕೊಡುಗೆಯಾಗಿದೆ. "ರಕ್ತದಾನ  ಜೀವದಾನ" ಎಂಬ ಮಾತಿನಂತೆ, ನಾವು ನೀಡುವ ಒಂದು ಯೂನಿಟ್ ರಕ್ತವು ಮೂರು ಜನರ ಪ್ರಾಣವನ್ನು ಉಳಿಸುವ ಸಾಮರ್ಥ್ಯ ಹೊಂದಿದೆ.

ವಿಶೇಷವಾಗಿ ಕಾಲೇಜು ವಿದ್ಯಾರ್ಥಿಗಳು ಯುವಶಕ್ತಿಯ ಸಂಕೇತ. ನೀವು ಮನಸ್ಸು ಮಾಡಿದರೆ ಸಮಾಜದಲ್ಲಿ ದೊಡ್ಡ ಬದಲಾವಣೆ ತರಲು ಸಾಧ್ಯ ಎಂದು ಹೇಳಿದರು. ಮುಂದುವರೆದು ಮಾತನಾಡುತ್ತಾ ಈ ಬಾರಿಯ ಘೋಷವಾಕ್ಯ ಆರೋಗ್ಯಕ್ಕಾಗಿ ನಾಳೆಗಾಗಿ ಆಯುರ್ವೇದ ಎಂಬಂತೆ ಆಯುರ್ವೇದ ಔಷಧಿಗಳು ಪರಿಣಾಮಕಾರಿಯಾಗಿ ದೀರ್ಘಕಾಲೀನ ರೋಗಗಳನ್ನು ಗುಣಪಡಿಸುವಲ್ಲಿ ಯಶಸ್ವಿಯಾಗಿದೆ. ಆಯುರ್ವೇದವನ್ನು ಕೇವಲ ರೋಗ ಬಂದಾಗ ತೆಗೆದುಕೊಳ್ಳುವ ಚಿಕಿತ್ಸೆಯಾಗಿ ನೋಡದೆ, ಆರೋಗ್ಯಕರ ಜೀವನಶೈಲಿ, ಆಹಾರ ಪದ್ಧತಿ ಮತ್ತು



ಮಾನಸಿಕ ಸಮತೋಲನವನ್ನು ಬೆಳೆಸುವ ಸಮಗ್ರ ಆರೋಗ್ಯ ಪದ್ಧತಿ ಎಂದು ಪರಿಚಯಿಸುವುದು ಸೂಕ್ತ ಎಂದು ಅಭಿಪ್ರಾಯ ಪಟ್ಟರು.

ಇದಕ್ಕೂ ಮೊದಲು ಕಾರ್ಯಕ್ರಮ ಉದ್ಘಾಟಿಸಿದ ಎಸ್.ಜೆ.ಎಂ ಕಾಲೇಜ್ ಆಫ್ ಫಾರ್ಮಸಿ ಪ್ರಾಂಶುಪಾಲರಾದ ಡಾ. ಮಾರುತಿ ಎಸ್ ಎಕ್‌ಬೋಟೆ ತುಳಸಿ ಗಿಡಕ್ಕೆ ನೀರೆಯುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ ಆಯುರ್ವೇದವು ಅನಾದಿಕಾಲದಿಂದಲೂ ಪ್ರಚಲಿತವಾಗಿದ್ದು ತನ್ನದೇ ಆದ ಛಾಪು ಮೂಡಿಸುತ್ತಿದೆ ಮತ್ತು ವಿಶ್ವದಲ್ಲೇ ತನ್ನದೇ ಆದ ಸ್ವಂತ ಚಿಕಿತ್ಸಾ ಪದ್ಧತಿಗಳನ್ನು ಹೊಂದಿರುವುದು ಎಂದರೆ ಭಾರತ ಈ ದಿಸೆಯಲ್ಲಿ ಭಾರತವು ಏಕೈಕ ಪ್ರಾಚೀನ ವೈದ್ಯ ಪದ್ಧತಿಯನ್ನು ಸಾರ್ವಜನಿಕರು ಇದರ ಉಪಯೋಗವನ್ನು ಪಡೆಯುತ್ತಿದ್ದಾರೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಆಯುಷ್ ಇಲಾಖೆಯ ಎಲ್ಲಾ ವೈದ್ಯಾಧಿಕಾರಿಗಳು,ಸಿಬ್ಬಂದಿ ವರ್ಗದವರು ಮತ್ತು ಸುಮಾರು 155 ವಿದ್ಯಾರ್ಥಿಗಳು ಹಾಗೂ ಕಾಲೇಜಿನ ಸಿಬ್ಬಂದಿ ವರ್ಗದವರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಡಾ. ಮಂಜುಳಾ ಆರ್ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳಾಡಿದರೆ, ಡಾ. ಕುಮಾರಸ್ವಾಮಿ ಎಸ್. ಆರ್ ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿ, ಅಳಗವಾಡಿ ಆಯುಷ್ ವೈದ್ಯಾಧಿಕಾರಿ ಡಾ.ನಾರದಮುನಿ ಜಿ.ಬಿ. ಕಾರ್ಯಕ್ರಮದ ನಿರೂಪಣೆ ಮಾಡಿದರು.

# ಶಿಕ್ಷಣ ಸಚಿವ ಮಧು ಬಂಗಾರಪ್ಪ ಆಪ್ತರಿಂದ ಹಣಕ್ಕೆ ಬೇಡಿಕೆ: ಕಾಂಗ್ರೇಸ್ ನಾಯಕ

**ಉದಯವಾಹಿನಿ, ಶಿವಮೊಗ್ಗ**

ಶಿಕ್ಷಣ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರ ಆಪ್ತರು ವಿವಿಧ ಸರ್ಕಾರಿ ಇಲಾಖೆಗಳ ಅಧಿಕಾರಿಗಳಿಂದ ಲಕ್ಷಾಂತರ ರೂಪಾಯಿ ಹಣಕ್ಕೆ ಬೇಡಿಕೆ ಇಡುತ್ತಿದ್ದಾರೆ ಎಂದು ಹಿರಿಯ ಕಾಂಗ್ರೆಸ್ ನಾಯಕ ಹಾಗೂ ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಚ್.ಎಸ್. ಸುಂದರೇಶ್ ಆರೋಪಿಸಿದ್ದಾರೆ. ಭದ್ರಾವತಿಯವರಾದ ಕಾಂಗ್ರೆಸ್ ಸೇವಾದಳದ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಅವರು ಜಿಲ್ಲೆಯ ಪಕ್ಷದ ಚಟುವಟಿಕೆಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದೂ ಅವರು ಆರೋಪಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸುಂದರೇಶ್, ಸಚಿವರ ಆಪ್ತರೊಬ್ಬರು ಎಸ್‌ಬಿಯುಡಿಎ ಅಧಿಕಾರಿಗಳಿಂದ 25 ಲಕ್ಷ ರೂಪಾಯಿಗೆ ಬೇಡಿಕೆ ಇಟ್ಟಿದ್ದಾರೆ ಎಂದು ಆರೋಪಿಸಿದರು. ಕಾಂಗ್ರೆಸ್ ಶಾಸಕರಾದ ಗೋಪಾಲಕೃಷ್ಣ ಬೇಳೂರು ಮತ್ತು ಬಿ.ಕೆ. ಸಂಗಮೇಶ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಸುಂದರೇಶ್ ಒತ್ತಾಯಿಸಿದರು. ಅಲ್ಲದೆ, ಜಿಲ್ಲೆಯಲ್ಲಿನ ಪಕ್ಷ ಸಂಘಟನೆಯ ಕಾರ್ಯವೈಖರಿಯಿಂದ ಹಲವು ಕಾಂಗ್ರೆಸ್ ಕಾರ್ಯಕರ್ತರು ಅಸಮಾಧಾನಗೊಂಡಿದ್ದಾರೆ ಎಂದು ಅವರು ಹೇಳಿದರು. ಸುಮಾರು 40 ವರ್ಷಗಳಿಂದ ಸ್ವಂತ ಹಣ ಖರ್ಚು ಮಾಡಿಕೊಂಡು ಪಕ್ಷಕ್ಕಾಗಿ ಕೆಲಸ ಮಾಡಿದ್ದೇನೆ. ಕಾಂಗ್ರೆಸ್ ನಾಯಕತ್ವ ನಿರ್ಧಾರ ಕೈಗೊಳ್ಳದಿದ್ದರೆ, ಪಕ್ಷ ತೊರೆಯಲು ನಾನು ಸಿದ್ಧ ಎಂದು ಹೇಳಿದರು.



"ನೂತನ ಅನುಭವ ಮಂಟಪ ಕಟ್ಟಡ ಮುಗಿದ ಮೇಲೆ ಮುಂದೇನು.? ಎಂಬ ಪುಸ್ತಕವನ್ನು ನಾವು ಬಿಡುಗಡೆಗೊಳಿಸಿದ್ದೇವೆ

# ಬೇಕಿದೆ 550 ಕೋಟಿ ಅನುದಾನ; ತರಾತುರಿಯಲ್ಲಿ ಉದ್ಘಾಟನೆ ಬೇಡ

**ಉದಯವಾಹಿನಿ, ಬೆಳಗಾವಿ**

"ಬಸವಕಲ್ಯಾಣದಲ್ಲಿ ನಿರ್ಮಾಣ ಮಾಡುತ್ತಿರುವ ಅನುಭವ ಮಂಟಪದ ಬಾಕಿಯಿರುವ ಕೆಲಸಗಳಿಗೆ ಸುಮಾರು 550 ಕೋಟಿ ರೂಪಾಯಿ ಅನುದಾನ ಬೇಕಿದೆ. ಮೊದಲು ಸರ್ಕಾರ 550 ಕೋಟಿ ಅನುದಾನ ಬಿಡುಗಡೆ ಮಾಡಬೇಕು. ಅನುಭವ ಮಂಟಪದ ಮೂಲ ಕೆಲಸಗಳನ್ನು ಎಲ್ಲಾ ಮುಗಿಸಿ ನಂತರ ಉದ್ಘಾಟನೆ ಮಾಡಬೇಕು" ಎಂದು ಜಾಗತಿಕ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಸ್.ಎಂ. ಜಾಮದಾರ ಒತ್ತಾಯಿಸಿದ್ದಾರೆ.

ಎಪ್ರಿಲ್ ತಿಂಗಳಲ್ಲಿ ನೂತನ ಅನುಭವ ಮಂಟಪ ಉದ್ಘಾಟನೆ ಬಗ್ಗೆ ಸಚಿವ ಈಶ್ವರ್ ಖಂಡ್ರೆ ಹೇಳಿಕೆಗೆ ಬೆಳಗಾವಿಯಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, "ಉದ್ಘಾಟನೆಗೆ ಸಚಿವರು ಮತ್ತು ಮುಖ್ಯಮಂತ್ರಿಗಳು ಅವಸರ ಮಾಡಬಾರದು. ಕೇವಲ ಸುಣ್ಣಬಣ್ಣ ಬಳಿದು ನೂತನ ಕಟ್ಟಡ ಉದ್ಘಾಟನೆ ಮಾಡಬೇಡಿ. ಈಗಾಗಲೇ ಟೆಂಡರ್ ಹಾಕಿ ಪ್ರಾರಂಭಿಸಿದ ಕಟ್ಟಡಗಳ ವೆಚ್ಚ 640 ಕೋಟಿ ರೂ. ಈ ಹಿಂದಿನ ಬಿಜೆಪಿ ಸರ್ಕಾರ 200 ಕೋಟಿ, ಕಾಂಗ್ರೆಸ್ ಸರ್ಕಾರ 250 ಕೋಟಿ ಮಾತ್ರ ಅನುದಾನ ಬಿಡುಗಡೆ ಮಾಡಿವೆ. ಅನುಭವ ಮಂಟಪದ ಮೂಲ ಕೆಲಸಗಳನ್ನು ಮುಗಿಸಲು ಪರಿಷ್ಕೃತ ಅಂದಾಜು ಮೊತ್ತ 740 ಕೋಟಿ ಬೇಕು. ಯಾತ್ರಿಕರ ನಿವಾಸ, ದಾಸೋಹ ಭವನ, ಪಾರ್ಕಿಂಗ್ ಪ್ರದೇಶಕ್ಕೆ ಈವರೆಗೂ ಅನುಮೋದನೆಯೇ ಕೊಟ್ಟಿಲ್ಲ" ಎಂದು ಅಸಮಾಧಾನ ಹೊರ ಹಾಕಿದ್ದಾರೆ.



> ಕರ್ನಾಟಕದಲ್ಲಿ ಮಾತ್ರ ಪ್ರಸಿದ್ಧಿ ಆಗಿರುವ ಬಸವಣ್ಣನವರನ್ನು ರಾಷ್ಟ್ರವ್ಯಾಪಿ ತೆಗೆದುಕೊಂಡು ಹೋಗುತ್ತೇವೆ ಎಂದು ಅವರು ಹೇಳಿದ್ದಾರೆ. ಇದರ ಭರದಲ್ಲಿ ಬಸವತತ್ವಗಳನ್ನು ತಿರುಚಿದರೆ, ಅದರಲ್ಲಿ ಹಿಂದೂತ್ವದ ವಿಚಾರಗಳನ್ನು ಸೇರಿಸಿದರೆ ನಾವು ಸಹಿಸುವುದಿಲ್ಲ. ಆ ಪ್ರಯತ್ನವನ್ನು ಉಗ್ರವಾಗಿ ವಿರೋಧಿಸುತ್ತೇವೆ.
>
> –ಎಸ್.ಎಂ. ಜಾಮದಾರ

ಎಸ್. ಎಂ. ಜಾಮದಾರ ಮಾಧ್ಯಮ ಪ್ರತಿಕ್ರಿಯೆ

"ನೂತನ ಅನುಭವ ಮಂಟಪ ಕಟ್ಟಡ ಮುಗಿದ ಮೇಲೆ ಮುಂದೇನು.? ಎಂಬ ಪುಸ್ತಕವನ್ನು ನಾವು ಬಿಡುಗಡೆಗೊಳಿಸಿದ್ದೇವೆ. ಅನುಭವ ಮಂಟಪದ ಭವ್ಯ ಕಟ್ಟಡದಲ್ಲಿ ಏನೆಲ್ಲಾ ಕಾರ್ಯಕ್ರಮಗಳು ನಡೆಯಬೇಕು ಎಂಬ ಬಗ್ಗೆ ಈ ಪುಸ್ತಕದಲ್ಲಿ ವಿವರವಾಗಿ ತಿಳಿಸಿದ್ದೇವೆ. ಅನುಭವ

1. ಬಿಜೆಪಿ ಸರ್ಕಾರ 200 ಕೋಟಿ
2. ಕಾಂಗ್ರೆಸ್ ಸರ್ಕಾರ 250 ಕೋಟಿ
3. ಪರಿಷ್ಕೃತ ಮೊತ್ತ 740 ಕೋಟಿ

ಮಂಟಪವನ್ನು ಸರ್ಕಾರ ತನ್ನ ಸುಪರ್ದಿಯಲ್ಲೇ ಇರಿಸಿಕೊಳ್ಳಬೇಕು. ಯಾವುದೇ ಖಾಸಗಿ ಸಂಸ್ಥೆ ಹಾಗೂ ಮಠಕ್ಕೆ ಯಾವುದೇ ಕಾರಣಕ್ಕೂ ನೀಡಬಾರದು. ಅನುಭವ ಮಂಟಪ ಉದ್ಘಾಟನೆ ಬಳಿಕ ನಿರಂತರ ದಾಸೋಹ ಆರಂಭಿಸಬೇಕು. ವಚನ ಅಧ್ಯಯನ, ಪ್ರಜಾತಾಂತ್ರಿಕ ಶಿಕ್ಷಣ, ಕಾಯಕ ತತ್ವ, ಸ್ತ್ರೀ ಸಮಾನತೆ, ಜಾತಿ ವಿನಾಶ ಸೇರಿ ಬಸವತತ್ವದ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಇದಕ್ಕಾಗಿ ಒಂದು ಸಮಿತಿ ರಚನೆ ಮಾಡಬೇಕು. ಅದರಲ್ಲಿ ಪಕ್ಷಾತೀತವಾಗಿ ಸ್ವಾಮೀಜಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳನ್ನು ಸೇರಿಸಿಕೊಳ್ಳಬೇಕು" ಎಂದು ಎಸ್.ಎಂ. ಜಾಮದಾರ ಅಭಿಪ್ರಾಯಪಟ್ಟಿದ್ದಾರೆ.

"2027ರ ಫೆ.1ರಿಂದ ಫೆ.28ರವರೆಗೆ ನಡೆಯಲಿರುವ ಜಾತಿಗಣತಿಯ ಧರ್ಮದ ಕಾಲಂನಲ್ಲಿ ಎಷ್ಟು ಧರ್ಮಗಳನ್ನು ತೋರಿಸುತ್ತಾರೆ ಅಂತಾ ಗೊತ್ತಿಲ್ಲ. ಇನ್ನೂ ಐದು ತಿಂಗಳು ಬಾಕಿ ಇದೆ. ಆದರೂ ಜಾತಿಗಣತಿಗೆ ಸಂಬಂಧಿಸಿದ ಫಾರ್ಮ್ ಮತ್ತು ಪ್ರಶ್ನೆಗಳನ್ನು ಇನ್ನೂ ಬಿಡುಗಡೆ ಮಾಡಿಲ್ಲ. ರಾಜ್ಯ ಸರ್ಕಾರ ನಮ್ಮ ಲಿಂಗಾಯತ ಧರ್ಮಕ್ಕೆ ಮಾನ್ಯತೆ ಕೊಟ್ಟಿದೆ, ಕೇಂದ್ರ ಸರ್ಕಾರ ಕೊಟ್ಟಿಲ್ಲ.

## ಮಿನಿ ನ್ಯೂಸ್

# ಗ್ರಾಮ ಲೆಕ್ಕಿಗ ಲೋಕಾಯುಕ್ತ ಬಲೆಗೆ

**ಉದಯವಾಹಿನಿ, ಕಲಬುರಗಿ**

ಕಂದಾಯ ಇಲಾಖೆಯಲ್ಲಿ ಜಮೀನು ಮುಟೇಷನ್ ಮಾಡಿಕೊಡಲು 10 ಸಾವಿರ ರೂ.ಲಂಚ ಪಡೆಯುತ್ತಿದ್ದ ಗ್ರಾಮ ಲೆಕ್ಕಿಗರೊಬ್ಬರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಿಗರಾಗಿರುವ ರಮೇಶ್ ಎಂಬುವವರೆ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಜಮೀನು ಮುಟೇಷನ್ ಮಾಡಿಕೊಡಲು ಗ್ರಾಮ ಲೆಕ್ಕಿಗ ರಮೇಶ್ ಅವರು ಸತೀಶ್ ಎಂಬುವವರಿಗೆ 10 ಸಾವಿರ ರೂ.ಲಂಚ ಕೇಳಿದ್ದರು ಎನ್ನಲಾಗಿದ್ದು, ರಮೇಶ್ ತಮ್ಮ ಸಹಾಯಕ ಸಾಗರ್ ಎಂಬುವವರ ಮೂಲಕ 10 ಸಾವಿರ ರೂ.ಲಂಚದ ಹಣ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಅಧಿಕಾರಿ ಅರುಣ್ ಮುರಗುಂದಿ ಮತ್ತು ಸಿಬ್ಬಂದಿ ದಾಳಿ ನಡೆಸಿ ಇಬ್ಬರನ್ನು ರೆಡ್‌ಹ್ಯಾಂಡಾಗಿ ಹಿಡಿದಿದ್ದಾರೆ ಎಂದು ತಿಳಿದುಬಂದಿದೆ. ಲೋಕಾಯುಕ್ತ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಉರುಸ್‌ಗೆ ಗಂಧೋತ್ಸವದ ವೈಭವ

**ಉದಯವಾಹಿನಿ, ಆಳಂದ**

ಭಾವೈಕ್ಯತೆ, ಸೌಹಾರ್ದತೆ ಹಾಗೂ ಸೂಫಿ ಪರಂಪರೆಯ ಪ್ರತೀಕವಾಗಿರುವ ಪಟ್ಟಣದ ಹಜರತ್ ಲಾಡ್ಲೆ ಮಶಾಕ್ ಅನ್ಸಾರಿ ಅವರ 671ನೇ ಉರುಸ್ ನಿಮಿತ್ತ ನಡೆದ ಗಂಧೋತ್ಸವ ಅದ್ದೂರಿ ವೈಭವಕ್ಕೆ ಸಾಕ್ಷಿಯಾಯಿತು. ಗಂಧೋತ್ಸವದ ಅಂಗವಾಗಿ ಹಳೆಯ ತಹಸೀಲ್ದಾರ್ ಕಚೇರಿಯಿಂದ ಪಟ್ಟಣದ ಪ್ರಮುಖ ರಸ್ತೆ ಮಾರ್ಗವಾಗಿ ಹಜರತ್ ಲಾಡ್ಲೆ ಮಶಾಕ್ ದರ್ಗಾವರೆಗೆ ನಡೆದ ಮೆರವಣಿಗೆಯಲ್ಲಿ ಖವಾಲಿ, ಭಕ್ತಿಗೀತೆ, ಪ್ರಾರ್ಥನೆ ಹಾಗೂ ವಿವಿಧ ವಾದ್ಯಗಳ ನಾದ ಮೊಳಗಿತು.



ತೆರೆದ ಲಾರಿಯಲ್ಲಿ ಪ್ರಸಿದ್ಧ ಕಲಾವಿದರು ಖವಾಲಿ ಹಾಡುವ ಮೂಲಕ ಭಕ್ತರನ್ನು ರಂಜಿಸಿದರು. ಸಾಂಪ್ರದಾಯಿಕ ಹಾಗೂ ಸಾಂಸ್ಕೃತಿಕ ನೃತ್ಯಗಳು ಮೆರವಣಿಗೆಯ ಮೆರುಗು ಹೆಚ್ಚಿಸಿದವು. ಸಾವಿರಾರು ಭಕ್ತರ ಜಯಘೋಷದ ನಡುವೆ ಮೆರವಣಿಗೆ ಸಡಗರ, ಸಂಭ್ರಮದಿಂದ ದರ್ಗಾ ತಲುಪಿತು. ರಾತ್ರಿ ದೀಪಗಳ ಬೆಳಕಿನಲ್ಲಿ ದರ್ಗಾ ಆವರಣ ಕಂಗೊಳಿಸುತ್ತಿದ್ದು, ಉರುಸ್‌ನ ಸಡಗರಕ್ಕೆ ಮತ್ತಷ್ಟು ಮೆರುಗು ತಂದಿದೆ.

# ಈಶಾನ್ಯ ಶಿಕ್ಷಕರ ಕ್ಷೇತ್ರಕ್ಕೆ ಚುನಾವಣೆ ಘೋಷಣೆ

**ಉದಯವಾಹಿನಿ, ಕಲಬುರಗಿ**

ಭಾರತ ಚುನಾವಣಾ ಆಯೋಗವು ಕರ್ನಾಟಕ ವಿಧಾನ ಪರಿಷತ್ ಈಶಾನ್ಯ ಶಿಕ್ಷಕರ ಕ್ಷೇತ್ರದ ದ್ವೈವಾರ್ಷಿಕ ಚುನಾವಣೆ ಘೋಷಣೆ ಮಾಡಿದ್ದು, ಅದರಂತೆ 2026ರ ಅಕ್ಟೋಬರ್ 23ಕ್ಕೆ ಮತದಾನ ಮತ್ತು ಅಕ್ಟೋಬರ್ 27ಕ್ಕೆ ಮತ ಎಣಿಕೆ ನಡೆಯಲಿದೆ. ಈ ಸಂದರ್ಭದಲ್ಲಿ ಚುನಾವಣೆಯ ಮಾದರಿ ನೀತಿ ಸಂಹಿತೆ ಹಾಗೂ ಮಾರ್ಗಸೂಚಿಗಳನ್ನು ಉಲ್ಲಂಘಿಸಿದಲ್ಲಿ ಅಂತಹವರ ವಿರುದ್ಧ ಲಿಖಿತವಾಗಿ ಅಥವಾ ದೂರವಾಣಿ ಮುಖಾಂತರ ಸಾರ್ವಜನಿಕರು ದೂರು ನೀಡಲು ಅನುಕೂಲವಾಗುವಂತೆ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ದೂರು ಮೇಲ್ವಿಚಾರಣಾ ಕೋಶವನ್ನು ತೆರೆಯಲಾಗಿದೆ ಎಂದು ಕ್ಷೇತ್ರದ ಚುನಾವಣಾಧಿಕಾರಿಯಾಗಿರುವ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸ್ರೀಂ ತಿಳಿಸಿದ್ದಾರೆ. ಈ ದೂರು ನಿರ್ವಹಣಾ ಕೋಶವು ದಿನದ 24 ಗಂಟೆಯೂ ಕಾರ್ಯನಿರ್ವಹಿಸಲಿದ್ದು, ದೂರು ಸಲ್ಲಿಸಬಯಸುವವರು ದೂರವಾಣಿ ಸಂಖ್ಯೆ 08472-200255 ಮೂಲಕ ಕರೆ ಮಾಡಿ ತಮ್ಮ ದೂರನ್ನು ಸಲ್ಲಿಸಬಹುದಾಗಿದೆ. ಇದಲ್ಲದೇ ಲಿಖಿತವಾಗಿ ಪತ್ರ ಮೂಲಕ ಸಹ ಪ್ರಾದೇಶಿಕ ಆಯುಕ್ತರ ಕಾರ್ಯಾಲಯ, ಚುನಾವಣಾ ಶಾಖೆ, 2ನೇ ಮಹಡಿ, ಜಿಲ್ಲಾಡಳಿತ ಭವನ, ಸ್ಟೇಷನ್ ರಸ್ತೆ, ಕಲಬುರಗಿ 585102 ವಿಳಾಸಕ್ಕೆ ಸಲ್ಲಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

# ಇ-ಕೆವೈಸಿ ಉಚಿತ, ಯಾರೂ ಶುಲ್ಕ ನೀಡಬೇಡಿ

**ಉದಯವಾಹಿನಿ, ಚಿಂಚೋಳಿ**

ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ನಿರ್ದೇಶನದಂತೆ ಪ್ರತಿ ಐದು ವರ್ಷಗಳಿಗೊಮ್ಮೆ ಕಡ್ಡಾಯವಾಗಿ ಇ-ಕೆವೈಸಿ ನಿರ್ವಹಿಸುವಂತೆ ನಿರ್ದೇಶಿಸಿರುವ ಹಿನ್ನಲೆಯಲ್ಲಿ ಇ-ಕೆವೈಸಿ ಮಾಡಿಸದ ಪಡಿತರ ಚೀಟಿದಾರರು ಇ-ಕೆವೈಸಿ ಕಡ್ಡಾಯವಾಗಿ ಮಾಡಿಕೊಳ್ಳುವಂತೆ ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿ ತಿಳಿಸಿದ್ದಾರೆ. ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು, ತಾಲ್ಲೂಕಿನಲ್ಲಿ ಐದು ವರ್ಷ ಪೂರ್ಣಗೊಂಡಿರುವ ಒಟ್ಟು 1,00,565 ಫಲಾನುಭವಿಗಳಲ್ಲಿ 53,572 ಫಲಾನುಭವಿಗಳ ಶೇ.53.27ಪ್ರತಿಶತಃದಷ್ಟು ಇ-ಕೆವೈಸಿ ಪೂರ್ಣಗೊಂಡಿರುತ್ತದೆ,ಇನ್ನುಳಿದ 46,993 ಫಲಾನುಭವಿಗಳು ಇ-ಕೆವೈಸಿ ಬಾಕಿಯಿದೆ. ಇ-ಕೆವೈಸಿ ಕಾರ್ಯ ಫಲಾನುಭವಿಗಳ ಪಟ್ಟಿಯನ್ನು ಆಯಾ ನ್ಯಾಯಬೆಲೆ ಅಂಗಡಿ ವರ್ತಕರಿಗೆ ನೀಡಿದ್ದು,ಇ-ಕೆವೈಸಿ ಕಾರ್ಯ ಚಾಲ್ತಿಯಲ್ಲಿದೆ ಫಲಾನುಭವಿಗಳು ಖುದ್ದಾಗಿ ನ್ಯಾಯಬೆಲೆ ಅಂಗಡಿಗಳಿಗೆ ಕಡ್ಡಾಯವಾಗಿ ತೆರಳಿ ಇ-ಕೆವೈಸಿ ಮಾಡಿಸಿಕೊಳ್ಳಬೇಕು. ಪಡಿತರ ಚೀಟಿದಾರರ ಇ-ಕೆವೈಸಿ ಗಡುವು 2026 ಅಕ್ಟೋಬರ್ 20ವರೆಗೆ ವಿಸ್ತರಿಸಲಾಗಿದ್ದು ಯಾವುದೇ ಶುಲ್ಕ ಇರುವುದಿಲ್ಲ ಉಚಿತವಾಗಿ ಇ-ಕೆವೈಸಿ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

# ಜೋರು ಮಳೆ, ಕೈಕೊಟ್ಟ ಹೆಡ್ ಲೈಟ್: ಮೊಬೈಲ್ ಟಾರ್ಚ್ ಬಳಸಿ ಕತ್ತಲು ರಸ್ತೆಯಲ್ಲಿ ಬಸ್

**ಉದಯವಾಹಿನಿ, ಕೊಪ್ಪಳ**

ಪ್ರಯಾಣಿಕರ ಸುರಕ್ಷತೆಯಲ್ಲಿ ಗಂಭೀರ ಲೋಪವಾಗಿರುವ ಘಟನೆ ವರದಿಯಾಗಿದ್ದು, ರಾಜ್ಯದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಸ್‌ನ ಎರಡೂ ಹೆಡ್‌ಲೈಟ್‌ಗಳು ಮಾರ್ಗಮಧ್ಯೆ ಕೈಕೊಟ್ಟ ಹಿನ್ನೆಲೆಯಲ್ಲಿ ಚಾಲಕ ಕತ್ತಲು ರಸ್ತೆಯಲ್ಲಿ ಮೊಬೈಲ್ ಟಾರ್ಚ್ ಬೆಳಕಿನ ನೆರವಿನಿಂದ ಬಸ್ ಚಲಾಯಿಸಿದ ಘಟನೆ ನಡೆದಿದೆ. ಈ ಅಪಾಯಕಾರಿ ಸನ್ನಿವೇಶವನ್ನು ಸೆರೆಹಿಡಿದಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಕೊಪ್ಪಳ ಡಿಪೋಗೆ ಸೇರಿದ ಈ ಬಸ್ ಕೊಪ್ಪಳದಿಂದ ಶಹಾಪುರಕ್ಕೆ ತೆರಳುತ್ತಿತ್ತು. ಪ್ರಯಾಣದ ಮಧ್ಯೆ ತಾಂತ್ರಿಕ ದೋಷದಿಂದ ಬಸ್‌ನ ಹೆಡ್‌ಲೈಟ್‌ಗಳು ಏಕಾಏಕಿ ಸ್ಥಗಿತಗೊಂಡಿದ್ದು, ಮುಂದಿನ ರಸ್ತೆ ಬಹುತೇಕ ಸಂಪೂರ್ಣ ಕತ್ತಲಿನಲ್ಲಿ ಮುಳುಗಿತ್ತು. ಇದರ ಜೊತೆಗೆ ನಿರಂತರ ಮಳೆ ಹಾಗೂ ಒದ್ದೆಯಾದ ರಸ್ತೆಯಿಂದಾಗಿ ಚಾಲಕನಿಗೆ ರಸ್ತೆ ಕಾಣುವುದು ಮತ್ತಷ್ಟು ಕಷ್ಟವಾಗಿತ್ತು. ಬಸ್‌ನ್ನು ಸುರಕ್ಷಿತವಾಗಿ ರಸ್ತೆ ಬದಿಗೆ ನಿಲ್ಲಿಸುವ ಬದಲು, ಚಾಲಕ ವಿಂಡ್‌ಶೀಲ್ಡ್ ಬಳಿ ಮೊಬೈಲ್ ಫೋನ್‌ನ ಟಾರ್ಚ್ ಬೆಳಕು ಹಿಡಿದುಕೊಂಡೇ ಕತ್ತಲಿನಲ್ಲಿ ಬಸ್ ಚಾಲನೆ ಮುಂದುವರಿಸಿದ್ದಾರೆ. ಭಯಭೀತರಾಗಿದ್ದ ಪ್ರಯಾಣಿಕರೊಬ್ಬರು ಬಸ್‌ನೊಳಗಿನಿಂದ ಚಿತ್ರೀಕರಿಸಿದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೇಗವಾಗಿ ಹರಿದಾಡಿದೆ. ವಿಡಿಯೊದಲ್ಲಿ ಕತ್ತಲಾದ ರಸ್ತೆಯನ್ನು ಕಂಡು ಆತಂಕಗೊಂಡಿರುವ ಪ್ರಯಾಣಿಕರು ತಮ್ಮ ಭಯವನ್ನು ವ್ಯಕ್ತಪಡಿಸುತ್ತಿರುವುದು ಕೇಳಿಸುತ್ತದೆ. ಕೆಲವರು ಪರಿಸ್ಥಿತಿ ಭಯಾನಕವಾಗಿದೆ ಎಂದು ಹೇಳುತ್ತಿದ್ದು, ಹೆಚ್ಚಿನ ಮೊಬೈಲ್‌ಗಳ ಟಾರ್ಚ್ ಬೆಳಕಿನ ಮೂಲಕ ರಸ್ತೆಯನ್ನು ಕಾಣುವಂತೆ ಸಹ ಪ್ರಯಾಣಿಕರಿಗೆ ಮನವಿ ಮಾಡುತ್ತಿರುವುದು ಕೇಳಿಸುತ್ತದೆ.



## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಮಧ್ಯಾಹ್ನ | 07:30 ರಿಂದ 09:00 |
| ಯಮಗಂಡ ಕಾಲ | ಬೆಳಿಗ್ಗೆ | 03:00 ರಿಂದ 04:30 |

**ಮೇಷ**
ಹಾಸ್ಯಪ್ರಜ್ಞೆಯಿರುವ ಸಂಬಂಧಿಕರ ಸಂಗ ನಿಮ್ಮ ಉದ್ವೇಗವನ್ನು ಕಡಿಮೆ ಮಾಡುತ್ತದೆ ಮತ್ತು ನಿಮಗೆ ತುಂಬಾ ಅಗತ್ಯವಾಗಿರುವ ಶಮನವನ್ನು ನೀಡುತ್ತದೆ. ಈ ರೀತಿಯ ಸಂಬಂಧಿಗಳನ್ನು ಹೊಂದಿದ ನೀವೇ ಅದೃಷ್ಟವಂತರು. ಇಂದು ನಿಮ್ಮ ಯಾವುದೇ ಚಲಿಸಬಲ್ಲ ಅಸ್ತಿಯನ್ನು ಕದಿಯಬಹುದು ಆದ್ದರಿಂದ ಸಾಧ್ಯವಾದಷ್ಟು ಅದರ ಬಗ್ಗೆ ಗಮನ ಹರಿಸಿ. ಸಂಬಂಧಿಗಳು / ಸ್ನೇಹಿತರು ಒಂದು ಅದ್ಭುತ ಸಂಜೆಗಾಗಿ ಬರುತ್ತಾರೆ.

**ವೃಷಭ**
ನೀವು ಇದು ಒಳ್ಳೆಯ ಆರೋಗ್ಯಹೊಂದಿರುವುದರಿಂದ ಅದು ನಿಮಗೆ ಯಶಸ್ಸು ನೀಡುವ ಸಾಧ್ಯತೆಯಿದೆ. ಆದರೆ ನಿಮ್ಮ ಶಕ್ತಿಯನ್ನು ನಾಶಪಡಿಸುವ ಎಲ್ಲವನ್ನೂ ನೀವಿಂದು ತಪ್ಪಿಸಬೇಕು. ಇಂದು ನಿಮ್ಮ ಹಣವನ್ನು ಅನೇಕ ವಿಷಯಗಳಿಗೆ ಖರ್ಚು ಮಾಡಬಹುದು, ನೀವು ಇಂದು ಉತ್ತಮ ಬಜೆಟ್ ಅನ್ನು ಯೋಜಿಸಬೇಕಾಗಿದೆ, ಇದು ನಿಮ್ಮ ಅನೇಕ ಸಮಸ್ಯೆಗಳನ್ನು ತೆಗೆದುಹಾಕುತ್ತದೆ.

**ಮಿಥುನ**
ನಿಮ್ಮನ್ನು ನೀವೇ ಅನಗತ್ಯವಾಗಿ ದೂಷಿಸುವುದು ನಿಮ್ಮ ಚೈತನ್ಯವನ್ನು ಕುಗ್ಗಿಸಬಹುದು. ಹಣವನ್ನು ಯೋಚಿಸದೆ ಮತ್ತು ಪರಿಗಣಿಸದೆ ಖರ್ಚುಮಾಡುವುದು, ನಿಮಗೆ ಎಷ್ಟು ನಷ್ಟ ಮಾಡಬಹುದು ಎಂಬುದು ಇಂದು ನಿಮಗೆ ಅರ್ಥವಾಗಬಹುದು. ಮನೆಯಲ್ಲಿ ಸಮಸ್ಯೆಗಳು ಉದ್ಭವವಾಗುವಂತೆ ತೋರುತ್ತಿರುವುದರಿಂದ ನಿಮ್ಮ ಮಾತುಗಳ ಬಗ್ಗೆ ಎಚ್ಚರ ವಹಿಸಿ.

**ಕರ್ಕಾಟಕ**
ಆರೋಗ್ಯ ಪರಿಪೂರ್ಣವಾಗಿರುತ್ತದೆ. ನೀವು ವಿವಾಹಿತರಾಗಿದ್ದರೆ ನಿಮ್ಮ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ ಏಕೆಂದರೆ ನೀವು ಅದನ್ನು ಮಾಡದಿದ್ದರೆ ಅವರ ಆರೋಗ್ಯವು ಹದಗೆಡಬಹುದು ಮತ್ತು ಅವರ ಆರೋಗ್ಯದ ಮೇಲೆ ಬಹಳಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಕೆಲವರಿಗೆ ಕುಟುಂಬದಲ್ಲಿ ಒಂದು ಹೊಸ ಆಗಮನ ಸಂಭ್ರಮಾಚರಣೆ ಮತ್ತು ಆನಂದದ ಕ್ಷಣಗಳನ್ನು ತೆರೆದಿಡುತ್ತದೆ.

**ಸಿಂಹ**
ನಿಮ್ಮ ಆಹಾರವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ ಮತ್ತು ಫಿಟ್ ಆಗಿ ಉಳಿಯಲು ವ್ಯಾಯಾಮ ಮಾಡಿ. ನೀವು ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಮತ್ತು ಈ ಕೆಲಸದಲ್ಲಿ ದೀರ್ಘಕಾಲ ತೊಡಗಿಸಿಕೊಂಡಿದ್ದರೆ, ಇಂದು ನೀವು ಸಾಲ ಪಡೆಯಬಹುದು. ಯುವಕರನ್ನು ಹೊಂದಿರುವ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಒಳ್ಳೆಯ ಸಮಯ.

**ಕನ್ಯಾ**
ಆರೋಗ್ಯದ ಬಗ್ಗೆ ಸ್ವಲ್ಪ ಗಮನ ನೀಡಬೇಕು. ನೀವು ಜನರು ನಿಮ್ಮಿಂದ ಏನು ಬಯಸುತ್ತಾರೆಂದು ನಿಖರವಾಗಿ ತಿಳಿದಿರುವಂತೆ. ಆದರೆ ಇಂದು ನಿಮ್ಮ ಖರ್ಚುಗಳಲ್ಲಿ ತುಂಬಾ ಉದಾರಿಯಾಗದಿರಲು ಪ್ರಯತ್ನಿಸಿ. ಸಂಬಂಧಿಗಳಿದ್ದಲ್ಲಿ ಸಣ್ಣ ಪ್ರಯಾಣ ನಿಮ್ಮ ದೈನಂದಿನ ಒತ್ತಡದ ಜೀವನದಿಂದ ನಿಮಗೆ ವಿಶ್ರಾಂತಿ ತರುತ್ತದೆ ನಿಮ್ಮ ಹೃದಯಕ್ಕೆ ಪ್ರಿಯವಾಗುವ ಯಾರನ್ನಾದರೂ ಸಂಧಿಸುವ ಅವಕಾಶಗಳು ಇಂದು ಬಲವಾಗಿವೆ.

**ತುಲಾ**
ಹಾಸ್ಯಪ್ರಜ್ಞೆಯಿರುವ ಸಂಬಂಧಿಕರ ಸಂಗ ನಿಮ್ಮ ಉದ್ವೇಗವನ್ನು ಕಡಿಮೆ ಮಾಡುತ್ತದೆ. ಮತ್ತು ನಿಮಗೆ ತುಂಬಾ ಅಗತ್ಯವಾಗಿರುವ ಶಮನವನ್ನು ನೀಡುತ್ತದೆ. ಈ ರೀತಿಯ ಸಂಬಂಧಿಗಳನ್ನು ಹೊಂದಿದ ನೀವೇ ಅದೃಷ್ಟವಂತರು. ಲೋನ್ ತೆಗೆದುಕೊಂಡಿರುವ ಜನರಿಗೆ ಲೋನ್ ನ ಮೊತ್ತವನ್ನು ಮರುಪಾವತಿಸುವಲ್ಲಿ ತೊಂದರೆಗಳು ಉಂಟಾಗಬಹುದು.

**ವೃಶ್ಚಿಕ**
ನಿಮ್ಮ ಚೈತನ್ಯವನ್ನು ಪುನಃ ಸಂಪಾದಿಸಲು ವಿಶ್ರಾಂತಿ ತೆಗೆದುಕೊಳ್ಳಿ. ಜೀವನದ ಕೆಟ್ಟ ಕಾಲದಲ್ಲಿ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ ಆದ್ದರಿಂದ ಇಂದಿನಿಂದಲೇ ನಿಮ್ಮ ಹಣವನ್ನು ಸಂಗ್ರಹಿಸುವ ಬಗ್ಗೆ ಯೋಚಿಸಿ ಇಲ್ಲದಿದ್ದರೆ ನೀವು ತೊಂದರೆಗೊಳಗಾಗಬಹುದು. ನಿಮ್ಮ ಕುಟುಂಬದ ಕಲ್ಯಾಣಕ್ಕಾಗಿ ಕೆಲಸ ಮಾಡಿ. ನಿಮ್ಮ ಕಾರ್ಯಗಳು ದುರಾಶೆಯಿಂದಲ್ಲದೇ ಪ್ರೀತಿ ಮತ್ತು ಸಕಾರಾತ್ಮಕ ದೃಷ್ಟಿಯಿಂದ ನಡೆಯಬೇಕು.

**ಧನಸ್ಸು**
ಸ್ನೇಹಿತರೊಂದಿಗಿನ ಸಂಜೆ ಆಹ್ಲಾದಕರವಾಗಿದ್ದರೂ ಆದರೆ ವಿಪರೀತವಾಗಿ ತಿನ್ನುವುದು ನಿಮ್ಮ ಮರುದಿನದ ಮುಂಜಾನೆಗೆ ಅಸಮಾಧಾನವುಂಟುಮಾಡಬಹುದು. ಇಂದು ನೀವು ಒಳ್ಳೆಯ ಹಣ ಮಾಡುತ್ತೀರಿ – ಆದರೆ ಅದು ನಿಮ್ಮ ಕೈಯಿಂದ ಜಾರಿಹೋಗದಿರಲು ಪ್ರಯತ್ನಿಸಿ. ಕುಟುಂಬದ ಸದಸ್ಯರೊಂದಿಗೆ ಒಂದು ಶಾಂತಿಯುತ ಮತ್ತು ಶಾಂತ ದಿನವನ್ನು ಆನಂದಿಸಿ.

**ಮಕರ**
ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಈ ರಾಶಿಚಕ್ರದ ದೊಡ್ಡ ಉದ್ಯಮಿಗಳು ಇಂದು ತುಂಬಾ ಯೋಚಿಸಿ ಅರ್ಥಮಾಡಿಕೊಂಡು ಹಣದ ಹೂಡಿಕೆ ಮಾಡುವ ಅಗತ್ಯವಿದೆ. ನಿಮಗೆ ಕೆಟ್ಟ ಹವ್ಯಾಸಗಳ ಪ್ರಭಾವ ಬೀರಬಹುದಾದ ಕೆಟ್ಟ ಜನರಿಂದ ದೂರವಿರಿ. ಇಂದು, ನೀವು ಮತ್ತು ನಿಮ್ಮ ಪ್ರೀತಿ ಸಂಗಾತಿ ಪ್ರೀತಿಯ ಸಾಗರದಲ್ಲಿ ತೇಲುತ್ತೀರಿ

**ಕುಂಭ**
ಕುಡಿಯುವ ಅಭ್ಯಾಸವನ್ನು ತೆಗೆದುಹಾಕಲು ಇದೊಂದು ಅತ್ಯಂತ ಪವಿತ್ರವಾದ ದಿನ. ನೀವು ವೈನ್ ಕುಡಿಯುವುದು ಆರೋಗ್ಯದ ಪ್ರಾಣಾಂತಿಕ ಶತ್ರು ಎಂದು ನೀವು ಅರ್ಥ ಮಾಡಿಕೊಳ್ಳಬೇಕು ಮತ್ತು ಇದು ನಿಮ್ಮ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತದೆ. ನೀವು ವಿಪರೀತವಾಗಿ ಖರ್ಚು ಮಾಡುವುದನ್ನು ನಿಲ್ಲಿಸಿದಾಗ ಮಾತ್ರ ನಿಮ್ಮ ಹಣವು ನಿಮ್ಮ ಕೆಲಸಕ್ಕೆ ಬರುತ್ತದೆ,

**ಮೀನ**
ನಿಮ್ಮ ಮನಸ್ಥಿತಿಯನ್ನು ಬದಲಾಯಿಸಲು ಯಾವುದಾದರೂ ಸಾಮಾಜಿಕ ಸಭೆಗೆ ಹಾಜರಾಗಿ. ನೀವು ಪ್ರಯಾಣ ಮಾಡುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ, ನೀವು ಇದನ್ನು ಮಾಡದಿದ್ದರೆ ಸರಕುಗಳು ಕದಿಯುವ ಸಾಧ್ಯತೆಯಿದೆ. ಸ್ನೇಹಿತರ ಸಮಸ್ಯೆಗಳು ನಿಮಗೆ ಕೆಟ್ಟದೆನಿಸುವಂತೆ ಮಾಡಬಹುದು. ಪ್ರಣಯದ ನೆನಪುಗಳು ನಿಮ್ಮ ದಿನವನ್ನು ಆಕ್ರಮಿಸುತ್ತವೆ.

### ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆ ಗುರುತಿಸಿ ಈ ಬಾರಿ ಮೂವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುತ್ತಿದೆ

# 250 ಕೋಟಿ ರೂ. ನೀಡುವಂತೆ ವಿಟಿಯುಗೆ ರಾಜ್ಯ ಸರ್ಕಾರದ ಪತ್ರ

**ಉದಯವಾಹಿನಿ, ಬೆಳಗಾವಿ**
ವಿಟಿಯುಗೆ ಸೇರಿದ 610 ಕೋಟಿ ರೂಪಾಯಿ ಪೈಕಿ 250 ಕೋಟಿ ರೂಪಾಯಿ ಹಣವನ್ನು ಬೆಂಗಳೂರಲ್ಲಿನ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯಕ್ಕೆ (ಯುವಿಸಿಇ) ಗೆ ನೀಡುವ ಕುರಿತು ಪರಿಶೀಲಿಸುವಂತೆ ರಾಜ್ಯ ಸರ್ಕಾರದಿಂದ ಪತ್ರ ಬಂದಿರುವುದು ಸತ್ಯ. ಆದರೆ, ವಿಟಿಯು ಆಡಳಿತ ಮಂಡಳಿಯು ಸರ್ಕಾರದ ಮನವಿಯನ್ನು ನಯವಾಗಿ ತಿರಸ್ಕರಿಸಿದ್ದು, ವಿಶ್ವವಿದ್ಯಾಲಯದ ಅಭಿವೃದ್ಧಿ ಹಾಗೂ ಸಿಬ್ಬಂದಿ ವೇತನಕ್ಕೆ ಹಣ ಬಳಸಿಕೊಳ್ಳುತ್ತಿರುವ ಬಗ್ಗೆ ತಿಳಿಸಲಾಗಿದೆ ಎಂದು ಕುಲಪತಿ ಪ್ರೊ. ಎಸ್. ವಿದ್ಯಾಶಂಕರ ಹೇಳಿದ್ದಾರೆ.

ವಿಟಿಯು ಅತಿಥಿ ಗೃಹದಲ್ಲಿ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ಆದಾಯ ತೆರಿಗೆ (ಐಟಿ) ಇಲಾಖೆಯೊಂದಿಗೆ 13 ವರ್ಷಗಳ ಸುದೀರ್ಘ ಹೋರಾಟದ ಬಳಿಕ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು)ಕ್ಕೆ ಸೇರಿದ್ದ 700 ಕೋಟಿ ಪೈಕಿ 610 ಕೋಟಿ ಹಣ ಸಿಕ್ಕಿದೆ. ಅದರಲ್ಲಿನ 500 ಕೋಟಿ ರೂ. ಹಣವನ್ನು 10 ವರ್ಷಕ್ಕೆ ಎಫ್‌ಡಿ ಇಡುತ್ತೇವೆ. ಅದರ ಬಡ್ಡಿ ಹಣವನ್ನು ಕೂಡ ತೆಗೆಯುವುದಿಲ್ಲ.

2012–13ರಲ್ಲಿ ಆದಾಯ ತೆರಿಗೆ ಇಲಾಖೆಯು ವಿಟಿಯುಗೆ ನೋಟಿಸ್ ನೀಡಿ, ವಿಶ್ವವಿದ್ಯಾಲಯ ಸ್ಥಾಪನೆಯಾದಾಗಿನಿಂದಲೂ 250 ಕೋಟಿ ರೂ.ಗಳಿಗೂ ಆದಾಯ ತೆರಿಗೆ ಪಾವತಿಸಬೇಕೆಂದು ಬೇಡಿಕೆ ಇಟ್ಟಿತ್ತು. ಐಟಿ ಕಾಯ್ದೆ 12(ಎ) ಅಡಿಯಲ್ಲಿ ವಿಟಿಯು ತೆರಿಗೆ ವಿನಾಯಿತಿ



- ಅಭಿವೃದ್ಧಿ ಹಾಗೂ ಸಿಬ್ಬಂದಿ ವೇತನಕ್ಕೆ
- 700 ಕೋಟಿ ಪೈಕಿ 610 ಕೋಟಿ ಸಿಕ್ಕಿದೆ
- ಹಣವನ್ನು 10 ವರ್ಷಕ್ಕೆ ಎಫ್‌ಡಿ ಇಡುತ್ತೇವೆ

ಪಡೆದಿರಲಿಲ್ಲ. ಹೀಗಾಗಿ ವಿಶ್ವವಿದ್ಯಾಲಯವು ತೆರಿಗೆ ಬಾಕಿಯನ್ನು ಪಾವತಿಸಬೇಕೆಂದು ಐಟಿ ಇಲಾಖೆಯು ವಿವಿಯ ಕೆಲ ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಂಡಿತ್ತು. ವಿಟಿಯು ಈ ವಿಚಾರವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿತ್ತು. ವಿಶ್ವವಿದ್ಯಾಲಯವು 1999ರಲ್ಲಿಯೇ 12(ಎ) ಅಡಿ ತೆರಿಗೆ ವಿನಾಯಿತಿಗಾಗಿ ಅರ್ಜಿ ಸಲ್ಲಿಸಿತ್ತು.

ವಿಶ್ವವಿದ್ಯಾಲಯದ ನಾನಾ ಬ್ಯಾಂಕ್ ಖಾತೆಗಳಲ್ಲಿ ಒಟ್ಟು 450

> 10 ವರ್ಷ ಆದ ನಂತರ ಬಡ್ಡಿ ಹಣವನ್ನು ವಿವಿ ಸಿಬ್ಬಂದಿಗಳ ವೇತನಕ್ಕೆ ಬಳಸುವ ಕುರಿತು ನಿರ್ಣಯ ಕೈಗೊಂಡಿದ್ದೇವೆ. ಈಗ ಯಾವ ಬ್ಯಾಂಕಿನಲ್ಲಿ ಹಣವನ್ನು ಎಫ್‌ಡಿ ಇಡಬೇಕು ಎಂಬ ಕುರಿತು ಟೆಂಡರ್ ಕರೆದಿದ್ದು, ಶೀಘ್ರವೇ ಆ ಪ್ರಕ್ರಿಯೆ ಪೂರ್ಣ ಆಗುತ್ತದೆ ಎಂದಿದ್ದಾರೆ.
> – ಪ್ರೊ. ಎಸ್. ವಿದ್ಯಾಶಂಕರ, ಕುಲಪತಿ

ಕೋಟಿ ರೂ. ಕಾರ್ಪಸ್ ನಿಧಿ ಮತ್ತು ಇದರ ಜತೆಗೆ ವಿವಿಯ 250 ಕೋಟಿ ರೂ. ನಿಧಿ ಸೇರಿ ಒಟ್ಟು 700 ಕೋಟಿ ರೂ.ಗಳಿಗೂ ಅಧಿಕ ಮೊತ್ತವು ವಾಪಸ್ ಬರಲಿದೆ. ಈಗಾಗಲೇ 610 ಕೋಟಿ ರೂ. ಬಂದಿದ್ದು, ಅದನ್ನು 10 ವರ್ಷಗಳವರೆಗೆ ಬ್ಯಾಂಕ್‌ನಲ್ಲಿ ಎಫ್‌ಡಿ ಇಟ್ಟು, 11ನೇ ವರ್ಷದಿಂದ ಠೇವಣಿಯಿಂದ ದೊರೆಯುವ ಬಡ್ಡಿ ಆದಾಯವನ್ನು ಸಿಬ್ಬಂದಿಯ ವೇತನ ಪಾವತಿಗೆ ಬಳಸಲು ವಿಶ್ವವಿದ್ಯಾಲಯ ಯೋಜಿಸಿದೆ ಎಂದು ಪ್ರೊ.ಎಸ್.ವಿದ್ಯಾಶಂಕರ ವಿವರಿಸಿದ್ದಾರೆ.

ಸೆಪ್ಟೆಂಬರ್ 26ರಂದು ನಡೆಯಲಿರುವ ವಿಟಿಯು 26ನೇ ವಾರ್ಷಿಕ ಘಟಿಕೋತ್ಸವದ ಅಧ್ಯಕ್ಷತೆಯನ್ನು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ವಹಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದು ಹೇಳಿದ್ದಾರೆ.

## ತಡಕಲ್‌ನಲ್ಲಿ ಅಂಬಾಭವಾನಿ ಮಂದಿರ ಲೋಕಾರ್ಪಣೆ

**ಉದಯವಾಹಿನಿ, ಆಳಂದ**
ತಾಲ್ಲೂಕಿನ ತಡಕಲ್ ಗ್ರಾಮದಲ್ಲಿ ಮಾಜಿ ಶಾಸಕ ಸುಭಾಷ ಗುತ್ತೇದಾರ ಅವರು ತಮ್ಮ ತಾಯಿಯ ಸ್ಮರಣಾರ್ಥವಾಗಿ ನಿರ್ಮಿಸಿದ ಕಲ್ಯಾಣ ಕರ್ನಾಟಕ ಪ್ರದೇಶದ ಆರಾಧ್ಯ ದೇವಿ ತುಳಜಾಪೂರದ ಅಂಬಾಭವಾನಿ ಮಂದಿರದ ಲೋಕಾರ್ಪಣೆ ಹಾಗೂ ದೇವಿಯ ಮೂರ್ತಿಸ್ಥಾಪನೆ ಕಾರ್ಯಕ್ರಮ ರಂಭಾಪುರಿ, ಉಜ್ಜಯಿನಿ ಮತ್ತು ಕಾಶಿ ಪೀಠದ ಜಗದ್ಗುರುಗಳ ಪವಿತ್ರ ಸಾನಿಧ್ಯದಲ್ಲಿ ಅತ್ಯಂತ ಶ್ರದ್ಧಾಭಕ್ತಿಯಿಂದ ನೆರವೇರಿತು. ಪಂಚಪೀಠಾಧೀಶರ ಅಡ್ಡಪಲ್ಲಕ್ಕಿ ಮಹೋತ್ಸವದ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಜರುಗಿದ ಈ ಸಮಾರಂಭಕ್ಕೆ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ ದೇವಿಯ ಭಕ್ತಾದಿಗಳು ಸಾಕ್ಷಿಯಾಗಿ, ಸಮಾರಂಭದ ಯಶಸ್ಸಿಗೆ ಕಳೆಗಟ್ಟಿದರು. ಧರ್ಮಸಭೆಯಲ್ಲಿ 1,008 ಮುತ್ತೈದೆಯರಿಗೆ ಸೀರೆ ನೀಡಿ ಉಡಿ ತುಂಬುವ ಸಂಪ್ರದಾಯ ನೆರವೇರಿತು. ಕುಂಭ ಕಳಸದೊಂದಿಗೆ ಪುರವಂತರ ಕುಣಿತ, ಡೊಳ್ಳು ಸೇರಿದಂತೆ ಸಕಲ ವಾದ್ಯಗಳ ಮೊಳಗಿನೊಂದಿಗೆ ಮೂವರು ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಭವ್ಯ ಮೆರವಣಿಗೆ ಗಮನ ಸೆಳೆಯಿತು. ಬಳಿಕ ಮಹಾಪ್ರಸಾದ ವಿತರಣೆಯೂ ನಡೆಯಿತು. ಕಾರ್ಯಕ್ರಮದ ಪಾವನ ಸಾನಿಧ್ಯದಲ್ಲಿ ರಂಭಾಪುರಿ, ಉಜ್ಜಯಿನಿ ಹಾಗೂ ಕಾಶಿ



ಪೀಠದ ಉಭಯ ಜಗದ್ಗುರುಗಳು ಆಶೀರ್ವಚನ ನೀಡಿದರು. ಕಡಗಂಚಿಯ ವೀರಭದ್ರ ಶಿವಾಚಾರ್ಯರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ನಿರಗುಡಿಯ ಶ್ರೀ ಮಲ್ಲಯ್ಯಾ ಮುತ್ಯಾ, ನಂದಗಾಂವದ ರಾಜಶೇಖರ ಸ್ವಾಮೀಜಿ ಸೇರಿದಂತೆ ಅನೇಕ ಮಠಾಧೀಶರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಕಷ್ಟದ ಹಾದಿಯಿಂದ ಮೇಲೆ ಬಂದ ಗುತ್ತೇದಾರ ಕುಟುಂಬ ಯಾವತ್ತಿಗೂ ಧರ್ಮ ಮತ್ತು ದೇವರ ಕಾರ್ಯವನ್ನು ಮುಂದುವರೆಸಿಕೊಂಡು ಬಂದಿದೆ ಎಂದು ಸ್ಮರಿಸಿದ ರಂಭಾಪುರಿ ಹಾಗೂ ಉಜ್ಜಯಿನಿ ಜಗದ್ಗುರುಗಳು, ಸುಭಾಷ ಗುತ್ತೇದಾರ ಅವರಿಗೆ ರಾಜಕೀಯದಲ್ಲಿ ಉಜ್ವಲ ಭವಿಷ್ಯ ಅಡಗಿದೆ ಎಂದು ತಮ್ಮ ಆಶೀರ್ವಚನದಲ್ಲಿ ನುಡಿದರು.

## ವಿದ್ಯಾರ್ಥಿ ಮೇಲೆ ಹಲ್ಲೆ, ನಿರ್ವಾಹಕ ಅಮಾನತಿಗೆ ಪಟ್ಟು

**ಉದಯವಾಹಿನಿ, ಔರಾದ್**
ವಿದ್ಯಾರ್ಥಿ ಮೇಲೆ ಹಲ್ಲೆ ನಡೆಸಿದ ಔರಾದ್ ಘಟಕದ ನಿರ್ವಾಹಕ ಧೂಳಪ್ಪ ಅವರನ್ನು ಕೂಡಲೇ ಅಮಾನತು ಮಾಡಬೇಕು ಎಂದು ಆಗ್ರಹಿಸಿ ಎಬಿವಿಪಿ ಕಾರ್ಯಕರ್ತರು ಬುಧವಾರ ಬೆಳ್ಳಂಬೆಳಗ್ಗೆ ಪಟ್ಟಣದ ಬಸ್ ನಿಲ್ದಾಣದ ಎದುರು ಬೃಹತ್ ಪ್ರತಿಭಟನೆ ನಡೆಸಿದರು.

ಬೆಳಗ್ಗೆ 7 ಗಂಟೆಗೆ ಆರಂಭವಾದ ಪ್ರತಿಭಟನೆಯಲ್ಲಿ ಎಬಿವಿಪಿ ಕಾರ್ಯಕರ್ತರು ಹಾಗೂ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ನಿಲ್ದಾಣದ ಎದುರು ಜಮಾಯಿಸಿ, ನಿರ್ವಾಹಕ ಧೂಳಪ್ಪ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಕೆಲಕಾಲ ಬಸ್ ತಡೆದು ಪ್ರತಿಭಟನೆ ನಡೆಸಿದ್ದರಿಂದ ಸಾರಿಗೆ ಸಂಚಾರಕ್ಕೆ ಅಡಚಣೆ ಉಂಟಾಯಿತು. ವಿದ್ಯಾರ್ಥಿಗಳೊಂದಿಗೆ ಅನುಚಿತವಾಗಿ ವರ್ತಿಸಿ ಹಲ್ಲೆ ನಡೆಸಿದ ಘಟನೆ ಸಂಬಂಧಿಸಿದಂತೆ ಸಾರಿಗೆ ಇಲಾಖೆ ಗಂಭೀರವಾಗಿ ಪರಿಗಣಿಸಿ ಕೂಡಲೇ ಕ್ರಮ ಕೈಗೊಳ್ಳಬೇಕು. ನಿರ್ವಾಹಕನನ್ನು ಅಮಾನತು ಮಾಡಿ ತನಿಖೆ ನಡೆಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ನಿರ್ವಾಹಕನ



ವಿರುದ್ಧ ಕ್ರಮ ಕೈಗೊಳ್ಳುವವರೆಗೆ ಪ್ರತಿಭಟನೆ ಹಿಂಪಡೆಯುವುದಿಲ್ಲ ಎಂದು ಎಬಿವಿಪಿ ಕಾರ್ಯಕರ್ತರು ಪಟ್ಟು ಹಿಡಿದರು. ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆ ಘಟಕ ವ್ಯವಸ್ಥಾಪಕ ಮಲ್ಲಿಕಾರ್ಜುನ ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಿದರು. ಆದರೆ, ಜಿಲ್ಲಾ ಮಟ್ಟದ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಅಮಾನತು ಕುರಿತು ಸ್ಪಷ್ಟ ಭರವಸೆ ನೀಡಬೇಕು ಎಂದು ಕಾರ್ಯಕರ್ತರು ಒತ್ತಾಯಿಸಿದರು. ಬಳಿಕ ಸಾರಿಗೆ ಇಲಾಖೆಯ ಡಿಟಿಒ ಶಾರದಾದೇವಿ ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಿದರು. ನಿರ್ವಾಹಕ ಧೂಳಪ್ಪ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

## ಪ್ರತಾಪ ಸಿಂಹ ಬಂಧನಕ್ಕೆ ಡಿಎಸ್‌ಎಸ್ ಒತ್ತಾಯ



**ಉದಯವಾಹಿನಿ, ಬಳ್ಳಾರಿ**
ಮನುವಾದಿ ಮನಸ್ಸಿನಿಂದ ಟಿ.ನರಸಿಪುರದಲ್ಲಿ ಗಣೇಶ ವಿಸರ್ಜನೆ ವೇಳೆ ದಲಿತ ಸಂಘಟನೆಗಳ ನೀಲಿ ಶಾಲು ಮತ್ತು ಅಂಬೇಡ್ಕರ್ ವಿಚಾರಧಾರೆ ಬಗ್ಗೆ ಡಿಎಸ್ ಎಸ್ ಮುಖಂಡರಿಗೆ ಅರಿವಿಲ್ಲ ಎಂದು ಅವಹೇಳನವಾಗಿ ಮಾತನಾಡಿರುವ ಮೈಸೂರಿನ ಮಾಜಿ ಸಂಸದ ಪ್ರತಾಪ್ ಸಿಂಹ್ ಅವರ ಮೇಲೆ ಪ್ರಕರಣ ದಾಖಲಿಸಿ, ಬಂಧಿಸಬೇಕು ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಘಟನಾ ಸಂಚಾಲಕ ಎ.ಮಾನಯ್ಯ ಆಗ್ರಹಿಸಿದ್ದಾರೆ. ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈ ಬಗ್ಗೆ ಅರಿವಿಲ್ಲದ ಪ್ರತಾಪ್ ಸಿಂಹರವರು ದ.ಸಂ.ಸ ಮತ್ತು ದಲಿತರನ್ನು ಹೀಯಾಳಿಸಿ ಮಾತಾಡಿರುವುದು ಅಕ್ಷಮ್ಯ ಅಪರಾಧ. ಆರ್ ಎಸ್ ಎಸ್ ಮತ್ತು ಬಿಜೆಪಿಯು ಕೋಮುವಾದ, ಹಿಂಸೆ, ಜಾತಿ ತಾರತಮ್ಯದ ಪ್ರಚೋದನಾ ಸಂಗತಿಗಳನ್ನು ಸಮಾಜದಲ್ಲಿ ಬಿತ್ತಿ, ಸಮಾಜದ ಸ್ವಾಸ್ಥ್ಯ ಹಾಳು ಮಾಡುವುದೇ ಈ ಮನುವಾದಿ ಕುತಂತ್ರದ ಬುದ್ಧಿಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

## ಹಿರಿಯ ನಾಗರಿಕರಿಗೆ ಡಿಜಿಟಲ್ ಸಾಕ್ಷರತಾ ತರಬೇತಿ

**ಉದಯವಾಹಿನಿ, ಬಸವನಬಾಗೇವಾಡಿ**
ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ, ತಾಲ್ಲೂಕ ಕಾನೂನು ಸೇವೆಗಳ ಸಮಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ತಾಲ್ಲೂಕು ಆಡಳಿತ ಮತ್ತು ತಾಪಂ, ನಿವೃತ್ತ ಸರ್ಕಾರಿ ನೌಕರರ ಸಂಘ ಹಾಗೂ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸಂಸ್ಥೆಗಳು ಇವರ ಸಂಯುಕ್ತ ಆಶ್ರಯದಲ್ಲಿ ಹಿರಿಯ ನಾಗರಿಕರಿಗೆ ಕಾನೂನು ಅರಿವು ಮತ್ತು ಡಿಜಿಟಲ್ ಸಾಕ್ಷರತಾ ತರಬೇತಿ ಕಾರ್ಯಕ್ರಮವನ್ನು ಪಟ್ಟಣದ ತಾಪಂ ಸಭಾ ಭವನದಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿತ್ತು.

ಹಿರಿಯ ಸಿವಿಲ್ ನ್ಯಾ.ಶಶಿಧರ್ ಎಂ ಗೌಡ. ತಾಲ್ಲೂಕು ಪಂಚಾಯತ್ ಇಓ ವೆಂಕಟೇಶ್ ವಂದಾಲ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು. ವಿಶೇಷ ಚೇತನರಿಗೆ ಹಾಗೂ ಹಿರಿಯ ನಾಗರಿಕರ ಸೇವಾ ಸೌಲಭ್ಯಗಳು ಕಾನೂನು ಕಾಯ್ದೆಗಳ ಕುರಿತು ಕಾನೂನು ಅರಿವು ನೆರವನ್ನು ಹಮ್ಮಿಕೊಂಡು ವಿಶೇಷ ಚೇತನರಿಗೆ ಮತ್ತು ಹಿರಿಯ ನಾಗರಿಕರಿಗೆ ಇರುವ ಕಾಯ್ದೆಗಳ ಬಗ್ಗೆ ಮಾಹಿತಿಯನ್ನು ತಿಳಿಸಿದರು. ಗ್ರೇಡ್ 2 ತಹಸೀಲ್ದಾರ್ ಎಸ್. ಎಚ್ ಅರಕೇರಿ, ಸಿಡಿಪಿಓ ಶಿಲ್ಪಾ ಹಿರೇಮಠ, ಕಲ್ಯಾಣಾಧಿಕಾರಿಗಳು ಜಿಲ್ಲಾ ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಬಿ ಜಗದೀಶ್ ಕೆ, ನ್ಯಾಯವಾದಿಗಳ ಸಂಘದ ಉಪಾಧ್ಯಕ್ಷ ಆರ್ ಎಸ್ ಪವಾರ, ಹಿರಿಯ ನಾಗರಿಕರ ಸೇವಾ ವೇದಿಕೆ ಅಧ್ಯಕ್ಷ ಆರ್ ಜಿ ಅಳ್ಳಗಿ, ರಾಜ್ಯ ಸರ್ಕಾರಿ ನಿವೃತ್ತ ನೌಕರ ಸಂಘ ಅಧ್ಯಕ್ಷ ಎಫ್ ಡಿ ಮೇಟಿ, ಡಾ.ಸಾಬೀರ್ ಪಟೇಲ ಇತರರು ಇದ್ದರು.



## ದಲಿತರ ನಿರಂತರ ಹತ್ಯೆ: ಸಚಿವ ಸ್ಥಾನಕ್ಕೆ ರಾಜಿನಾಮೆಗೆ ಒತ್ತಾಯ

**ಉದಯವಾಹಿನಿ, ಬಳ್ಳಾರಿ**
ರಾಜ್ಯದಲ್ಲಿ ನಿರಂತರವಾಗಿ ದಲಿತರ ಹತ್ಯೆ ನಡೆಯುತ್ತಿದೆ. ದಲಿತ ರಕ್ಷಣೆಗೆ ವಿಫಲರಾಗಿರುವುದರಿಂದ ನಿಷ್ಪ್ರಯೋಜಕ ಸಚಿವರಾಗಿರುವ ನೀವು, ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಪ್ರಗತಿಪರ ದಲಿತ ಸಂಘಟನೆಗಳ ಮುಖಂಡ ಹೆಚ್.ಹನುಮಂತಪ್ಪ ಆಗ್ರಹಿಸಿದ್ದಾರೆ. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು. ರಾಜ್ಯದಲ್ಲಿ 12 ದಲಿತರ ಹತ್ಯೆ, ದೌರ್ಜನ್ಯ ಪ್ರಕರಣಗಳು ನಡೆದಿದ್ದರೂ ಈ ಬಗ್ಗೆ ಈ ದಿನದ ವರಗೆ ದಲಿತರೇ ಆಗಿರುವ ಗೃಹ ಸಚಿವ ಪ್ರಿಯಾಂಕ ಖರ್ಗೆ ಮೃತರ ಮನೆಗೆ ಹೋಗಿ ಸಾಂತ್ವನ ಹೇಳಿಲ್ಲ. ರಾಯಚೂರು ಜಿಲ್ಲೆ ಒಂದರಲ್ಲೇ ಏಳೆಂಟು ಪ್ರಕರಣಗಳು ನಡೆದಿವೆ. ನಿಮ್ಮಿಂದ ದಲಿತರ ರಕ್ಷಣೆ ಆಗುತ್ತಿಲ್ಲ. ಕೇವಲ ಆರ್ ಎಸ್ ಎಸ್ ಬಗ್ಗೆ ಅವಹೇಳನವಾಗಿ ಮಾತನಾಡುವುದಷ್ಟೇ ಮಾಡಿಕೊಂಡಿದ್ದೀರೆಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಅರುಣಾ ಚಲಂ. ವೈ, ವಸಂತ್, ನರಸಪ್ಪ, ಇ. ರಾಜೇಶ್, ಮಾರೆಣತಣ, ಶಿವಶಂಕರ್, ಹುಲಿಗೆಪ್ಪ, ಅಡವಿಸ್ವಾಮಿ, ಸುಂಕಣ್ಣ ಮೊದಲಾದವರು ಇದ್ದರು.

## ಖಾಸಗಿ ಶಿಕ್ಷಣ ಸಂಸ್ಥೆಗಳ ಬೇಡಿಕೆ: ಡಿಸೆಂಬರನಲ್ಲಿ ಬೃಹತ್ ಹೋರಾಟ

**ಉದಯವಾಹಿನಿ, ಬೀದರ್**
ರಾಜ್ಯದ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬರುವ ಡಿಸೆಂಬರನಲ್ಲಿ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ ಎಂದು ಕರ್ನಾಟಕ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಸಂಘದ ರಾಜ್ಯ ಅಧ್ಯಕ್ಷ ರೇವಣಸಿದ್ದಪ್ಪ ಜಲಾದೆ ಹೇಳಿದರು.

ಬಿಜಾಪುರದಲ್ಲಿ ನಡೆದ ಕರ್ನಾಟಕ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಸಂಘದ ರಾಜ್ಯ ಮಟ್ಟದ ವಿಶೇಷ ಸಭೆಯಲ್ಲಿ ಅವರು ಮಾತನಾಡಿದರು. ಹೋರಾಟಕ್ಕೆ ಮುಂಚೆ ಮುಖ್ಯಮಂತ್ರಿ ಹಾಗೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ನಿಯೋಗದಲ್ಲಿ ಭೇಟಿಯಾಗಿ ಮನವಿ ಪತ್ರ ಸಲ್ಲಿಸಲಾಗುವುದು ಎಂದು ತಿಳಿಸಿದರು. ಹೋರಾಟದ ಪೂರ್ವದಲ್ಲಿ ರಾಜ್ಯದ 16 ಜಿಲ್ಲೆಗಳ ಸಂಘದ ಜಿಲ್ಲಾ ಘಟಕಗಳನ್ನು ಬಲಪಡಿಸಲು ನಿರ್ಣಯಿಸಿದ್ದು, ರಾಜ್ಯ ಪದಾಧಿಕಾರಿಗಳಿಗೆ ವಿವಿಧ ಜಿಲ್ಲಾ ಘಟಕಗಳ ಜವಾಬ್ದಾರಿ ವಹಿಸಲಾಗಿದೆ ಎಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ರಾಜ್ಯ ಗೌರವ ಮಲ್ಲಿಕಾರ್ಜುನ ಲೋಣಿ ಮಾತನಾಡಿ, ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು ಸಂಘಟಿತವಾಗಿ ಹೋರಾಟ ನಡೆಸಿದ್ದಲ್ಲಿ ಮಾತ್ರ ಬೇಡಿಕೆಗಳ ಈಡೇರಿಕೆ ಸಾಧ್ಯವಿದೆ ಎಂದು ಹೇಳಿದರು.




## ಕಾಮಗಾರಿ ಸ್ಥಳಕ್ಕೆ ಜಿ.ಪಂ ಸಿಇಒ ಭೇಟಿ, ಪರಿಶೀಲನೆ

**ಉದಯವಾಹಿನಿ, ಹೊಸಪೇಟೆ**
ತಾಲೂಕಿನ ಡಣನಾಯಕನಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಡಣನಾಯಕನಕೆರೆ ಗ್ರಾಮದ ಡಣನಾಯಕನಕೆರೆ ಕೆರೆಯ ಪುನಶ್ಚೇತನ ಕಾಮಗಾರಿ ಸ್ಥಳಕ್ಕೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವಿಕಸಿತ ಭಾರತ –ರೋಜ್ಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ) ಗ್ಯಾರಂಟಿ ಯೋಜನೆಯಡಿ ಕೂಲಿ ಕಾರ್ಮಿಕರು ಕೆರೆ ಪುನಶ್ಚೇತನ ಕಾಮಗಾರಿ ಮಾಡುವ ಸ್ಥಳಕ್ಕೆ ಭೇಟಿ ನೀಡಿದ್ದ ಜಿ.ಪಂ. ಸಿಇಒ ಗರಿಮಾ ಪನ್ವರ್ ಅವರು ಕಾಮಗಾರಿ ಹಾಗೂ ಕಾಮಗಾರಿ ಹಾಜರಾತಿ ಪರಿಶೀಲನೆ ನಡೆಸಿ, ಕೂಲಿ ಕಾರ್ಮಿಕರೊಂದಿಗೆ ಸಂವಾದ ನಡೆಸಿದರು.

ಈ ಸಂದರ್ಭದಲ್ಲಿ ಕೊಟ್ರೇಶ ಎನ್ನುವ ಕೂಲಿ ಕಾರ್ಮಿಕ ನಮಗೆ ನಿರಂತರವಾಗಿ ಕೆಲಸ ನೀಡುವಂತೆ ಮನವಿ ಮಾಡಿದರು, ಕೂಲಿ ಕಾರ್ಮಿಕರು ಬೇಡಿಕೆ ಸಲ್ಲಿಸಿದರೆ, ಎಲ್ಲಾ ಕೂಲಿ ಕಾರ್ಮಿಕರಿಗೆ ಕೆಲಸ ನೀಡಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಸೂಚಿಸಿದರು. ಹಾಗೂ ಎನ್.ಎಮ್.ಆರ್ ತೆಗೆದಿರುವ ಎಲ್ಲಾ ಕೂಲಿ ಕಾರ್ಮಿಕರು ಶೇ. ನೂರರಷ್ಟು ಹಾಜರಾಗಿ ಕೆಲಸ ನಿರ್ವಹಿಸಬೇಕು. ಹಾಗೂ ಎರಡು ಬಾರಿ ಹಾಜರಾತಿ ಕಡ್ಡಾಯವಾಗಿ ಹಾಕಬೇಕೆಂದು ತಿಳಿಸಿದರು. ಸದರಿ ಗ್ರಾಮ ಪಂಚಾಯಿತಿಯಲ್ಲಿ 54.68% ಮಹಿಳೆಯರು



ಕೆಲಸ ಮಾಡುತ್ತಿದ್ದಾರೆಂದು ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದರು.

ಕೆಲಸದ ಸ್ಥಳದಲ್ಲಿ ಶುದ್ಧ ಕುಡಿಯುವ ನೀರು, ನೆರಳು, ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಹಾಗೂ ವಿಶೇಷ ಚೇತನರಿಗೆ 50% ರಿಯಾಯಿತಿ ನಿಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರಂತರವಾಗಿ ಕೆಲಸ ಒದಗಿಸಲಾಗುವುದು ಇದರ ಸದುಪಯೋಗ ಪಡೆದುಕೊಳ್ಳುವಂತೆ ಸಿಇಒ ವಿಬಿ ಜಿ ರಾಮ್ ಜಿ ಕೂಲಿ ಕಾರ್ಮಿಕರಿಗೆ ತಿಳಿಸಿದರು.

### ಸೈಬರ್ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿವೆ. ಆದ್ದರಿಂದ ಜನರು, ಅಪರಿಚಿತ ಲಿಂಕ್, ಎಪಿಕೆ ಫೈಲ್‌ಗಳನ್ನು ಕ್ಲಿಕ್ ಮಾಡುವಾಗ ಎಚ್ಚರವಹಿಸಬೇಕು

# ಗೊತ್ತಾಗದಂತೆ ಕ್ರೆಡಿಟ್, ಡೆಬಿಟ್ ಕಾರ್ಡ್‌ನಿಂದ ಲಕ್ಷ ಲಕ್ಷ ಮಾಯ!

**ಉದಯವಾಹಿನಿ, ಮಂಗಳೂರು**
ಸೈಬರ್ ಖದೀಮರ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. ಜನರಿಗೆ ವಿವಿಧ ರೀತಿಯಲ್ಲಿ ಖದೀಮರು ವಂಚಿಸಿ, ಲಕ್ಷ ಲಕ್ಷ ರೂಪಾಯಿ ದೋಚುತ್ತಿರುವ ಪ್ರಕರಣಗಳು ನಿತ್ಯ ಸಾಮಾನ್ಯವಾಗಿವೆ. ಈ ಕುರಿತು ಮಂಗಳೂರು ಸೈಬರ್ ಠಾಣೆಯಲ್ಲಿ ನಾಲ್ಕು ಪ್ರಕರಣಗಳು ದಾಖಲಾಗಿವೆ.

**ಕ್ರೆಡಿಟ್ ಕಾರ್ಡ್‌ನಿಂದ ಹಣ ಎಗರಿಸಿದ ಕಳ್ಳರು:** ಕ್ರೆಡಿಟ್ ಕಾರ್ಡ್ ವಿವರಗಳನ್ನು ಅಕ್ರಮವಾಗಿ ಬಳಸಿ, ಕಾರ್ಡುದಾರರ ಗಮನಕ್ಕೆ ಬಾರದಂತೆ ಅಮೆಜಾನ್ ಪೇ ಹಾಗೂ ಫೇಸ್‌ಬುಕ್ ಜಾಹೀರಾತು ಪಾವತಿ ಹೆಸರಿನಲ್ಲಿ ಸುಮಾರು 1.98 ಲಕ್ಷ ರೂಪಾಯಿ ಹಣ ವರ್ಗಾಯಿಸಿಕೊಂಡು ವಂಚಿಸಿರುವ ಪ್ರಕರಣ ಮಂಗಳೂರಿನಲ್ಲಿ ಬೆಳಕಿಗೆ ಬಂದಿದೆ. ಈ ಸಂಬಂಧ ಮಂಗಳೂರು ನಗರದ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ ಎಂದು ಮಂಗಳೂರು ನಗರ ಪೊಲೀಸರ ಪ್ರಕಟಣೆ ತಿಳಿಸಿದೆ.

**ಮೊಬೈಲ್‌ಗೆ ಬಂದಿತ್ತು ಹಣ ಕಡಿತದ ಸರಣಿ ಸಂದೇಶಗಳು:** ದಿನಾಂಕ 19–09–2026 ರಂದು 45 ವರ್ಷದ ದೂರುದಾರರ ಮೊಬೈಲ್ ಸಂಖ್ಯೆಗೆ ಬ್ಯಾಂಕ್‌ನಿಂದ ಹಣ ಕಡಿತಗೊಂಡ ಸಂದೇಶಗಳು ಸರಣಿಯಾಗಿ ಬಂದಿವೆ.

ದೂರುದಾರರ ಬ್ಯಾಂಕ್ ಆಫ್ ಬರೋಡಾ ಕ್ರೆಡಿಟ್ ಕಾರ್ಡ್ ಮೂಲಕ ಅಮೆಜಾನ್ ಪೇ ಪ್ರೈವೇಟ್ ಲಿಮಿಟೆಡ್ ಹಾಗೂ ಫೇಸ್‌ಬುಕ್ ಜಾಹೀರಾತು ಮೂಲಕ ಹಂತ–ಹಂತವಾಗಿ ಒಟ್ಟು 1,98,500 ರೂಪಾಯಿ ಹಣ ವರ್ಗಾವಣೆಯಾಗಿರುವ ಬಗ್ಗೆ ಸಂದೇಶಗಳಲ್ಲಿ ತಿಳಿಸಲಾಗಿತ್ತು. ತಾವು ಯಾವುದೇ ವಹಿವಾಟು ನಡೆಸದಿದ್ದರೂ ಹಾಗೂ ಒಟಿಪಿ




ಹಂಚಿಕೊಳ್ಳದಿದ್ದರೂ ಇಷ್ಟೊಂದು ದೊಡ್ಡ ಮೊತ್ತ ಕಡಿತಗೊಂಡಿರುವುದನ್ನು ಕಂಡು ದೂರುದಾರರು ದಂಗಾಗಿದ್ದಾರೆ.

ಸೈಬರ್ ವಂಚಕರು ಆನ್‌ಲೈನ್ ಮೂಲಕ ತಮ್ಮ ಬ್ಯಾಂಕ್ ಆಫ್ ಬರೋಡಾದ ಕ್ರೆಡಿಟ್ ಕಾರ್ಡ್ ಅನ್ನು ಅನಧಿಕೃತವಾಗಿ ದುರುಪಯೋಗಪಡಿಸಿಕೊಂಡು, ತಮಗೆ ಕಿಂಚಿತ್ತೂ ತಿಳಿಯದಂತೆ ವಂಚನೆಯಿಂದ ಒಟ್ಟು 1,98,500 ರೂಪಾಯಿ ಲಪಟಾಯಿಸಿದ್ದಾರೆ ಎಂದು ಸಂತ್ರಸ್ತರು ದೂರಿನಲ್ಲಿ ತಿಳಿಸಿದ್ದಾರೆ. ಮೋಸದಿಂದ ಹಣ ವರ್ಗಾಯಿಸಿಕೊಂಡಿರುವ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು, ತಮ್ಮ ಹಣವನ್ನು ಮರಳಿ ಕೊಡಿಸುವಂತೆ ಕೋರಿ ಅವರು ಮಂಗಳೂರು ಸಿಇಎನ್ ಅಪರಾಧ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

**ಮನೆಯಲ್ಲಿದ್ದಾಗ ಬಂದಿತ್ತು ಹಣ ಕಡಿತದ ಮೆಸೇಜ್:** ಇನ್ನೊಂದು ಪ್ರಕರಣದಲ್ಲಿ ಡೆಬಿಟ್ ಕಾರ್ಡ್‌ನಿಂದ 2.44 ಲಕ್ಷ ಎಗರಿಸಿದ ಕುರಿತು ದೂರು ದಾಖಲಾಗಿದೆ. ಖಾತೆಯಲ್ಲಿದ್ದ ಡೆಬಿಟ್ ಕಾರ್ಡ್ ವಿವರಗಳನ್ನು

> ಈ ಸಂಬಂಧ ಮಂಗಳೂರು ನಗರದ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಮಂಗಳೂರು ನಗರ ಪೊಲೀಸರ ಪ್ರಕಟಣೆ ತಿಳಿಸಿದೆ.
>
> ಪೊಲೀಸರು ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ವಂಚಕರ ಬ್ಯಾಂಕ್ ಖಾತೆ ಹಾಗೂ ಹಣ ವರ್ಗಾವಣೆಯ ಹಾದಿಯ ಬಗ್ಗೆ ತನಿಖೆ ಚುರುಕುಗೊಳಿಸಿದ್ದಾರೆ.
>
> ಈ ಸಂಬಂಧ ಮಂಗಳೂರು ನಗರದ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಮಂಗಳೂರು ನಗರ ಪೊಲೀಸರ ಪ್ರಕಟಣೆ ತಿಳಿಸಿದೆ.

ಅಕ್ರಮವಾಗಿ ಬಳಸಿ, ವ್ಯಕ್ತಿಯೊಬ್ಬರ ಗಮನಕ್ಕೆ ಬಾರದಂತೆ 2.44 ಲಕ್ಷ ರೂಪಾಯಿಗೂ ಅಧಿಕ ಹಣವನ್ನು ಆನ್‌ಲೈನ್ ಮೂಲಕ ವರ್ಗಾಯಿಸಿಕೊಂಡು ವಂಚಿಸಿರುವ ಘಟನೆ ಮಂಗಳೂರಿನಲ್ಲಿ ಬೆಳಕಿಗೆ ಬಂದಿದೆ.

ದೂರುದಾರರ ಐಸಿಐಸಿಐ ಬ್ಯಾಂಕ್ ಖಾತೆಗೆ ಸಂಬಂಧಿಸಿದ ಡೆಬಿಟ್ ಕಾರ್ಡ್ ಮೂಲಕ ಒಟ್ಟು 2,44,691.49 ರೂಪಾಯಿ ಮೊತ್ತವು ಅಪರಿಚಿತ ಖಾತೆಗೆ ವರ್ಗಾವಣೆಯಾಗಿರುವ ಬಗ್ಗೆ ಸಂದೇಶದಲ್ಲಿ ತಿಳಿಸಲಾಗಿತ್ತು. ಯಾವುದೇ ಒಟಿಪಿ ಹಂಚಿಕೊಳ್ಳದಿದ್ದರೂ ಹಾಗೂ ಯಾವುದೇ ವಹಿವಾಟು ನಡೆಸದಿದ್ದರೂ ಏಕಾಏಕಿ ಇಷ್ಟೊಂದು ದೊಡ್ಡ ಮೊತ್ತ ಕಡಿತಗೊಂಡಿರುವುದನ್ನು ಕಂಡು ದೂರುದಾರರು ಕಂಗಾಲಾಗಿದ್ದಾರೆ.

ಭೇಟಿಯಾಗುತ್ತಿದ್ದಂತೆ Xi Jinping ಶಾಂತಿ ಮಂತ್ರ; US-China ನಡುವೆ ಶುರುವಾಯ್ತಾ ಹೊಸ ಸ್ನೇಹ ಪರ್ವ?

# ಸ್ಪರ್ಧೆ ಇರಲಿ, ಪರಸ್ಪರ ದೇಶಗಳ ಮಧ್ಯೆ ವೈರತ್ವ ಬೇಡ

**ಬೀಜಿಂಗ್:** ಅಮೆರಿಕದೊಂದಿಗೆ ಸಹಕಾರಕ್ಕೆ ಒತ್ತು ನೀಡಿರುವ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ಚೀನಾ ಮತ್ತು ಅಮೆರಿಕ ಪರಸ್ಪರ ಪ್ರತಿಸ್ಪರ್ಧಿಗಳಾಗುವ ಬದಲು ಪಾಲುದಾರರಾಗಬೇಕು ಎಂದು ಹೇಳಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಮಹತ್ವದ ದ್ವಿಪಕ್ಷೀಯ ಮಾತುಕತೆ ನಡೆಸಲು ವಾಷಿಂಗ್ಟನ್ ಡಿ.ಸಿ. ತಲುಪಿದ ಬೆನ್ನಲ್ಲೇ ಚೀನಾದ ಸರ್ಕಾರಿ ಸುದ್ದಿ ಸಂಸ್ಥೆ ಕ್ಸಿನ್ಹುವಾ ಈ ಅಧಿಕೃತ ಹೇಳಿಕೆಯನ್ನು ಬಿಡುಗಡೆ ಮಾಡಿದೆ.

ನಮ್ಮ ಎರಡು ದೇಶಗಳು ಪ್ರತಿಸ್ಪರ್ಧಿಗಳಾಗುವ ಬದಲು ಪಾಲುದಾರರಾಗಬೇಕು. ಚೀನಾ ಮತ್ತು ಅಮೆರಿಕದ ಜನರು ದೀರ್ಘಕಾಲದಿಂದ ಸ್ನೇಹಪರ ವಿನಿಮಯವನ್ನು ಹೊಂದಿದ್ದಾರೆ. ನಮ್ಮ ಹಿತಾಸಕ್ತಿಗಳು ಆಳವಾಗಿ ಪರಸ್ಪರ ಬೆಸೆದುಕೊಂಡಿವೆ ಎಂದು ಹೇಳಿದ್ದಾರೆ..

ಅಮೆರಿಕ ಅಧ್ಯಕ್ಷ ಟ್ರಂಪ್ ಅವರೊಂದಿಗೆ ದ್ವಿಪಕ್ಷೀಯ ಸಂಬಂಧಗಳು ಮತ್ತು ಜಾಗತಿಕ ಪರಿಸ್ಥಿತಿಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತು ಆಳವಾದ ಚರ್ಚೆ ನಡೆಸಲು ಎದುರು ನೋಡುತ್ತಿದ್ದೇವೆ.

ಉಭಯ ದೇಶಗಳು ಪರಸ್ಪರ ಹತ್ತಿರವಾಗಲು ಪ್ರಯತ್ನಿಸಬೇಕು. ಸಹಕಾರಕ್ಕೆ ಆದ್ಯತೆ ನೀಡುವ, ಮಿತಿಯೊಳಗಿನ ಸ್ಪರ್ಧೆ ಹೊಂದಿರುವ, ಭಿನ್ನಾಭಿಪ್ರಾಯಗಳನ್ನು ನಿಯಂತ್ರಣದಲ್ಲಿಡುವ ಹಾಗೂ ಶಾಂತಿಯುತ ಭವಿಷ್ಯಕ್ಕೆ ಅವಕಾಶ ಕಲ್ಪಿಸುವ ಸ್ಥಿರ ಸಂಬಂಧವನ್ನು ನಿರ್ಮಿಸಬೇಕು.



ಟ್ರಂಪ್ ಅವರ ಪ್ರಮುಖ ರಾಜಕೀಯ ಘೋಷಣೆಯನ್ನೂ ಉಲ್ಲೇಖಿಸಿದ ಕ್ಸಿ, "ಚೀನೀ ರಾಷ್ಟ್ರದ ಮಹಾನ್ ಪುನರುತ್ಥಾನದ ಗುರಿ ಮತ್ತು ಅಮೆರಿಕವನ್ನು ಮತ್ತೆ ಶ್ರೇಷ್ಠವಾಗಿಸುವ ಗುರಿ ಪರಸ್ಪರ ಕೈಜೋಡಿಸಿ ಸಾಗಬಹುದು, ಎರಡು ಪ್ರಮುಖ ಶಕ್ತಿಗಳು ಪರಸ್ಪರ ಸಹಬಾಳ್ವೆ ನಡೆಸಲು ಸರಿಯಾದ ಮಾರ್ಗವನ್ನು ರೂಪಿಸಬೇಕು ಎಂದು ತಿಳಿಸಿದ್ದಾರೆ.

ನಾವು ಇದನ್ನು ಸಾಧಿಸಬಹುದು ಎಂಬ ವಿಶ್ವಾಸ ನನಗಿದೆ. ಎರಡೂ ದೇಶಗಳ ಜಂಟಿ ಪ್ರಯತ್ನದಿಂದ ಈ ಭೇಟಿ ಫಲಪ್ರದ ಫಲಿತಾಂಶಗಳನ್ನು ನೀಡಲಿದೆ, ನಮ್ಮ ಎರಡೂ ದೇಶಗಳ ಜನರ ಕಲ್ಯಾಣವನ್ನು ಹೆಚ್ಚಿಸಲಿದೆ

**ಉಭಯ ರಾಷ್ಟ್ರಗಳ ನಡುವಿನ ಮಾತುಕತೆಯಲ್ಲಿ ವ್ಯಾಪಾರ, ತಂತ್ರಜ್ಞಾನ ಸ್ಪರ್ಧೆ, ಅದರಲ್ಲೂ ವಿಶೇಷವಾಗಿ ಕೃತಕ ಬುದ್ಧಿಮತ್ತೆ ಕ್ಷೇತ್ರದ ಸ್ಪರ್ಧೆ, ಇರಾನ್‌ಗೆ ಬೀಜಿಂಗ್ ನೀಡುತ್ತಿರುವ ರಾಜತಾಂತ್ರಿಕ ಮತ್ತು ಆರ್ಥಿಕ ಬೆಂಬಲ ಸೇರಿದಂತೆ ಹಲವು ಪ್ರಮುಖ ವಿಚಾರಗಳು ಚರ್ಚೆಯಾಗುವ ನಿರೀಕ್ಷೆಯಿದೆ.**

ಮತ್ತು ವಿಶ್ವ ಶಾಂತಿಗೆ ಹೊಸ ಭರವಸೆ ತರಲಿದೆ ಎಂಬ ನಂಬಿಕೆ ನನಗಿದೆ ಎಂದು ಹೇಳಿದ್ದಾರೆ.

ಟ್ರಂಪ್ ಮತ್ತು ಕ್ಸಿ ಜಿನ್‌ಪಿಂಗ್ ನಡುವಿನ ಮಹತ್ವದ ಮಾತುಕತೆಗೆ ಮುನ್ನ ಈ ಹೇಳಿಕೆ ಹೊರಬಿದ್ದಿದೆ. ಚೀನಾ ಅಧ್ಯಕ್ಷರು ಅಮೆರಿಕ ರಾಜಧಾನಿಗೆ ಆಗಮಿಸಿದ ಬಳಿಕ ಕೆಂಪು ಹಾಸಿನ ಮೇಲೆ ಇಬ್ಬರೂ ನಾಯಕರು ಪರಸ್ಪರ ಹಸ್ತಲಾಘವ ಮಾಡಿದರು. ಉಭಯ ರಾಷ್ಟ್ರಗಳ ನಡುವಿನ ಮಾತುಕತೆಯಲ್ಲಿ ವ್ಯಾಪಾರ, ತಂತ್ರಜ್ಞಾನ ಸ್ಪರ್ಧೆ, ಅದರಲ್ಲೂ ವಿಶೇಷವಾಗಿ ಕೃತಕ ಬುದ್ಧಿಮತ್ತೆ ಕ್ಷೇತ್ರದ ಸ್ಪರ್ಧೆ, ಇರಾನ್‌ಗೆ ಬೀಜಿಂಗ್ ನೀಡುತ್ತಿರುವ ರಾಜತಾಂತ್ರಿಕ ಮತ್ತು ಆರ್ಥಿಕ ಬೆಂಬಲ ಸೇರಿದಂತೆ ಹಲವು ಪ್ರಮುಖ ವಿಚಾರಗಳು ಚರ್ಚೆಯಾಗುವ ನಿರೀಕ್ಷೆಯಿದೆ.

ವಿಶ್ವಸಂಸ್ಥೆಯಲ್ಲಿ Iran ವಿರುದ್ಧ Trump ಗುಡುಗು

## "ಒಪ್ಪಂದಕ್ಕೆ ಬನ್ನಿ, ಇಲ್ಲವೇ ನರಕಕ್ಕೆ ಹೋಗಿ"

**ನ್ಯೂಯಾರ್ಕ್:** ವಿಶ್ವಸಂಸ್ಥೆಯ 81ನೇ ಸಾಮಾನ್ಯ ಸಭೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದು, ಶಾಂತಿ ಒಪ್ಪಂದಕ್ಕೆ ಬಾರದಿದ್ದರೆ "ದೇಶವನ್ನು ಸಂಪೂರ್ಣವಾಗಿ ಧ್ವಂಸಗೊಳಿಸುವುದಾಗಿ" ಕಠಿಣ ಅಂತಿಮ ಎಚ್ಚರಿಕೆ ನೀಡಿದ್ದಾರೆ. ಇದೇ ವೇಳೆ, ಭಾರತ ಮತ್ತು ಪಾಕಿಸ್ತಾನ ನಡುವಿನ ಯುದ್ಧ ನಿಲ್ಲಿಸಿದ್ದು ನಾನೇ ಎಂದು ಪುನರುಚ್ಚರಿಸಿದ್ದಾರೆ.



India-Pak ಯುದ್ಧ ನಿಲ್ಲಿಸಿದ್ದು ನಾನೇ...!

ಜಾಗತಿಕ ನಾಯಕರ ಈ ಮಹಾಸಭೆಯಲ್ಲಿ ಮಧ್ಯಪ್ರಾಚ್ಯದಲ್ಲಿ ತಲೆದೋರಿರುವ ಬಿಕ್ಕಟ್ಟಿನ ಕುರಿತು ಟ್ರಂಪ್ ಮಾತನಾಡಿದರು.

ಇರಾನ್ ಜತೆಗಿನ ಸಂಘರ್ಷಕ್ಕೆ ಅಂತ್ಯ ಹಾಡಲು ಒಪ್ಪಂದ ಮಾಡಿಕೊಳ್ಳುವ ಆಯ್ಕೆಯೊಂದೆಡೆ, ಮತ್ತೊಂದೆಡೆ ಇರಾನ್ ವಿರುದ್ಧ ನಿರ್ಣಾಯಕ ಕ್ರಮ ಕೈಗೊಳ್ಳುವ ಆಯ್ಕೆಯಿದೆ. ಇರಾನ್ ಒಪ್ಪಂದಕ್ಕೆ ಮುಂದಾಗದಿದ್ದರೆ ಆ ದೇಶವನ್ನು ಸಂಪೂರ್ಣವಾಗಿ ನಾಶಪಡಿಸುವ ಕಠಿಣ ಆಯ್ಕೆಯನ್ನು ಕೈಗೊಳ್ಳಬೇಕಾಗಬಹುದು ಎಂದು ಎಚ್ಚರಿಸಿದ್ದಾರೆ.

"ಇರಾನ್ ಜತೆ ಒಪ್ಪಂದ ಮಾಡಿಕೊಳ್ಳಲಾಗುತ್ತದೆಯೇ? ಆ ಮೂಲಕ ಅದು ಹಿಂದೆಂದಿಗಿಂತಲೂ ದೊಡ್ಡ ಹಾಗೂ ಶಕ್ತಿಶಾಲಿ ರಾಷ್ಟ್ರವಾಗಿ, ಮಧ್ಯಪ್ರಾಚ್ಯ ಮಾತ್ರವಲ್ಲದೆ ಜಗತ್ತಿನ ಪ್ರಮುಖ ರಾಷ್ಟ್ರಗಳಲ್ಲಿ ಒಂದಾಗಿ ಬೆಳೆಯಲು ಅವಕಾಶ ನೀಡಬೇಕೇ? ಅಥವಾ ಇಸ್ಲಾಮಿಕ್ ಗಣರಾಜ್ಯವನ್ನು ಸಂಪೂರ್ಣವಾಗಿ ನಾಶಪಡಿಸಿ, ಮತ್ತೆ ಜನರು ಮತ್ತು ರಾಷ್ಟ್ರಗಳನ್ನು ಕೊಲ್ಲಲು, ನಾಶಮಾಡಲು ಅವಕಾಶವೇ ಸಿಗದಂತೆ ಮಾಡಬೇಕೇ? ಯಾವುದೇ ಭವಿಷ್ಯದ ಭರವಸೆ ಇಲ್ಲದಂತೆ ಅದನ್ನು ನರಕಕ್ಕೆ ತಳ್ಳಬೇಕೇ ಎಂಬ ದೊಡ್ಡ ನಿರ್ಧಾರವನ್ನು ನಾನು ತೆಗೆದುಕೊಳ್ಳಬೇಕಿದೆ ಎಂದು ಹೇಳಿದರು.

ಆದರೆ, ನವೆಂಬರ್‌ನಲ್ಲಿ ನಡೆಯಲಿರುವ ಅಮೆರಿಕದ ಮಧ್ಯಂತರ ಚುನಾವಣೆಗೂ ಮುನ್ನ ಇರಾನ್ ಜತೆ ಒಪ್ಪಂದ ಸಾಧ್ಯವಾಗಬಹುದು ಎಂಬ ವಿಶ್ವಾಸವನ್ನೂ ಟ್ರಂಪ್ ವ್ಯಕ್ತಪಡಿಸಿದ್ದಾರೆ.

## ನಾನು ಗುಂಡಿಕ್ಕಿ ಕೊಲ್ಲಲು ಬಯಸುವ ಮೊದಲ ವ್ಯಕ್ತಿ ಜ್ಞಾನೇಶಕುಮಾರ

**ನವದೆಹಲಿ:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ನೇತೃತ್ವದಲ್ಲಿ ಭಾರತೀಯ ಚುನಾವಣಾ ಆಯೋಗದ ಕಾರ್ಯವೈಖರಿಯನ್ನು ತೀವ್ರವಾಗಿ ಟೀಕಿಸಿದ ವಿಕಾಸ್‌ಶೀಲ್ ಇನ್ಸಾನ್ ಪಾರ್ಟಿ ಮುಖ್ಯಸ್ಥ ಮುಖೇಶ್ ಸಾಹನಿ, "ಒಂದು ಕೊಲೆಗೆ ಕ್ಷಮೆ ಸಿಗುವುದಾದರೆ, ನಾನು ಗುಂಡಿಕ್ಕಿ ಕೊಲ್ಲುವ ಮೊದಲ ವ್ಯಕ್ತಿ ಜ್ಞಾನೇಶ್ ಕುಮಾರ್ ಆಗಿರುತ್ತಾರೆ" ಎಂದು ಗುಡುಗಿದ್ದಾರೆ.



ವಿವಾದಾತ್ಮಕ ಹೇಳಿಕೆ!

ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರು ಮತದಾರರ ಪಟ್ಟಿ ಪ್ರಕ್ರಿಯೆಗಳಿಗೆ ಸಂಬಂಧಿಸಿದ ನಿರ್ಧಾರಗಳ ಮತ್ತು ಆದೇಶಗಳ ವಿರುದ್ಧ 10 ತಿಂಗಳುಗಳಲ್ಲಿ ಕನಿಷ್ಠ 14 ಬಾರಿ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ್ದರು ಎಂಬ 'ಇಂಡಿಯನ್ ಎಕ್ಸ್‌ಪ್ರೆಸ್' ವರದಿಯ ಕುರಿತು ಸಾಹನಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಪ್ರತಿಕ್ರಿಯಿಸಿದರು. ಈ ಆಕ್ಷೇಪಣೆಗಳು 'ಫಾರ್ಮ್ 6'ರಲ್ಲಿನ ಬದಲಾವಣೆಗಳು, ಮತದಾರರ ಹೆಸರುಗಳ ಕೈಬಿಡುವಿಕೆ ಮತ್ತು ಮತದಾರರ ಪಟ್ಟಿಯ ದತ್ತಾಂಶ ನಿರ್ವಹಣೆಗೆ ಸಂಬಂಧಿಸಿದ್ದಾಗಿವೆ.

**"ಚುನಾವಣಾ ಆಯೋಗ ಬಿಜೆಪಿಯ ಒಂದು ಅಂಗವಾಗಿ ಮಾರ್ಪಟ್ಟಿದೆ. ನಾನು ಜ್ಞಾನೇಶ್ ಕುಮಾರ್ ಅವರಿಗೆ ಹೇಳಲು ಬಯಸುತ್ತೇನೆ:** ಕಾಲ ಯಾವಾಗಲೂ ಒಂದೇ ರೀತಿ ಇರುವುದಿಲ್ಲ. ಸ್ವಲ್ಪ ನಾಚಿಕೆಯಿರಲಿ--ನೀವು ದೇಶದ ಸಂವಿಧಾನದೊಂದಿಗೆ ಆಟವಾಡುತ್ತಿದ್ದೀರಿ! ಒಂದು ವೇಳೆ ನನಗೆ ಒಂದು ಕೊಲೆಗೆ ಕ್ಷಮೆ ಸಿಗುವುದಾದರೆ, ನಾನು ಗುಂಡಿಕ್ಕಿ ಕೊಲ್ಲುವ ಮೊದಲ ವ್ಯಕ್ತಿ ಜ್ಞಾನೇಶ್! ಆದರೆ ನಾವೇನು ಮಾಡಬಹುದು? ನಾವು ಸಂವಿಧಾನವನ್ನು ಗೌರವಿಸುವ ಕಾನೂನುಬದ್ಧ ನಾಗರಿಕರು," ಎಂದು ಸಾಹನಿ ಹೇಳಿದ್ದಾರೆ. ತಮ್ಮ ಟೀಕೆಯ ಧಾಟಿಯನ್ನು ತೀವ್ರಗೊಳಿಸಿದ ಸಾಹನಿ, 2029ರಲ್ಲಿ ವಿರೋಧ ಪಕ್ಷ ಅಧಿಕಾರಕ್ಕೆ ಬಂದರೆ ಅಧಿಕಾರಿಗಳು ಮತ್ತು ಆಡಳಿತಾರೂಢ ನಾಯಕತ್ವವು ಜೈಲು ಶಿಕ್ಷೆಯನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

"ಮುಂದಿನ ದಿನಗಳಲ್ಲಿ ಅವರು ಸುಲಭವಾಗಿ ಪಾರಾಗುವುದಿಲ್ಲ. 2029ರಲ್ಲಿ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ದೇಶದಲ್ಲಿ ಸರ್ಕಾರ ರಚನೆಯಾಗುತ್ತದೆ ಮತ್ತು ಜೈಲಿಗೆ ಕಳುಹಿಸಲ್ಪಡುವ ಮೊದಲ ವ್ಯಕ್ತಿ ಜ್ಞಾನೇಶ್ ಕುಮಾರ್ ಆಗಿರುತ್ತಾರೆ. ಅವರೊಂದಿಗೆ ಶಾಮೀಲಾದ ಪ್ರತಿಯೊಬ್ಬರೂ ಜೈಲಿಗೆ ಹೋಗುತ್ತಾರೆ; ಯಾರನ್ನೂ ಬಿಡುವುದಿಲ್ಲ. ಒಂದು ವೇಳೆ ಅದಕ್ಕೂ ಮುನ್ನವೇ ಅವರು ಮೃತಪಟ್ಟರೆ ಅದು ಬೇರೆ ಮಾತು. ಆದರೆ ಅವರು ಜೀವಂತವಾಗಿದ್ದರೆ, ಅವರನ್ನು ಕಂಬಿ ಹಿಂದೆ ಹಾಕಲಾಗುತ್ತದೆ--ಇದರಲ್ಲಿ ಯಾವುದೇ ಸಂಶಯ ಇಲ್ಲ. ಯಾರೂ ಅವರನ್ನು ರಕ್ಷಿಸಲು ಸಾಧ್ಯವಿಲ್ಲ, ಸ್ವತಃ ಮೋದಿಜಿ ಕೂಡ ಇಲ್ಲ. ವಾಸ್ತವವಾಗಿ, ಮೋದಿಜಿ ಕೂಡ ಜೈಲು ಸೇರಬಹುದು!" ಎಂದು ಅವರು ಪ್ರತಿಪಾದಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಪ್ರಜಾಪ್ರಭುತ್ವ ವ್ಯವಸ್ಥೆಗಳನ್ನು ದುರ್ಬಲಗೊಳಿಸುತ್ತಿದ್ದಾರೆ ಎಂದು ಆರೋಪಿಸಿದ ಸಾಹನಿ, ಮತದಾರರ ಪಟ್ಟಿಯಿಂದ ಹೆಸರುಗಳನ್ನು ಕೈಬಿಡುವ ಮೂಲಕ ಮತ್ತು ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವಾಗ ಕಲ್ಯಾಣ ಯೋಜನೆಗಳ ಅಡಿಯಲ್ಲಿ ಹಣ ವರ್ಗಾವಣೆ ಮಾಡುವ ಮೂಲಕ ಚುನಾವಣೆಗಳನ್ನು ತಿರುಚಲಾಗುತ್ತಿದೆ ಎಂದು ದೂರಿದರು.

## CEC ಆಗಲು ಅನ್ ಫಿಟ್, ಜ್ಞಾನೇಶ್ ಕುಮಾರ್‌ರನ್ನು ತಕ್ಷಣ ಬಂಧಿಸಿ

**ನವದೆಹಲಿ:** ದೇಶಾದ್ಯಂತ ಜಾರಿಯಲ್ಲಿರುವ ವಿಶೇಷ ಸಮಗ್ರ ಮತದಾರರ ಪಟ್ಟಿಯ ಪರಿಷ್ಕರಣೆ, ಕೇಂದ್ರೀಕೃತ ಐಟಿ ನಿಯಂತ್ರಣ ಸೇರಿದಂತೆ ಹಲವು ವಿಷಯಗಳಲ್ಲಿ ಭಾರತ ಚುನಾವಣಾ ಆಯೋಗದ ಮುಖ್ಯಸ್ಥರು ಹಾಗೂ ಸದಸ್ಯರ ನಡುವೆ ಆಂತರಿಕ ಭಿನ್ನಾಭಿಪ್ರಾಯ ಮತ್ತು ಅಸಮಾಧಾನ ಇದೆ ಎಂಬ ವರದಿಗಳ ಬೆನ್ನಲ್ಲೇ ಪ್ರತಿಪಕ್ಷಗಳು ಕೇಂದ್ರ ಚುನಾವಣಾ ಆಯೋಗ ವಿರುದ್ಧ ಮುಗಿಬಿದ್ದಿವೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ತಕ್ಷಣ ಬಂಧಿಸಬೇಕು. ಅವರು ಸಿಇಸಿ ಆಗಲು ಅನ್ ಫಿಟ್ ಎಂದು ಆಲ್ ಇಂಡಿಯಾ ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಬುಧವಾರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ನಡೆದ ನಂತರ ಭಾರತೀಯ ಜನತಾ ಪಕ್ಷ ಜಯಗಳಿಸಿದ ರಾಜ್ಯಗಳಲ್ಲಿ, ಎಸ್‌ಐಆರ್ ಗೂ ಮುನ್ನ ಇದ್ದ ಮತದಾರರ ಪಟ್ಟಿಯ ಆಧಾರದ ಮೇಲೆ ಮರುಚುನಾವಣೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.



## ಆಂಧ್ರ, ಒಡಿಶಾ ಕರಾವಳಿಯಲ್ಲಿ ಭಾರಿ ಮಳೆ

**ಅಮರಾವತಿ:** ವಾಯುಭಾರ ಕುಸಿತದಿಂದ ಆಂಧ್ರ ಪ್ರದೇಶ, ಒಡಿಶಾದಲ್ಲಿ ಕಳೆದೆರಡು ದಿನಗಳಿಂದ ಭಾರಿ ಮಳೆಯಾಗುತ್ತಿದೆ. ತೀವ್ರ ವಾಯುಭಾರ ಕುಸಿತವು ಪಶ್ಚಿಮ ವಾಯವ್ಯ ದಿಕ್ಕಿನತ್ತ ಚಲಿಸುತ್ತಿದ್ದು, ಶ್ರೀಕಾಕುಳಂ ಜಿಲ್ಲೆಯ ಕಳಿಂಗಪಟ್ಟಣಂ ಸಮೀಪ ಕರಾವಳಿಯನ್ನು ದಾಟಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.



ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ

ಉತ್ತರ ಆಂಧ್ರಪ್ರದೇಶ ಕರಾವಳಿಯಲ್ಲಿ ತೀವ್ರ ವಾಯುಭಾರ ಕುಸಿತದಿಂದ ಭಾರಿ ಮಳೆಯಾಗುತ್ತಿದ್ದು, ಗಾಳಿಯು ಪಶ್ಚಿಮ ವಾಯವ್ಯ ದಿಕ್ಕಿನತ್ತ ನಿಧಾನವಾಗಿ ಚಲಿಸುತ್ತಿದೆ. ಕಳಿಂಗಪಟ್ಟಣದ ನೈರುತ್ಯ ಭಾಗದ ಸಮೀಪ ಕರಾವಳಿಯನ್ನು ದಾಟಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ. ಗಾಳಿಯ ಗಂಟೆಗೆ 75 ಕಿಲೋಮೀಟರ್ ವೇಗದಲ್ಲಿ ಬೀಸುತ್ತಿದ್ದು, ಇದರ ಜೊತೆಗೆ ವ್ಯಾಪಕ ಮಳೆಯಾಗುತ್ತಿದೆ. ಮುಂದಿನ 12 ಗಂಟೆಗಳ ಕಾಲ ತೀವ್ರ ವಾಯುಭಾರ ಕುಸಿತದ ತೀವ್ರತೆಯನ್ನು ಕಾಯ್ದುಕೊಂಡು ವಾಯುವ್ಯ ದಿಕ್ಕಿನತ್ತ ಚಲಿಸುವ ಸಾಧ್ಯತೆಯಿದೆ. ನಂತರ ಇದು ಉತ್ತರ ವಾಯುವ್ಯ ದಿಕ್ಕಿನತ್ತ ಚಲಿಸಿ, ಮುಂದಿನ 24 ಗಂಟೆಗಳ ಅವಧಿಯಲ್ಲಿ ಕ್ರಮೇಣ ದುರ್ಬಲಗೊಳ್ಳುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಒಡಿಶಾದ ಕೊರಾಪುಟ್, ಮಲ್ಕನ್‌ಗಿರಿ, ಕಲಹಂಡಿ ಮತ್ತು ನಬರಂಗ್‌ಪುರ ಸೇರಿದಂತೆ ದುರ್ಬಲ ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದೆ. ಭಾರಿ ಮಳೆ, ಹಠಾತ್ ಪ್ರವಾಹ ಮತ್ತು ಕರಾವಳಿ ಪ್ರದೇಶದ ಬಲವಾದ ಗಾಳಿಯ ಮುನ್ನೆಚ್ಚರಿಕೆಯ ಹಿನ್ನೆಲೆಯಲ್ಲಿ ಸಾವಿರಾರು ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದ್ದು, ಶಾಲೆಗಳಿಗೆ ರಜೆ ನೀಡಲಾಗಿದೆ. ಉತ್ತರ ಆಂಧ್ರದಲ್ಲಿ ಚಂಡಮಾರುತದ ಭೀತಿಯ ಹಿನ್ನೆಲೆಯಲ್ಲಿ, ಸನ್ನದ್ಧತೆ ನಡೆಸಲಾಗಿದ್ದು, ಜೊತೆಗೆ, ಬಾಧಿತ ಜಿಲ್ಲೆಗಳಲ್ಲಿ ಚಂಡಮಾರುತದ ಚಲನೆ, ಹವಾಮಾನ ಪರಿಸ್ಥಿತಿ ಮತ್ತು ಸ್ಥಳೀಯ ಸ್ಥಿತಿಗತಿಗಳ ಮೇಲೆ ನಿರಂತರ ನಿಗಾ ವಹಿಸಲಾಗುತ್ತಿದೆ. ವಾಯವ್ಯ ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ತೀವ್ರ ವಾಯುಭಾರ ಕುಸಿತದಿಂದಾಗಿ ಸಮುದ್ರವು ಪ್ರಕ್ಷುಬ್ಧಗೊಂಡಿದೆ. ಸಮುದ್ರದಲ್ಲಿ ಬಲವಾದ ಗಾಳಿ ಮತ್ತು ಎತ್ತರದ ಅಲೆಗಳು ಕಾಣಿಸಿಕೊಂಡಿದ್ದು, ಆಂಧ್ರ ಮತ್ತು ಒಡಿಶಾ ಕರಾವಳಿಯಲ್ಲಿ ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಎಚ್ಚರಿಕೆ ನೀಡಲಾಗಿದೆ.

## ವೈಟ್‌ಹೌಸ್ ಮಾಧ್ಯಮ ನಿಷೇಧಕ್ಕೆ ಕೋರ್ಟ್ ತಡೆ

**ವಾಷಿಂಗ್ಟನ್:** ಮೂರು ಪ್ರಮುಖ ಸುದ್ದಿ ಸಂಸ್ಥೆಗಳ ಮೇಲೆ ಟ್ರಂಪ್ ಆಡಳಿತ ಹೇರಿದ್ದ ನಿರ್ಬಂಧಕ್ಕೆ ಅಮೆರಿಕಾ ಫೆಡರಲ್ ಕೋರ್ಟ್ ತಡೆಯಾಜ್ಞೆ ನೀಡಿದೆ.

ಸಿಎನ್‌ಎನ್, ಎಂಎಸ್ ನೌ ಮತ್ತು ಪೊಲಿಟಿಕೊ ಸಂಸ್ಥೆಗಳಿಗೆ ಶ್ವೇತಭವನದ ಪ್ರವೇಶವನ್ನು ಮರುಸ್ಥಾಪಿಸುವಂತೆ ಫೆಡರಲ್ ನ್ಯಾಯಾಧೀಶರು ಆದೇಶಿಸಿದ್ದಾರೆ. ಟ್ರಂಪ್ ಹಾಗೂ ತಮಗೆ ಇಷ್ಟವಿಲ್ಲದ ವರದಿಗಳನ್ನು ಪ್ರಕಟಿಸುವ ಮಾಧ್ಯಮ ಸಂಸ್ಥೆಗಳ ನಡುವಿನ ಸಂಘರ್ಷ ತೀವ್ರಗೊಳ್ಳುತ್ತಿರುವ ನಡುವೆಯೇ ಈ ಬೆಳವಣಿಗೆ ನಡೆದಿದೆ. ಸೆಪ್ಟೆಂಬರ್ 18ರಂದು ಟ್ರಂಪ್ ಈ ಮೂರು ಮಾಧ್ಯಮ ಸಂಸ್ಥೆಗಳನ್ನು ಶ್ವೇತಭವನದಿಂದ ನಿರ್ಬಂಧಿಸುವುದಾಗಿ ಘೋಷಿಸಿದ್ದರು. ಈ ಮಾಧ್ಯಮಗಳ ವರದಿಗಳನ್ನು 'ಸುಳ್ಳು ಸುದ್ದಿ' ಎಂದು ಟೀಕಿಸಿದ್ದ ಅವರು, ಇತ್ತೀಚೆಗೆ ತಮ್ಮ ವಿರುದ್ಧದ ನಕಾರಾತ್ಮಕ ವರದಿಗಳು ದೇಶಕ್ಕೆ ಅಪಾಯಕಾರಿ ಎಂದು ಹೇಳಿದ್ದರು. ಮಾಧ್ಯಮ ಸಂಸ್ಥೆಗಳು ತಮ್ಮ ವರದಿಗಳ ವಿಷಯದ ಆಧಾರದ ಮೇಲೆ ತಮ್ಮನ್ನು ಗುರಿಯಾಗಿಸಲಾಗಿದೆ ಎಂದು ವಾದಿಸಿವೆ. ಇದು ಅಮೆರಿಕ ಸಂವಿಧಾನದ ಮೊದಲ ತಿದ್ದುಪಡಿಯ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಆರೋಪಿಸಿ, ಶ್ವೇತಭವನದ ನಿರ್ಬಂಧವನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಿದ್ದವು. ಗುರುವಾರ ಮಧ್ಯರಾತ್ರಿಯ ನಂತರ ಹೊರಡಿಸಿದ ಆದೇಶದಲ್ಲಿ ಅಮೆರಿಕ ಜಿಲ್ಲಾ ನ್ಯಾಯಾಧೀಶ ಟಿಮೊಥಿ ಕೆಲ್ಲಿ, ಮಾಧ್ಯಮ ಸಂಸ್ಥೆಗಳು ತಾತ್ಕಾಲಿಕ ನಿರ್ಬಂಧಾಜ್ಞೆ ಪಡೆಯಲು ಅಗತ್ಯವಿರುವ ಕಾನೂನು ಮಾನದಂಡಗಳನ್ನು ಪೂರೈಸಿವೆ ಎಂದು ಹೇಳಿದ್ದಾರೆ. ಪ್ರಕರಣದ ಅಂತಿಮ ವಿಚಾರಣೆಯಲ್ಲಿ ತಮ್ಮ ಪರ ತೀರ್ಪು ಬರುವ ಸಾಧ್ಯತೆ ಇದೆ ಮತ್ತು ನ್ಯಾಯಾಲಯದ ತಕ್ಷಣದ ಮಧ್ಯಪ್ರವೇಶವಿಲ್ಲದಿದ್ದರೆ ಸರಿಪಡಿಸಲಾಗದ ನಷ್ಟ ಉಂಟಾಗುವ ಸಾಧ್ಯತೆ ಇದೆ ಎಂಬುದನ್ನು ಅರ್ಜಿದಾರರು ಸಾಬೀತುಪಡಿಸಿದ್ದಾರೆ ಎಂದು ನ್ಯಾಯಾಧೀಶರು ತಿಳಿಸಿದ್ದಾರೆ. "ಇದು ಕಠಿಣ ಮಾನದಂಡವಾಗಿದ್ದರೂ, ಅರ್ಜಿದಾರರು ಅದನ್ನು ಪೂರೈಸಿದ್ದಾರೆ" ಎಂದು ಆದೇಶದಲ್ಲಿ ಹೇಳಿದ್ದಾರೆ. ಟ್ರಂಪ್ ಅವರು 2017ರಲ್ಲಿ ನ್ಯಾಯಾಧೀಶ ಕೆಲ್ಲಿಯನ್ನು ನೇಮಕ ಮಾಡಿದ್ದರು. 2018ರಲ್ಲಿ ಇದೇ ರೀತಿಯ ಪ್ರಕರಣದಲ್ಲಿ ಸಿಎನ್‌ಎನ್ ಪತ್ರಕರ್ತರೊಬ್ಬರಿಗೆ ಶ್ವೇತಭವನದ ಪ್ರವೇಶವನ್ನು ಮರುಸ್ಥಾಪಿಸುವಂತೆ ಕೆಲ್ಲಿ ಆದೇಶಿಸಿದ್ದರು. ಮಾಧ್ಯಮ ಪ್ರವೇಶಕ್ಕೆ ಸಂಬಂಧಿಸಿದ ಹಿಂದಿನ ಎರಡು ಪ್ರಕರಣಗಳ ತೀರ್ಪುಗಳು, ಅವುಗಳಲ್ಲಿ ಒಂದು ಅಮೆರಿಕ ಸುಪ್ರೀಂ ಕೋರ್ಟ್‌ವರೆಗೂ ಹೋಗಿದ್ದ ಪ್ರಕರಣವೂ ಸೇರಿದ್ದು, ಪತ್ರಕರ್ತರ ಪತ್ರಿಕಾ ಪ್ರವೇಶ ಹಕ್ಕು ರದ್ದುಗೊಳಿಸುವ ಮುನ್ನ ಅವರಿಗೆ ತಮ್ಮ ವಾದ ಮಂಡಿಸಲು ಅವಕಾಶ ನೀಡಬೇಕು ಎಂದು ಸ್ಪಷ್ಟಪಡಿಸಿವೆ.

ಡಿಸೆಂಬರ್ 14 ಮತ್ತು 16ರ ನಡುವೆ ನಡೆಯುವ ನಿರೀಕ್ಷೆಯಿದೆ

## ಭಾರತದ ಈ ನಗರದಲ್ಲಿ ನಡೆಯಲಿದೆ ಐಪಿಎಲ್ 2027ರ ಮಿನಿ ಹರಾಜು: ಬಿಸಿಸಿಐ ಸ್ಪಷ್ಟನೆ

**ದೆಹಲಿ:** ಮುಂಬರುವ ಐಪಿಎಲ್ ಮಿನಿ ಹರಾಜಿಗೆ ಸಂಬಂಧಿಸಿದಂತೆ ಪ್ರಮುಖ ಮಾಹಿತಿಯೊಂದು ಹೊರಬಿದ್ದಿದೆ. ಈ ವರ್ಷ ನಡೆಯಲಿರುವ 2027ರ ಆಟಗಾರರ ಹರಾಜು ಭಾರತದಲ್ಲಿ ನಡೆಸಲು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತೀರ್ಮಾನಿಸಿದೆ.

ಡಿಸೆಂಬರ್‌ನಲ್ಲಿ ನಡೆಯಲಿರುವ ಹರಾಜು ಪ್ರಕ್ರಿಯೆಗೆ ಗೋವಾ ಆತಿಥ್ಯ ವಹಿಸಿಕೊಳ್ಳಲಿದೆ ಎಂದು ಅಧಿಕೃತವಾಗಿ ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಸ್ಪಷ್ಟನೆ ನೀಡಿದ್ದಾರೆ. ಇದರೊಂದಿಗೆ ಕಳೆದ ಕೆಲವು ವರ್ಷಗಳಿಂದ ವಿದೇಶದಲ್ಲಿ ನಡೆಸಲಾಗುತ್ತಿದ್ದ ಹರಾಜು ಪ್ರಕ್ರಿಯೆ ಈ ಬಾರಿ ಭಾರತದಲ್ಲೇ ಆಯೋಜನೆಗೊಳ್ಳುತ್ತಿದ್ದು ವಿಶೇಷವಾಗಿದೆ.




**ಹರಾಜು ಯಾವಾಗ ನಡೆಯಲಿದೆ?:** ಹರಾಜಿನ ನಿಖರವಾದ ದಿನಾಂಕ ಇನ್ನೂ ಘೋಷಿಸಲಾಗಿಲ್ಲ, ಆದರೆ ಡಿ.14 ಮತ್ತು 16ರ ನಡುವೆ ನಡೆಯುವ ನಿರೀಕ್ಷೆಯಿದೆ. ಇದು ಮಿನಿ ಹರಾಜಾಗಿರುವುದರಿಂದ, ಬಿಸಿಸಿಐ ಇದನ್ನು ಕೇವಲ ಒಂದು ದಿನದಲ್ಲಿ ಪೂರ್ಣಗೊಳಿಸಲು ಯೋಜಿಸುತ್ತಿದೆ.

**ಸೈಕಿಯಾ ಹೇಳಿದ್ದೇನು?:** ಹರಾಜಿನ ದಿನಾಂಕ ಕುರಿತು ಪಿಟಿಐ ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿದ ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ, "ಐಪಿಎಲ್ ಹರಾಜು ಡಿಸೆಂಬರ್ ಮಧ್ಯದಲ್ಲಿ, ಬಹುಶಃ ಡಿಸೆಂಬರ್ 14 ಮತ್ತು 16ರ ನಡುವೆ ನಡೆಯಲಿದೆ. ಇದು ಮಿನಿ ಹರಾಜಾಗಿರುವುದರಿಂದ, ಕೇವಲ ಒಂದು ದಿನದ ಕಾರ್ಯಕ್ರಮವಾಗಿರಲಿದೆ" ಎಂದು ಹೇಳಿದರು. ಏತನ್ಮಧ್ಯೆ ಕಳೆದ ಮೂರು ವರ್ಷಗಳಿಂದ, ಐಪಿಎಲ್ ಹರಾಜನ್ನು ಭಾರತದ ಹೊರಗೆ ದುಬೈ, ಜೆಡ್ಡಾ ಮತ್ತು ಅಬುಧಾಬಿಯಂತಹ ನಗರಗಳಲ್ಲಿ ನಡೆಸಲಾಗುತ್ತಿತ್ತು. ಆದಾಗ್ಯೂ, ಈ ಬಾರಿ, ಹೆಚ್ಚಿನ ಐಪಿಎಲ್ ಫ್ರಾಂಚೈಸಿಗಳ ಮನವಿ ಮತ್ತು ಅನುಕೂಲತೆಯನ್ನು ಪರಿಗಣಿಸಿ, ಬಿಸಿಸಿಐ ಸ್ವದೇಶದಲ್ಲೆ ನಡೆಸಲು ನಿರ್ಧರಿಸಿದೆ. ಮೂಲಗಳ ಪ್ರಕಾರ, ಮುಂದಿನ ವರ್ಷ ನಡೆಯಲಿರುವ ಮೆಗಾ ಹರಾಜನ್ನು ವಿದೇಶದಲ್ಲೆ ನಡೆಸುವ ಸಾಧ್ಯತೆಗಳಿವೆ ಎನ್ನಲಾಗುತ್ತಿದೆ.

**ಮಹಿಳಾ ಕ್ರಿಕೆಟ್ ಪಂದ್ಯಗಳು ಮೊಹಾಲಿಗೆ ಸ್ಥಳಾಂತರ**

**ಇದೇ ವೇಳೆ ಸೈಕಿಯಾ ಮತ್ತೊಂದು ಪ್ರಮುಖ ಮಾಹಿತಿಯನ್ನು ಹಂಚಿಕೊಂಡರು. ಸೆಪ್ಟೆಂಬರ್ 29 ರಿಂದ ಅಕ್ಟೋಬರ್ 2 ರವರೆಗೆ ಹಿಮಾಚಲ ಪ್ರದೇಶದ ಧರ್ಮಶಾಲಾ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಭಾರತ ಎ ಮತ್ತು ಆಸ್ಟ್ರೇಲಿಯಾ ಎ ಮಹಿಳಾ ತಂಡಗಳ ನಡುವಿನ ಬಹುದಿನಗಳ ಪಂದ್ಯವನ್ನು ಪಂಜಾಬ್‌ನ ಮೊಹಾಲಿಗೆ ಸ್ಥಳಾಂತರಿಸಲಾಗಿದೆ. ಧರ್ಮಶಾಲಾದಲ್ಲಿ ಪ್ರಸ್ತುತ ಕೆಟ್ಟ ಹವಾಮಾನದಿಂದಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.**

**ಕೆಕೆಆರ್ ಭಾರಿ ಮೊತ್ತದೊಂದಿಗೆ ಹರಾಜಿಗೆ ಪ್ರವೇಶಿಸಬಹುದು**

ಮೂರು ಬಾರಿಯ ಐಪಿಎಲ್ ಚಾಂಪಿಯನ್ ಕೋಲ್ಕತ್ತಾ ನೈಟ್ ರೈಡರ್ಸ್ (ಕೆಕೆಆರ್) ಮುಂಬರುವ ಋತುವಿನ ಮಿನಿ-ಹರಾಜಿನಲ್ಲಿ ಭಾರಿ ಮೊತ್ತದೊಂದಿಗೆ ಭಾಗವಹಿಸುವ ನಿರೀಕ್ಷೆಯಿದೆ. ಐಪಿಎಲ್ 2026 ಕೆಕೆಆರ್‌ಗೆ ನಿರಾಶಾದಾಯಕ ಋತುವಾಗಿತ್ತು. ಪರಿಣಾಮವಾಗಿ, ಫ್ರಾಂಚೈಸಿ ಗಣನೀಯ ಮೊತ್ತವನ್ನು ಖರ್ಚು ಮಾಡಿದ ಹಲವಾರು ಪ್ರಮುಖ ಆಟಗಾರರನ್ನು ಬಿಡುಗಡೆ ಮಾಡುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಮತ್ತೊಂದೆಡೆ, ಚೆನ್ನೈ ಸೂಪರ್ ಕಿಂಗ್ಸ್ ಸಹ ಇದೇ ನಿರೀಕ್ಷೆಯಲ್ಲಿದೆ ಎನ್ನಲಾಗುತ್ತಿದೆ. ಈ ಹಿನ್ನೆಲೆ ಹರಾಜಿನಲ್ಲಿ KKR ಮತ್ತು CSK ನಡುವೆ ತೀವ್ರ ಪೈಪೋಟಿಗೆ ಕಾರಣವಾಗಬಹುದು. ಇದಲ್ಲದೆ, ಲಕ್ನೋ ಸೂಪರ್‌ಜೈಂಟ್ಸ್, ಸನ್‌ರೈಸರ್ಸ್ ಹೈದರಾಬಾದ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ಕೂಡ ಕೆಲವರನ್ನು ಬಿಡುಗಡೆ ಮಾಡುವ ನಿರೀಕ್ಷೆಯಲ್ಲಿವೆ ಎಂದು ವರದಿಗಳಿವೆ. ಈ ಬಗ್ಗೆ ಮಾತನಾಡಿದ ದೇವಜಿತ್ ಸೈಕಿಯಾ, "ಧರ್ಮಶಾಲಾದಲ್ಲಿ ಪ್ರಸ್ತುತ ಕೆಟ್ಟ ಹವಾಮಾನವು ಕ್ರಿಕೆಟ್ ಆಡಲು ಅನುಕೂಲಕರವಾಗಿಲ್ಲ. ಅಲ್ಲಿ ನಿರಂತರವಾಗಿ ಮಳೆಯಾಗುತ್ತಿದೆ. ಈ ಹಿನ್ನೆಲೆ ಇಲ್ಲಿ ನಡೆಯಬೇಕಿದ್ದ ಭಾರತ ಎ ಮತ್ತು ಆಸ್ಟ್ರೇಲಿಯಾ ಎ ತಂಡಗಳ ನಡುವಿನ ಕ್ರಿಕೆಟ್ ಪಂದ್ಯಗಳು ಯಾವುದೇ ಅಡೆತಡೆಯಿಲ್ಲದೆ ಮುಂದುವರಿಸಲು ಪಂದ್ಯಗಳನ್ನು ಮೊಹಾಲಿಗೆ ಸ್ಥಳಾಂತರಿಸಿದ್ದೇವೆ" ಎಂದು ಹೇಳಿದರು.

## ಮಿನಿ ನ್ಯೂಸ್

### ವಿಮಾನ ಲ್ಯಾಂಡಿಂಗ್ ವೇಳೆ ಕಳಚಿಬಿದ್ದ ಟೈರ್!

**ಕಠ್ಮಂಡು:** ನೇಪಾಳದ ಡೊಲ್ಪಾ ಜಿಲ್ಲೆಯ ಜುಫಾಲ್ ವಿಮಾನ ನಿಲ್ದಾಣದಲ್ಲಿ ಗುರುವಾರ ಬೆಳಿಗ್ಗೆ ಭೀಕರ ವಿಮಾನ ದುರಂತವೊಂದು ಕೂದಲೆಳೆಯ ಅಂತರದಲ್ಲಿ ತಪ್ಪಿದೆ.




16 ಮಂದಿ ಪಾರು..!

ಖಾಸಗಿ ವಿಮಾನಯಾನ ಸಂಸ್ಥೆಯಾದ 'ಸೀತಾ ಏರ್‌ಲೈನ್ಸ್‌ಗೆ ಸೇರಿದ ಸಣ್ಣ ಪ್ರಯಾಣಿಕರ ವಿಮಾನವೊಂದು ರನ್‌ವೇನಲ್ಲಿ ಲ್ಯಾಂಡ್ ಆಗುವಾಗ ಅದರ ಹಿಂದಿನ ಚಕ್ರದ ಟೈರ್ ಸಂಪೂರ್ಣವಾಗಿ ಕಳಚಿ ಬಿದ್ದಿದೆ. ಅದೃಷ್ಟವಶಾತ್ ವಿಮಾನದಲ್ಲಿದ್ದ ಎಲ್ಲಾ 13 ಪ್ರಯಾಣಿಕರು ಮತ್ತು ಮೂವರು ಸಿಬ್ಬಂದಿ ಸೇರಿದಂತೆ ಒಟ್ಟು 16 ಜನರೂ ಸುರಕ್ಷಿತವಾಗಿದ್ದಾರೆ. ಸೀತಾ ಏರ್‌ಲೈನ್ಸ್‌ಗೆ ಸೇರಿದ ವಿಮಾನ ಡೋಲ್ಪಾ ಜಿಲ್ಲೆಯ ಜುಫಾಲ್ ವಿಮಾನ ನಿಲ್ದಾಣದಲ್ಲಿ ಇಳಿಯುವ ವೇಳೆ ಹಿಂಭಾಗದ ಬಲ ಚಕ್ರ ಕಳಚಿಕೊಂಡಿದೆ. ವಿಮಾನದಲ್ಲಿ 13 ಪ್ರಯಾಣಿಕರು ಹಾಗೂ ಮೂವರು ಸಿಬ್ಬಂದಿ ಸೇರಿದಂತೆ ಒಟ್ಟು 16 ಮಂದಿ ಇದ್ದರು. ಪ್ರಯಾಣಿಕರ ಪೈಕಿ ಏಳು ಮಂದಿ ವಿದೇಶಿ ಪ್ರಜೆಗಳಾಗಿದ್ದರು. "ಹಿಂಭಾಗದ ಬಲಭಾಗದ ಟೈರ್ ಕಳಚಿಕೊಂಡ ಬಳಿಕ 13 ಪ್ರಯಾಣಿಕರು ಹಾಗೂ ಮೂವರು ಸಿಬ್ಬಂದಿ ಹೊತ್ತಿದ್ದ ಸಣ್ಣ ವಿಮಾನ ರನ್‌ವೇಯಲ್ಲೇ ಅವಘಡಕ್ಕೀಡಾಯಿತು" ಎಂದು ಡೋಲ್ಪಾ ಜಿಲ್ಲಾ ಪೊಲೀಸ್ ಕಚೇರಿಯ ಉಪ ಪೊಲೀಸ್ ವರಿಷ್ಠಾಧಿಕಾರಿ ಅನಿಲ್ ರಾಜ್ ಗಿರಿ ತಿಳಿಸಿದ್ದಾರೆ.

### ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ರೂಟ್

ಇಂಗ್ಲೆಂಡ್‌ನ ಟೆಸ್ಟ್ ನಾಯಕ ಮತ್ತು ದಂತಕಥೆಯ ಬ್ಯಾಟರ್ ಜೋ ರೂಟ್ ಅವರ ಕಿರಿಯ ಸಹೋದರ ಬಿಲ್ಲಿ ರೂಟ್ ತಮ್ಮ 34ನೇ ವಯಸ್ಸಿನಲ್ಲಿ ವೃತ್ತಿಪರ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿದ್ದಾರೆ. ಇದು ಇಂಗ್ಲಿಷ್ ಕೌಂಟಿ ಕ್ರಿಕೆಟ್‌ನ ಪ್ರಮುಖ ಅಧ್ಯಾಯವೊಂದರ ಅಂತ್ಯವನ್ನು ಸೂಚಿಸುತ್ತದೆ. ಗ್ಲಾಮೋರ್ಗನ್ ತಂಡದ ಪರ ಆಡುವ ಈ ಎಡಗೈ ಬ್ಯಾಟ್ಸ್‌ಮನ್ ಈ ತಿಂಗಳ ಆರಂಭದಲ್ಲಿ ಕೊನೆಯ ಬಾರಿಗೆ ಪಂದ್ಯ ಆಡಿದ್ದರು. ಅವರು ನಡೆಯುತ್ತಿರುವ ಕೌಂಟಿ ಚಾಂಪಿಯನ್‌ಶಿಪ್‌ನಲ್ಲಿ ಕೇವಲ ಎರಡು ಪಂದ್ಯ ಮಾತ್ರ ಆಡಿದ್ದಾರೆ. ಬಿಲ್ಲಿ ಸಾಮಾಜಿಕ ಮಾಧ್ಯಮದ ಮೂಲಕ ನಿವೃತ್ತಿ ಘೋಷಿಸಿ ದೀರ್ಘ ಕಾಲದ ವೃತ್ತಿಜೀವನ ಕೊನೆಗೊಳಿಸಿದರು. ಸಹೋದರ ಜೋ ರೂಟ್ ಸಾರ್ವಕಾಲಿಕ ಶ್ರೇಷ್ಠ ಬ್ಯಾಟ್ಸ್‌ಮನ್‌ಗಳಲ್ಲಿ ಒಬ್ಬರಾಗಿದ್ದಾರೆ, ಆದರೆ ಬಿಲ್ಲಿಗೆ ಮಾತ್ರ ಇಂಗ್ಲೆಂಡ್ ತಂಡದ ಪರ ಪಾದಾರ್ಪಣೆ ಮಾಡುವ ಅವಕಾಶವೇ ಸಿಗಲಿಲ್ಲ.




**14 ವರ್ಷಗಳ ವೃತ್ತಿಜೀವನವನ್ನು ಕೊನೆಗೊಳಿಸಿದರು:** ಬಿಲ್ಲಿ ರೂಟ್ ತಮ್ಮ ಕೊನೆಯ ಕೌಂಟಿ ಋತುವಿನಲ್ಲಿ ಮೈದಾನದಲ್ಲಿ ಸೀಮಿತ ಅವಕಾಶಗಳನ್ನು ಹೊಂದಿದ್ದರು, ಕೇವಲ ಎರಡು ಕೌಂಟಿ ಚಾಂಪಿಯನ್‌ಶಿಪ್ ಪಂದ್ಯಗಳಲ್ಲಿ ಮಾತ್ರ ಕಾಣಿಸಿಕೊಂಡರು. ಈ ಸಮಯದಲ್ಲಿ, ಅವರು ಹೆಚ್ಚಿನ ಸಮಯವನ್ನು ಗ್ಲಾಮೋರ್ಗನ್‌ನ ಎರಡನೇ XI ತಂಡದ ನಾಯಕತ್ವ ವಹಿಸಿಕೊಂಡು ಮತ್ತು ಕಿರಿಯ ಆಟಗಾರರಿಗೆ ಮಾರ್ಗದರ್ಶನ ನೀಡಿದರು. ಅವರ 14 ವರ್ಷಗಳ ವೃತ್ತಿಜೀವನದಲ್ಲಿ ಅನೇಕ ಏರಿಳಿತಗಳನ್ನು ಅನುಭವಿಸಿದ ನಂತರ, ಅವರು ಅಂತಿಮವಾಗಿ ಮೈದಾನದಿಂದ ನಿವೃತ್ತಿ ಹೊಂದಲು ನಿರ್ಧರಿಸಿದರು.

### ರಾಸಾಯನಿಕ ಸಂಗ್ರಹ ಟ್ಯಾಂಕ್ ಸ್ಫೋಟ

**ಜೋಧಪುರ:** ಇಲ್ಲಿನ ಬಸ್ನಿ ಪೊಲೀಸ್ ಠಾಣೆ ವ್ಯಾಪ್ತಿಯ ರಾಸಾಯನಿಕ ಕಾರ್ಖಾನೆಯೊಂದರಲ್ಲಿ ಭಾರಿ ಬೆಂಕಿ ಅವಘಡ ಸಂಭವಿಸಿದೆ. ಕಾರ್ಖಾನೆಯಲ್ಲಿನ ರಾಸಾಯನಿಕ ಸಂಗ್ರಹ ಟ್ಯಾಂಕ್ ಸ್ಫೋಟಗೊಂಡ ಪರಿಣಾಮ 12ಕ್ಕೂ ಹೆಚ್ಚು ಅಗ್ನಿಶಾಮಕ ದಳದ ಸಿಬ್ಬಂದಿಗೆ ಸುಟ್ ಟಗಾಯಗಳಾಗಿವೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ಮೊದಲು ಏಮ್ಸ್‌ಗೆ ಕರೆತರಲಾಗಿತ್ತು ಮತ್ತು ನಂತರ ಮಹಾತ್ಮ ಗಾಂಧಿ ಆಸ್ಪತ್ರೆಯ ಸುಟ್ಟಗಾಯಗಳ ಘಟಕಕ್ಕೆ ಸ್ಥಳಾಂತರಿಸಲಾಗಿದೆ. ಎಂಟು ಜನ ಅಗ್ನಿಶಾಮಕ ದಳದ ಸಿಬ್ಬಂದಿಗೆ ಶೇ. 50 ಕ್ಕಿಂತ ಹೆಚ್ಚು ಸುಟ್ಟ ಗಾಯಗಳಾಗಿವೆ ಎಂದು ವರದಿಯಾಗಿದೆ. ಪೊಲೀಸ್ ಆಯುಕ್ತ ಅಂಶುಮಾನ್ ಭೋಮಿಯಾ ಅವರ ಪ್ರಕಾರ, ಬೆಂಕಿಯನ್ನು ನಂದಿಸುವಾಗ, ರಾಸಾಯನಿಕ ಟ್ಯಾಂಕ್ ಸ್ಫೋಟಗೊಂಡಿದೆ. ಇದರ ಪರಿಣಾಮವಾಗಿ 14 ಮಂದಿ ಅಗ್ನಿಶಾಮಕ ದಳದವರಿಗೆ ಸುಟ್ಟ ಟಗಾಯಗಳಾಗಿವೆ. ಗಾಯಗೊಂಡ ಅಗ್ನಿಶಾಮಕ ದಳದವರಿಗೆ ಮಹಾತ್ಮ ಗಾಂಧಿ ಆಸ್ಪತ್ರೆಯ ಸುಟ್ಟಗಾಯಗಳ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ, ಅಲ್ಲಿ ತಜ್ಞ ವೈದ್ಯರ ತಂಡವು ಅವರನ್ನು ಮೇಲ್ವಿಚಾರಣೆ ಮಾಡುತ್ತಿದೆ. ಈ ಸಿಬ್ಬಂದಿಗಳಲ್ಲಿ ಎಂಟು ಜನರ ಸ್ಥಿತಿ ಗಂಭೀರವಾಗಿದೆ. ಅಪಘಾತದ ತೀವ್ರತೆ ಬಗ್ಗೆ ಅರಿತು ಜಿಲ್ಲಾಧಿಕಾರಿ ಅಲೋಕ್ ರಂಜನ್ ಮತ್ತು ಮಹಾನಗರ ಪಾಲಿಕೆ ಆಯುಕ್ತ ರಾಹುಲ್ ಜೈನ್ ಅವರು ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ಮತ್ತು ಗಾಯಾಳುಗಳಿಗೆ ಸರಿಯಾದ ಚಿಕಿತ್ಸೆಗಾಗಿ ಅಗತ್ಯ ಮಾರ್ಗದರ್ಶನ ನೀಡಲು ತಡರಾತ್ರಿಯವರೆಗೆ ಆಸ್ಪತ್ರೆಯಲ್ಲಿಯೇ ಬೀಡುಬಿಟ್ಟಿದ್ದರು. ಘಟನೆಯ ಬಗ್ಗೆ ಮಾಹಿತಿ ಪಡೆದ ಜೋಧ್‌ಪುರ ಜಿಲ್ಲಾಧಿಕಾರಿ ಅಲೋಕ್ ರಂಜನ್, ಪೊಲೀಸ್ ಆಯುಕ್ತ ಅಂಶುಮಾನ್ ಭೋಮಿಯಾ ಮತ್ತು ಮಹಾನಗರ ಪಾಲಿಕೆ ಆಯುಕ್ತ ರಾಹುಲ್ ಜೈನ್ ಇತರೆ ಅಧಿಕಾರಿಗಳೊಂದಿಗೆ ಆಸ್ಪತ್ರೆಗೆ ಧಾವಿಸಿದ್ದಾರೆ. ಗಾಯಗೊಂಡ ಎಲ್ಲಾ ಅಗ್ನಿಶಾಮಕ ಸಿಬ್ಬಂದಿಗೆ ಚಿಕಿತ್ಸೆ ನೀಡಲು ಸರ್ಕಾರ ಎಲ್ಲಾ ವ್ಯವಸ್ಥೆಗಳನ್ನು ಮಾಡುವಂತೆ ನಿರ್ದೇಶಿಸಿದ್ದಾರೆ.



### ಅಜಿತ್ ಅಗರ್ಕರ್ ರಾಜೀನಾಮೆ ಖಚಿತ..!

**ಮುಂಬೈ:** ಭಾರತೀಯ ಕ್ರಿಕೆಟ್ ತಂಡದ ಆಯ್ಕೆ ಸಮಿತಿ ಅಧ್ಯಕ್ಷ ಸ್ಥಾನದಿಂದ ಅಜಿತ್ ಅಗರ್ಕರ್ ಕೆಳಗಿಳಿಯುವುದು ಬಹುತೇಕ ಖಚಿತವಾಗಿದೆ. ತಮ್ಮ ಮೂರು ವರ್ಷಗಳ ಒಪ್ಪಂದದ ಅವಧಿ ಮುಗಿಯುತ್ತಿರುವ ಹಿನ್ನೆಲೆಯಲ್ಲಿ, ಈ ಹುದ್ದೆಯಲ್ಲಿ ಮುಂದುವರಿಯಲು ತಮಗೆ ಆಸಕ್ತಿಯಿಲ್ಲ ಎಂದು ಅಗರ್ಕರ್ ಬಿಸಿಸಿಐಗೆ ತಿಳಿಸಿದ್ದಾರೆ. ಅಕ್ಟೋಬರ್ 4ರಂದು ಅಗರ್ಕರ್ ಅವರ ಅಧಿಕಾರಾವಧಿ ಮುಕ್ತಾಯಗೊಳ್ಳಲಿದೆ. ಆ ಬಳಿಕವಷ್ಟೇ ಹೊಸ ಮುಖ್ಯ ಆಯ್ಕೆಗಾರರ ಹೆಸರನ್ನು ಪ್ರಕಟಿಸುತ್ತೇವೆ ಎಂದು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಸ್ಪಷ್ಟಪಡಿಸಿದ್ದಾರೆ. ತಮ್ಮ ಒಪ್ಪಂದವನ್ನು ವಿಸ್ತರಿಸುವುದು ಬೇಡ ಎಂಬ ನಿರ್ಧಾರವನ್ನು ಅಗರ್ಕರ್ ಸೆಪ್ಟೆಂಬರ್ 18ರಂದೇ ಬಿಸಿಸಿಐಗೆ ತಿಳಿಸಿದ್ದರು. ಇದಾದ ಬಳಿಕ ಆಯ್ಕೆ ಸಮಿತಿಯ ಮುಂದಿನ ಆಗುಹೋಗುಗಳ ಬಗ್ಗೆ ನಿರ್ಧರಿಸುವ ಜವಾಬ್ದಾರಿಯನ್ನು ಬಿಸಿಸಿಐ ಪದಾಧಿಕಾರಿಗಳಿಗೆ ವಹಿಸಲಾಯಿತು. ಹೊಸ ಅಧ್ಯಕ್ಷರನ್ನು ಹುಡುಕುವ ವಿಚಾರದಲ್ಲಿ ಮಂಡಳಿಗೆ ಯಾವುದೇ ಆತುರವಿಲ್ಲ. ನಮಗೆ ಸಾಕಷ್ಟು ಸಮ ಯವಿದೆ ಎಂದು ಬಿಸಿಸಿಐ ಕಾರ್ಯದರ್ಶಿ ಪಿಟಿಐ ವಿಡಿಯೋಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.



**ರೋಹಿತ್-ಅಗರ್ಕರ್ ನಡುವೆ ತಿಕ್ಕಾಟ:** ಅಂದಹಾಗೆ ಇಂಗ್ಲೆಂಡ್ ಎದುರಿನ ಏಕದಿನ ಸರಣಿಗೂ ಮುನ್ನ ಹಿರಿಯ ಕ್ರಿಕೆಟಿಗ ರೋಹಿತ್ ಶರ್ಮಾ ಹಾಗೂ ಬಿಸಿಸಿಐ ಚೀಫ್ ಸೆಲೆಕ್ಟರ್ ಅಜಿತ್ ಅಗರ್ಕರ್ ನಡುವೆ ಮುಸುಕಿನ ಗುದ್ದಾಟ ಆರಂಭವಾಗಿತ್ತು ಎನ್ನಲಾಗಿದೆ. ರೋಹಿತ್ ಶರ್ಮಾ ಅವರ ಬಳಿ ಅಜಿತ್ ಅಗರ್ಕರ್, 2027ರ ಏಕದಿನ ವಿಶ್ವಕಪ್‌ಗೆ ಯುವ ಆಟಗಾರರಿಗೆ ಹೆಚ್ಚು ಒತ್ತು ನೀಡುವುದಾಗಿ ತಿಳಿಸಿದ್ದರು ಎನ್ನಲಾಗಿದೆ. ಆದರೆ ಲಾರ್ಡ್ಸ್‌ನಲ್ಲಿ ನಡೆದ ಇಂಗ್ಲೆಂಡ್ ಎದುರಿನ ಮೂರನೇ ಏಕದಿನ ಪಂದ್ಯದಲ್ಲಿ ರೋಹಿತ್ ಶರ್ಮಾ ಶತಕ ಸಿಡಿಸುವ ಮೂ ಲಕ ಟೀಕಾಕಾರರ ಬಾಯಿ ಮುಚ್ಚಿಸಿದ್ದರು. ಇನ್ನು ಬಿಸಿಸಿಐ ಕಾರ್ಯದರ್ಶಿ ಬಹಿರಂಗವಾಗಿಯೇ ರೋಹಿತ್ ಶರ್ಮಾ ಅವರನ್ನು ಬೆಂಬಲಿಸಿದ್ದರು. ಹೀಗಾಗಿ ಬಿಸಿಸಿಐ ಚೀಫ್ ಸೆಲೆಕ್ಟರ್ ಅಜಿತ್ ಅಗರ್ಕರ್- ಬಿಸಿಸಿಐ ನಡುವೆಯೂ ಮನಸ್ತಾಪ ಶುರುವಾಗಿತ್ತು ಎನ್ನಲಾಗಿದೆ.

# ನೆಗೆಟಿವ್ ರೋಲ್‌ನಲ್ಲಿ ಪ್ರೇಮ್




**ನೆನಪಿರಲಿ, ಜೊತೆ ಜೊತೆಯಲಿ, ಪಲ್ಲಕ್ಕಿ, ಚಾರ್ ಮಿನಾರ್, ಮಳೆ, ಪ್ರೇಮಂ ಪೂಜ್ಯಂ ಹೀಗೆ ಹಲವು ಯಶಸ್ವಿ ಚಿತ್ರಗಳ ಮೂಲಕ ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ವಿಭಿನ್ನ ಛಾಪು ಮೂಡಿಸಿರುವ ನಟ ನೆನಪಿರಲಿ ಪ್ರೇಮ್. ಲವರ್ ಬಾಯ್ ಇಮೇಜ್ ನಿಂದಲೇ ಸಿನಿಪ್ರಿಯರ ಮನಗೆದ್ದಿರುವ ಪ್ರೇಮ್, ಸ್ಪಾರ್ಕ್ ಸಿನಿಮಾ ಮೂಲಕ ಇದೇ ಮೊದಲ ಬಾರಿಗೆ ನೆಗೆಟಿವ್ ರೋಲ್ ನಿರ್ವಹಿಸಿದ್ದಾರೆ. ಈ ಸ್ಪಾರ್ಕ್ ಸಿನಿಮಾ ಮತ್ತು ಮುಂಬರುವ ಪ್ರಾಜೆಕ್ಟ್‌ಗಳ ಕುರಿತು ನಟ ಪ್ರೇಮ್ ಪತ್ರಿಕೆಯೊಂದರ ಸಂದರ್ಶನದಲ್ಲಿ ಹಂಚಿಕೊಂಡಿದ್ದಾರೆ.**

**ಪ್ರಶ್ನೆ: ಕೆಂಪಾಂಬುಧಿ ಪೋಸ್ಟರ್‌ನಲ್ಲಿ ಕೆಂಪೇಗೌಡರ ಲುಕ್‌ನಲ್ಲಿ ಕಾಣಿಸಿಕೊಂಡಿದ್ದೀರ. ಆ ಚಿತ್ರಕ್ಕೆ ನಿಮ್ಮ ಸಿದ್ಧತೆ ಹೇಗಿತ್ತು?**

"ಆ ಪಾತ್ರ ಮತ್ತು ಆ ಗೆಟಪ್ ತುಂಬಾ ಚೆನ್ನಾಗಿ ಮೂಡಿಬಂದಿದ್ದು, ನನಗೆ ಬಹಳ ಖುಷಿಯಿದೆ. ಆ ಕ್ರೆಡಿಟ್ ಸಂಪೂರ್ಣ ಚಿತ್ರತಂಡಕ್ಕೆ ಸಲ್ಲಬೇಕು. ಇನ್ಮುಂದೆ ವಿಭಿನ್ನ ಸಿನಿಮಾಗಳನ್ನೇ ಮಾಡಬೇಕು ಎನ್ನುವ ಆಸೆಯಿದೆ. ಹಾಗಾಗಿ, ಇದು ಮೊದಲ ಹೆಜ್ಜೆ. ಈಗ ಸ್ಪಾರ್ಕ್, ಮುಂದೆ ಡಿ ಡಿ ಢಿಕ್ಕಿ ನಂತರ ಕೆಂಪಾಂಬುಧಿ. ಹೀಗೆ ಪ್ರತೀ ಸಿನಿಮಾದಲ್ಲೂ ವಿಭಿನ್ನವಾಗಿ ಏನಾದರೂ ಮಾಡುವಂತಹ ಪ್ರಯತ್ನವನ್ನು ಖಂಡಿತವಾಗಿಯೂ ಮಾಡುತ್ತೇನೆ" ಎಂದು ಭರವಸೆ ನೀಡಿದರು.

**ಪ್ರಶ್ನೆ: ಸಿನಿಮಾ ಶೂಟಿಂಗ್ ಇಲ್ಲದ ಟೈಮ್‌ನಲ್ಲಿ ಏನು ಮಾಡ್ತೀರ?** "ಸಿನಿಮಾಗಳನ್ನು ನೋಡೋದು, ಅದರ ಬಗ್ಗೆ ಡಿಸ್ಕಷನ್ ಮಾಡೋದು, ಬುಕ್ಸ್ ಓದೋದು, ಸ್ನೇಹಿತರ ಜೊತೆ ಕಾಲ ಕಳೆಯೋದು. ಹೇಗೆ ರೌಂಡ್ ಹೊಡೆದುಕೊಂಡು ಬಂದ್ರೂ ಕೊನೆಗೆ ಸಿನಿಮಾಗೆ ಬರ್ತೀನಿ".

**ಪ್ರಶ್ನೆ: ಹೆಚ್ಚಾಗಿ ಲವರ್ ಬಾಯ್ ಇಮೇಜ್‌ನಿಂದಲೇ ಗುರುತಿಕೊಂಡಿರುವ ನೀವು ಈ ಸ್ಪಾರ್ಕ್ ಸಿನಿಮಾದಲ್ಲಿ ನೆಗೆಟಿವ್ ಶೇಡ್‌ನ ರೋಲ್ ನಿರ್ವಹಿಸಲು ಕಾರಣವೇನು?**

"ಮೊದಲಿನಿಂದಲೂ ವಿಭಿನ್ನ ಪಾತ್ರ ಮಾಡಬೇಕೆಂದುಕೊಳ್ಳುತ್ತಿದ್ದೆ. ಕಾಕತಾಳೀಯವಾಗಿ ಈ ಪಾತ್ರ ಬಂತು. ಸ್ಕ್ರಿಪ್ಟ್ ಚೆನ್ನಾಗಿದೆ, ನನ್ನ ಪಾತ್ರದಲ್ಲಿ ಥ್ರಿಲ್ ಇದೆ ಎನಿಸಿತು. ಹಾಗಾಗಿ ಈ ಸಿನಿಮಾ ಒಪ್ಪಿಕೊಂಡೆ" ಎಂದು ತಿಳಿಸಿದರು.

**ಪ್ರಶ್ನೆ: ಸಕ್ಸಸ್‌ಫುಲ್ ನಟರಾದ ನಿಮಗೆ ಹೊಸ ನಟ ನಟಿ, ನಿರ್ದೇಶಕರ ಜೊತೆ ಕೆಲಸ ಮಾಡಬೇಕೆಂದು ಹೇಗೆ ಅನಿಸಿತು?**

"ಹೊಸಬರು ಹಳಬರು ಅನ್ನೋದಕ್ಕಿಂತ ಕಥೆ ಮತ್ತು ನಮ್ಮ ಪಾತ್ರ ಮುಖ್ಯವಾಗುತ್ತದೆ. ನಮ್ಮ ಕ್ಯಾರೆಕ್ಟರ್ ಅನ್ನು ಯಾವ ರೀತಿ ತೋರಿಸುತ್ತಿದ್ದಾರೆ, ನಮ್ಮ ಒಂದು ಪಾತ್ರ ಜನರ ಮೇಲೆ ಯಾವ ರೀತಿಯ ಪ್ರಭಾವ ಬೀರುತ್ತದೆ ಎಂಬುದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆಯಷ್ಟೇ. ಹಾಗಾಗಿ, ನಿರಂಜನ್ ಸುಧೀಂದ್ರ ನನಗೆ ಹೊಸಬ ಎಂದು ಅನಿಸುವುದಿಲ್ಲ. ಹಲವು ವರ್ಷಗಳಿಂದ ನೋಡಿರುವಂತಹ ಹುಡುಗ. ತುಂಬಾ ಒಳ್ಳೆ ಆಕ್ಟರ್, ಡ್ಯಾನ್ಸರ್ ಹಾಗೂ ಫೈಟರ್. ನಮ್ಮಿಬ್ಬರಲ್ಲಿ ಆ ಫ್ರೆಂಡ್‌ಶಿಪ್ ರ್‍ಯಾಪೋ ತುಂಬಾ ಚೆನ್ನಾಗಿದೆ. ಹಾಗಾಗಿ, ನಮಗೆ ಎಲ್ಲೂ ಆ ಕ್ಲ್ಯಾಶಸ್ ಅಂತಾ ಏನೂ ಬರಲಿಲ್ಲ. ಸಿನಿಮಾ ಬಹಳ ಚೆನ್ನಾಗಿ ಮೂಡಿ ಬಂದಿದೆ" ಎಂದು ತಿಳಿಸಿದರು.

**ಪ್ರಶ್ನೆ: ಈ ಸಿನಿಮಾ ಬಳಿಕ ಡಿ ಡಿ ಢಿಕ್ಕಿ ಕೂಡಾ ಬರುತ್ತಿದೆ. ಅಪ್ಪ ಮಗನ ಕುರಿತಾದ ಚಿತ್ರವನ್ನು ಒಪ್ಪಿಕೊಳ್ಳಲು ಕಾರಣವೇನು?**

"ಡಿ ಡಿ ಢಿಕ್ಕಿ ಒಂದು ಫ್ಯಾಮಿಲಿ ಎಂಟರ್‌ಟೈನ್‌ಮೆಂಟ್ ಸಿನಿಮಾ. ನಾನು ಜೊತೆ ಜೊತೆಯಲಿ ಸಿನಿಮಾ ಬಳಿಕ ನಟಿಸುತ್ತಿರುವ ಕಂಪ್ಲೀಟ್ ಫ್ಯಾಮಿಲಿ ಎಂಟರ್‌ಟೈನ್‌ಮೆಂಟ್ ಪ್ರಾಜೆಕ್ಟ್ ಇದು. ಬಾಂಧವ್ಯ ಅಂದ್ರೆ ಏನು ಎಂದು ತಿಳಿಸಿಕೊಡುವಂತಹ ಚಿತ್ರವಿದು" ಎಂದರು.

**ಪ್ರಶ್ನೆ: ಡಿ ಡಿ ಢಿಕ್ಕಿ ಸಿನಿಮಾದಲ್ಲಿ ಲೇಡಿ ಡೈರೆಕ್ಟರ್ ಜೊತೆ ವರ್ಕ್ ಮಾಡಿದ ಅನುಭವ ಹೇಗಿತ್ತು?**

"ರಂಜನಿ ರಾಘವನ್ ಓರ್ವ ಅದ್ಭುತ ಬರಹಗಾರ್ತಿ. ಅವರು ಡೈರೆಕ್ಟರ್ ಆಗೋದಕ್ಕಿಂತ ಮುನ್ನವೇ ಒಳ್ಳೆ ರೈಟರ್. ಆ ಬರವಣಿಗೆ ತುಂಬಾ ಚೆನ್ನಾಗಿರುವುದರಿಂದ ಅವರ ಡೈರೆಕ್ಷನ್ ತುಂಬಾ ಚೆನ್ನಾಗಿದೆ. ತಮ್ಮ ಸಿನಿಮಾಗೆ ಏನು ಬೇಕು ಎನ್ನುವ ಸ್ಪಷ್ಟತೆ ತುಂಬಾ ಚೆನ್ನಾಗಿದೆ. ಹಾಗಾಗಿ, ಅವರು ಉತ್ತಮ ಬರಹಗಾರ್ತಿ ಮತ್ತು ನಿರ್ದೇಶಕಿ" ಎಂದು ತಿಳಿಸಿದರು.

**ಪ್ರಶ್ನೆ: ಕೆಂಪಾಂಬುಧಿ ಸಿನಿಮಾದಲ್ಲಿ ನಮ್ಮ ಬೆಂಗಳೂರು ಕೆಂಪೇಗೌಡರ ಬಗ್ಗೆ ಕಥೆ ಹೇಳೋದಕ್ಕೆ ಹೊರಟಿದ್ದೀರಾ?**

"ಕೆಂಪೇಗೌಡರು ಅಂತಾ ಬಂದಾಗ ಬೆಂಗಳೂರು ಕಥೆಯನ್ನೇ ಹೇಳಬೇಕು. ಏಕಂದ್ರೆ, ಬೆಂಗಳೂರನ್ನು ಕಟ್ಟಿದಂತಹ ಮಹಾನ್ ವ್ಯಕ್ತಿ ಅವರು. ನಮ್ಮ ನ್ಯಾಷನಲ್ ಹೀರೋ. ಕೇವಲ ಬೆಂಗಳೂರಿಗೆ, ಭಾರತಕ್ಕೆ ಮಾತ್ರವಲ್ಲದೇ ಇಡೀ ವಿಶ್ವಕ್ಕೆ ಮಾದರಿಯಾಗುವಂತಹ ಕೆಲಸಗಳನ್ನು ಅವರು ಮಾಡಿದ್ದಾರೆ. ಹಾಗಾಗಿ, ಅವರ ಪಾತ್ರ ನಿರ್ವಹಿಸುವ ಒಂದು ಅವಕಾಶ ನನಗೆ ಸಿಕ್ಕಿದ್ದು ಈ ಜನ್ಮದ ಸೌಭಾಗ್ಯ" ಎಂದು ತಿಳಿಸಿದರು.

**ಪ್ರಶ್ನೆ: ನೀವು ನಟರಾಗಿ ನಾಡಪ್ರಭು ಕೆಂಪೇಗೌಡರ ಬಗ್ಗೆ ಎಷ್ಟು ತಿಳಿದುಕೊಂಡಿದ್ದೀರಾ?**

ಕೆಂಪೇಗೌಡ ಪಾತ್ರಕ್ಕೆ ಬಹಳ ಸಿದ್ಧತೆ ನಡೆದಿದೆ. ಆ ಸ್ಕ್ರಿಪ್ಟ್ ಕೇಳಿದಾಗಿನಿಂದಲೇ, ಆ ಪುಸ್ತಕ ಓದಿದಾಗಿನಿಂದಲೇ... ಅವರು ಯಾವ ರೀತಿ ಇದ್ದರು, ಕುಟುಂಬದ, ಜನರ ಮತ್ತು ರೈತರ ಬಗ್ಗೆ ಅವರ ಕಾಳಜಿ ಯಾವ ರೀತಿ ಇತ್ತು, ಎಲ್ಲಾ ಜಾತಿ ಜನಾಂಗದವರ ಬಗ್ಗೆಯೂ ಅವರಿಗೆ ಯಾವ ರೀತಿ ಪ್ರೀತಿ ಇತ್ತು, ಅದಕ್ಕೋಸ್ಕರ ಅವರು ಏನೇನು ಮಾಡಿದರು... ಎಲ್ಲವನ್ನೂ ಸಿನಿಮಾದಲ್ಲಿ ಹೇಳುವಂತಹ ಪ್ರಯತ್ನ ಮಾಡಿದ್ದೇವೆ ಅಂತಾರೆ ನಟ ಪ್ರೇಮ್.

**ಪ್ರಶ್ನೆ: ಕನ್ನಡದಲ್ಲಿ ದೊಡ್ಡ ದೊಡ್ಡ ನಟರು ಕಥೆ ಆಯ್ಕೆ ವಿಚಾರದಲ್ಲಿ ಹಿಂದೆ ಬಿದ್ದಿದ್ದಾರೆ ಎನ್ನುವ ಮಾತು ಕೇಳಿಬಂದಿದೆ. ಜೊತೆಗೆ, ನಮ್ಮಲ್ಲಿ ಕಥೆಗಾರರು ಇಲ್ಲ ಅಂತಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?**

"ಹಾಗೇನಿಲ್ಲ. ಕಥೆಗಾರರು ನಮ್ಮಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಅವರಿಗೆ ಅವಕಾಶಗಳು ಸಿಗುತ್ತಿಲ್ಲವಷ್ಟೇ. ಅದು ಬಿಟ್ಟರೆ ಬೇರೆ ಇನ್ನೇನೂ ಇಲ್ಲ. ತುಂಬಾ ಜನ ಒಳ್ಳೊಳ್ಳೆ ಕಥೆಗಳನ್ನು ಇಟ್ಟುಕೊಂಡು ಬರ್ತಾ ಇರ್ತಾರೆ. ಅವರಿಗೆ ಒಂದು ಒಳ್ಳೆ ಸ್ಟೇಜ್ ಸಿಗಬೇಕು, ಒಂದು ಒಳ್ಳೆ ಟೀಮ್ ಸಿಗಬೇಕು ಅಷ್ಟೇ".

**ಪ್ರಶ್ನೆ: ಸಿನಿಮಾ ಜೊತೆಗೆ ರಿಯಾಲಿಟಿ ಶೋಗಳಲ್ಲೂ ಬ್ಯುಸಿಯಾಗಿದ್ದೀರ? ಯಾವುದು ನಿಮಗೆ ಹೆಚ್ಚು ಖುಷಿ ಕೊಡುತ್ತೆ?**

"ಎಲ್ಲವೂ ಜನರಿಗಾಗಿಯೇ ಮಾಡೋದು. ರಿಯಾಲಿಟಿ ಶೋನಿಂದಲೂ ನಾವು ಜನರ ಮನಸ್ಸಿಗೆ ಹತ್ತಿರ ಆಗುತ್ತೇವೆ. ಸಿನಿಮಾದಿಂದಲೂ ಬೇರೆ ರೀತಿ ಹತ್ತಿರ ಆಗ್ತೀವಿ. ಒಟ್ಟಾರೆ ಪ್ರೇಕ್ಷಕರ ಮುಂದೆ ನಾವು ಏನು ಪ್ರೆಸೆಂಟೇಷನ್ ಕೊಡುತ್ತೀವಿ ಅನ್ನೋದು ಮುಖ್ಯ. ನಾನು ಮಾಡುತ್ತಿರುವ ರಿಯಾಲಿಟಿ ಶೋನಿಂದ ಎಷ್ಟೋ ಕುಟುಂಬಗಳಿಗೆ ಒಳ್ಳೆಯದಾಗಿದೆ. ಡಿವೋರ್ಸ್ ಆಗಬೇಕಿದ್ದವರು ಒಂದಾಗಿದ್ದಾರೆ. ಮನೆಯಲ್ಲಿ ಅವರದ್ದೇ ಆದಂತಹ ಕಲಹಗಳೇನಿತ್ತೋ ಅದನ್ನು ಮರೆತು ಮತ್ತಷ್ಟು ಪ್ರೀತಿ ಶುರು ಮಾಡಿದ್ದಾರೆ. ಅವೆಲ್ಲವೂ ಪರೋಕ್ಷವಾಗಿ ನಮಗೆ ಸಿಗುವಂತಹ ಕ್ರೆಡಿಟ್ ಅಲ್ವಾ?" ಎಂದು ತಿಳಿಸಿದರು.

**ಪ್ರಶ್ನೆ: ನೀವು ಸಿನಿಮಾ ಕಥೆಗಳನ್ನು ಆಯ್ಕೆ ಮಾಡಬೇಕಾದ್ರೆ ಕುಟುಂಬದ ಸಲಹೆ ಏನಾದರೂ ಇರುತ್ತಾ ಹೇಗೆ?**

ನನ್ನ ಮಕ್ಕಳು ಸಿನಿಮಾಗೆ ಬರೋದಕ್ಕೆ ಶುರು ಮಾಡಿದ ಮೇಲೆ ಅಭಿಪ್ರಾಯ ತೆಗೆದುಕೊಳ್ಳಬೇಕೆಂದು ನನಗನಿಸಿತು. ನಾವು ಹಲವರ ಅಭಿಪ್ರಾಯ ತೆಗೆದುಕೊಳ್ಳುತ್ತೀವಿ. ವಿವಿಧ ಪ್ರೇಕ್ಷಕ ವರ್ಗ ನಮ್ಮ ಮನೆಯಲ್ಲೇ ಇದೆಯಲ್ವಾ. ಸಿನಿಮಾಗಳ ಬಗ್ಗೆ ಎಲ್ಲಾ ಗೃಹಿಣಿಯರ ಅಭಿಪ್ರಾಯ, ನಿರೀಕ್ಷೆ ಏನಿದೆಯೋ ಅದು ನನ್ನ ಪತ್ನಿ ಮೂಲಕ ಸಿಗುತ್ತದೆ. ಟೀನೇಜ್ ಅಂತಾ ಬಂದಾಗ ನನ್ನ ಮಗ, ಮಗಳಿದ್ದಾರೆ. ನನ್ನ ಏಜ್ ಗ್ರೂಪ್‌ಗೆ ನನ್ನದೇ ಒಪಿನಿಯನ್ ಇದೆ. ಒಂದು ಕಥೆ ಬಗ್ಗೆ ಕುಟುಂಬದಲ್ಲೇ ಅಭಿಪ್ರಾಯ ಸಿಕ್ಕಾಗ ಆ ಸಿನಿಮಾ ಬಗ್ಗೆ ಚರ್ಚಿಸಲು, ಒಪ್ಪಿಕೊಳ್ಳಲು ಸುಲಭವಾಗುತ್ತದೆ ಎಂದು ತಿಳಿಸಿದರು.



ಗ್ರಾಫಿಕ್ ಡಿಸೈನರ್, ಈವೆಂಟ್ ಮ್ಯಾನೇಜರ್ To ಸಿನಿಮಾ

### ನಟ, ನಿರ್ದೇಶಕನಾದ ಕಡಲ ತೀರದ ಪ್ರತಿಭೆ ಶ್ರೀಷ

# ತರಂಗಾಂತರಂಗ ಪುನರ್ಜನ್ಮದ ಕಥೆ

ಕರ್ನಾಟಕದ ಕಡಲ ತೀರದ ಅನೇಕ ಪ್ರತಿಭೆಗಳು ಪ್ರತೀ ವರ್ಷ ನಟರಾಗಿ, ನಿರ್ದೇಶಕರಾಗಿ, ನಿರ್ಮಾಪಕರಾಗಿ, ತಂತ್ರಜ್ಞರಾಗಿ ಕನ್ನಡ ಚಿತ್ರರಂಗ ಪ್ರವೇಶಿಸುತ್ತಾರೆ. ಈ ಸಾಲಿಗೆ ಯುವ ನಟ-ನಿರ್ದೇಶಕ ಶ್ರೀಷ ಹೊಸ ಸೇರ್ಪಡೆ. ಹೌದು, ಉಡುಪಿಯ ಬೈಂದೂರು ಮೂಲದ ಯುವಪ್ರತಿಭೆ ಶ್ರೀಷ ಅವರೀಗ 'ತರಂಗಾಂತರಂಗ' ಚಿತ್ರದ ಮೂಲಕ ನಾಯಕ ನಟ ಮತ್ತು ನಿರ್ದೇಶಕನಾಗಿ ಚಂದನವನಕ್ಕೆ ಪರಿಚಯವಾಗುತ್ತಿದ್ದಾರೆ.

ಗ್ರಾಫಿಕ್ಸ್ ಡಿಸೈನರ್ ಮತ್ತು ಈವೆಂಟ್ ಮ್ಯಾನೇಜರ್ ಆಗಿ ಕೆಲಸ ಮಾಡಿದ ಅನುಭವವಿರುವ ಶ್ರೀಷ, 'ತರಂಗಾಂತರಂಗ' ಎಂಬ ಚಿತ್ರದಲ್ಲಿ ನಾಯಕ ನಟನಾಗಿ ಅಭಿನಯಿಸುವುದರ ಜೊತೆಗೆ ಆಕ್ಷನ್ ಕಟ್ ಹೇಳಿದ್ದಾರೆ. ಈಗಾಗಲೇ ಚಿತ್ರದ ಬಹುತೇಕ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪೂರ್ಣಗೊಂಡಿದ್ದು, ಇತ್ತೀಚೆಗೆ ಚಿತ್ರದ ಮೊದಲ ಟೀಸರ್ ಅನಾವರಣಗೊಂಡಿದೆ.


ಚಿತ್ರತಂಡ

ಕನ್ನಡ ಚಲನಚಿತ್ರ ನಿರ್ದೇಶಕರ ಸಂಘದ ಅಧ್ಯಕ್ಷ ಎನ್. ಆರ್.ಕೆ ವಿಶ್ವನಾಥ್ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಭಾಗವಹಿಸಿ, 'ತರಂಗಾಂತರಂಗ' ಟೀಸರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದ್ದಾರೆ. ಈ ಸಂದರ್ಭ ಚಿತ್ರದ ಕಲಾವಿದರು ಹಾಗೂ ತಂತ್ರಜ್ಞರು ಹಾಜರಿದ್ದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಚಿತ್ರದ ನಾಯಕ ನಟ ಮತ್ತು ನಿರ್ದೇಶಕ ಶ್ರೀಷ, "ಇದೊಂದು ಪುನರ್ಜನ್ಮದ ಕಥೆ ಹೊಂದಿರುವ ಚಿತ್ರ. ನಾವು ದೇವರಿಗೆ ಕಟ್ಟಿಕೊಂಡ ಹರಕೆ ಅಥವಾ ಸೇವೆಗಳನ್ನು ತೀರಿಸಲು ವಿಫಲವಾದರೆ, ಅದರಿಂದ ಏನು ಆಗಬಹುದು ಎಂಬ ಕಥೆಯ ಎಳೆಯನ್ನು ಇಟ್ಟುಕೊಂಡು ಈ ಸಿನಿಮಾ ಮಾಡಿದ್ದೇವೆ. ಹಿಸ್ಟರಿ, ಸಸ್ಪೆನ್ಸ್, ಥ್ರಿಲ್ಲರ್ ಶೈಲಿಯಲ್ಲಿ ಈ ಸಿನಿಮಾ ಮೂಡಿಬರುತ್ತಿದೆ. ಈ ಸಿನಿಮಾವನ್ನು ನಿರ್ದೇಶನ ಮಾಡಿ, ತೆರೆ ಮೇಲೆ ಒಂದು ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದೇನೆ. ನೋಡುಗರಿಗೆ ಈ ಸಿನಿಮಾ ಹೊಸ ಅನುಭವ ಕೊಡಲಿದೆ" ಎಂದು ಭರವಸೆಯ ಮಾತುಗಳನ್ನಾಡಿದ್ದಾರೆ.

ಚಿತ್ರದಲ್ಲಿ ಜನಪ್ರಿಯ ನಟ ಪ್ರಮೋದ್ ಶೆಟ್ಟಿ ಕೂಡಾ ಒಂದು ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. "ಯುವ ನಟ, ನಿರ್ದೇಶಕ ಶ್ರೀಷ ಮತ್ತು ಅವರ ತಂಡ ಸೇರಿಕೊಂಡು ಒಂದು ಒಳ್ಳೆಯ ಸಿನಿಮಾ ಮಾಡಿದ್ದಾರೆ. ನಾನು ಈ ಚಿತ್ರತಂಡದ ಭಾಗವಾಗಿರುವುದಕ್ಕೆ ಖುಷಿಯಿದೆ. ಯುನಿಫಾರ್ಮ್ ಧರಿಸಿಕೊಂಡು ಈ ಸಿನಿಮಾದ ಪಾತ್ರದಲ್ಲಿ ಅಭಿನಯಿಸಿದ್ದೇನೆ.ಈ ಚಿತ್ರತಂಡದ ಜೊತೆ ಕೆಲಸ ಮಾಡಿದ್ದು ಒಂದು ಒಳ್ಳೆಯ ಅನುಭವ" ಎಂದು ತಮ್ಮ ಮನದಾಳ ಹಂಚಿಕೊಂಡಿದ್ದಾರೆ.



ಉಳಿದಂತೆ ನಟಿ ಚೆರಿಕಾ ಮೂರ್ತಿ, ಛಾಯಾಗ್ರಹಕ ವೆಂಕಟೇಶ್ ಸೇರಿದಂತೆ ಚಿತ್ರದ ಹಲವು ಕಲಾವಿದರು ಮತ್ತು ತಂತ್ರಜ್ಞರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

ಚಿತ್ರದಲ್ಲಿ ಶ್ರೀಷ ಅವರಿಗೆ ಚೆರಿಕಾ ಮೂರ್ತಿ ಮತ್ತು ಯಶಸ್ವಿನಿ ಸ್ವಾಮಿ ನಾಯಕಿಯರಾಗಿ ಅಭಿನಯಿಸಿದ್ದಾರೆ. ಉಳಿದಂತೆ ಹಿರಿಯ ನಟರಾದ ರಮೇಶ್ ಪಂಡಿತ್, ಪ್ರಭಾಕರ ಕುಂದರ್, ಲಿಖಿತಾ ಶೆಟ್ಟಿ, ಮುರಳಿ ಮತ್ತಿತರರು ಇತರೆ ಪ್ರಮುಖ ಪಾತ್ರದಲ್ಲಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಛಾಪು ಮೂಡಿಸಿ ಮರೆಯಾದ ನಟರಾದ ದಿವಂಗತ ದಿನೇಶ್ ಮಂಗಳೂರು ಮತ್ತು ದಿವಂಗತ ರಾಕೇಶ್ ಪೂಜಾರಿ ಕೂಡಾ ಕೊನೆಯದಾಗಿ ಈ ಚಿತ್ರಕ್ಕೆ ಬಣ್ಣ ಹಚ್ಚಿದ್ದರು. ಸದ್ಯ ಟೀಸರ್ ಬಿಡುಗಡೆ ಮಾಡುವ ಮೂಲಕ ಚಿತ್ರದ ಪ್ರಚಾರ ಕಾರ್ಯಗಳಿಗೆ ಚಾಲನೆ ನೀಡಿರುವ ಚಿತ್ರತಂಡ, ಮುಂದಿನ ಜನವರಿಯಲ್ಲಿ ಚಿತ್ರವನ್ನು ಪ್ರೇಕ್ಷಕರ ಮುಂದೆ ತರುವ ಯೋಜನೆ ಹಾಕಿಕೊಂಡಿದೆ. ರಿಲೀಸ್ ಡೇಟ್ ಸೇರಿ ಮತ್ತಷ್ಟು ಮಾಹಿತಿ ಮುಂಬರುವ ದಿನಗಳಲ್ಲಿ ಹಂತಹಂತವಾಗಿ ಸಿಗಲಿದೆ.

# ಟಿ20 ವಿಶ್ವಕಪ್ ಗೆಲ್ಲಲು 17 ವರ್ಷ ಕಾಯಲಿಲ್ಲ... ಟೀಕಾಕಾರರ ವಿರುದ್ಧ ಗೌತಮ್ ಗಂಭೀರ್ ಗರಂ!

ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿನ ಸೋಲಿನ ನಂತರ ತಂಡದ ವಿರುದ್ಧ ಕೇಳಿಬರುತ್ತಿರುವ ಟೀಕೆಗಳಿಗೆ ಟೀಂ ಇಂಡಿಯಾ ಕೋಚ್ ಗೌತಮ್ ಗಂಭೀರ್ ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಶ್ರೇಯಸ್ ಅಯ್ಯರ್ ನೇತೃತ್ವದ ಭಾರತೀಯ ತಂಡವು ಇತ್ತೀಚೆಗೆ ಐರ್ಲೆಂಡ್ ಮತ್ತು ಇಂಗ್ಲೆಂಡ್ ವಿರುದ್ಧದ ಸೋಲುಗಳಿಗೆ ವಿಮರ್ಶಕರಿಂದ ತೀವ್ರ ಟೀಕೆ ಎದುರಾಯಿತು. ಆದಾಗ್ಯೂ, ಗೌತಮ್ ಗಂಭೀರ್ ಈಗ ಟೀಕಾಕಾರರಿಗೆ ತಕ್ಕ ಉತ್ತರವನ್ನು ನೀಡಿದ್ದಾರೆ.



ಟೀಂ ಇಂಡಿಯಾ ಆಟಗಾರರು ಎರಡನೇ ವಿಶ್ವಕಪ್ ಗೆಲ್ಲಲು 17 ವರ್ಷ ಕಾಯಲಿಲ್ಲ. ಒಂದು ಕೆಟ್ಟ ಸರಣಿ ಅಥವಾ ಇಲ್ಲಿ ಮೂರು ಕೆಟ್ಟ ಪಂದ್ಯಗಳು ಇದ್ದಕ್ಕಿದ್ದಂತೆ ಅವರನ್ನು ಕೆಟ್ಟ ಆಟಗಾರರನ್ನಾಗಿ ಮಾಡುವುದಿಲ್ಲ ಅಥವಾ ನಮ್ಮನ್ನು ಕೆಟ್ಟ ತಂಡವನ್ನಾಗಿ ಮಾಡುವುದಿಲ್ಲ. ಆದ್ದರಿಂದ, ಈ ನಿರಂತರತೆಯನ್ನು ಕಾಪಾಡಿಕೊಳ್ಳುವುದು ನಮಗೆ ಬಹಳ ಮುಖ್ಯವಾಗಿತ್ತು ಎಂದು ಹೇಳಿದರು.

2007ರಲ್ಲಿ ಎಂಎಸ್ ಧೋನಿ ನೇತೃತ್ವದಲ್ಲಿ ಭಾರತ ತನ್ನ ಮೊದಲ ವಿಶ್ವಕಪ್ ಗೆದ್ದಿತು. ಟೀಮ್ ಇಂಡಿಯಾ ತನ್ನ ಎರಡನೇ ಟಿ20 ವಿಶ್ವಕಪ್ ಗೆಲ್ಲಲು 17 ವರ್ಷಗಳು ಬೇಕಾಯಿತು. 2024 ರಲ್ಲಿ ರೋಹಿತ್ ಶರ್ಮಾ ನೇತೃತ್ವದಲ್ಲಿ ಭಾರತ ಎರಡನೇ ವಿಶ್ವಕಪ್ ಗೆದ್ದಿತು. ಆದಾಗ್ಯೂ, ಭಾರತ ತನ್ನ ಮೂರನೇ ಟಿ20 ವಿಶ್ವಕಪ್ ಗೆಲ್ಲಲು ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ. ಸೂರ್ಯಕುಮಾರ್ ಯಾದವ್ ನೇತೃತ್ವದಲ್ಲಿ, ಭಾರತ ಮತ್ತೊಮ್ಮೆ 2026ರಲ್ಲಿ ವಿಶ್ವ ಚಾಂಪಿಯನ್ ಆಯಿತು. ಇದು ಭಾರತದ ಸತತ ಎರಡನೇ ಟಿ20 ವಿಶ್ವಕಪ್ ಪ್ರಶಸ್ತಿಯಾಗಿದೆ ಎಂದರು. ಗಂಭೀರ್ ಅವರು T20 ನಾಯಕ ಶ್ರೇಯಸ್ ಅಯ್ಯರ್ ಅವರ ನಿಸ್ವಾರ್ಥ ನಾಯಕತ್ವವನ್ನು ಶ್ಲಾಘಿಸಿದರು. ಕೋಲ್ಕತ್ತಾ ನೈಟ್ ರೈಡರ್ಸ್‌ನ ಯಶಸ್ವಿ IPL 2024 ಅಭಿಯಾನದ ಸಮಯದಲ್ಲಿ ಶ್ರೇಯಸ್ ಅಯ್ಯರ್ ಮತ್ತು ಗಂಭೀರ್ ನಿಕಟವಾಗಿ ಕೆಲಸ ಮಾಡಿದರು. ನೋಡಿ, ಶ್ರೇಯಸ್ ಜೊತೆಗಿನ ನನ್ನ ಮೊದಲ ಅನುಭವ ನಾನು 2024 ರಲ್ಲಿ ಕೆಕೆಆರ್ ತಂಡಕ್ಕೆ ಹೋದಾಗ ಅವರು ಅಲ್ಲಿ ನಾಯಕತ್ವ ವಹಿಸಿದ್ದರು. ಶ್ರೇಯಸ್ ಬಗ್ಗೆ ನನಗೆ ಹೆಚ್ಚು ಇಷ್ಟವಾದ ವಿಷಯವೆಂದರೆ ಅವರು ಕೆಲವೊಮ್ಮೆ ನಾಲ್ಕನೇ ಸ್ಥಾನದಲ್ಲಿ ತಮ್ಮ ಸ್ಥಾನವನ್ನು ಬಿಟ್ಟುಕೊಡಲು ಸಿದ್ಧರಿದ್ದರು. ಅವರು ತುಂಬಾ ಹೊಂದಿಕೊಳ್ಳುವವರಾಗಿದ್ದರು ಎಂದರು.

# CSK ಕೋಚ್ ಹುದ್ದೆ ಆಫರ್ ತಿರಸ್ಕರಿಸಿದ್ದೇಕೆ ಆಶಿಶ್ ನೆಹ್ರಾ...? ಆರ್ ಅಶ್ವಿನ್ ಹೇಳಿದ್ದೇನು?



ಇಂಡಿಯನ್ ಪ್ರೀಮಿಯರ್ ಲೀಗ್‌ನ ಪ್ರಮುಖ ಫ್ರಾಂಚೈಸಿಯಾದ ಚೆನ್ನೈ ಸೂಪರ್ ಕಿಂಗ್ಸ್ ಸೋಮವಾರ ಜಹೀರ್ ಖಾನ್ ಅವರನ್ನು ಹೊಸ ಮುಖ್ಯ ಕೋಚ್ ಎಂದು ಅಧಿಕೃತವಾಗಿ ಘೋಷಿಸಿದೆ. ಮಾಜಿ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಈ ನೇಮಕಾತಿಗೂ ಮುನ್ನ ಕೋಚ್ ಹುದ್ದೆಗೆ ಇದ್ದ ಸಂದಿಗ್ಧತೆಯ ಬಗ್ಗೆ ಪ್ರಮುಖ ವಿವರಗಳನ್ನು ತಮ್ಮ ಯೂಟ್ಯೂಬ್ ಚಾನೆಲ್ ಮೂಲಕ ಬಹಿರಂಗಪಡಿಸಿದ್ದಾರೆ. ಸಿಎಸ್‌ಕೆ ಆಡಳಿತ ಮಂಡಳಿ ಆಶಿಶ್ ನೆಹ್ರಾ ಮತ್ತು ಇತರ ಅನೇಕ ಸೆಲೆಬ್ರಿಟಿಗಳನ್ನು ಈ ಹುದ್ದೆಗೆ ಸಂಪರ್ಕಿಸಿತ್ತು ಎಂದು ಅವರು ಬಹಿರಂಗಪಡಿಸಿದ್ದಾರೆ. ಆದಾಗ್ಯೂ, ಗುಜರಾತ್ ಟೈಟಾನ್ಸ್ ತಂಡದೊಂದಿಗೆ ಯಶಸ್ವಿಯಾಗಿ ಪ್ರಯಾಣಿಸುತ್ತಿರುವ ನೆಹ್ರಾ, ಪ್ರಸ್ತುತ ತಮ್ಮ ಹಾದಿಯನ್ನು ಬದಲಾಯಿಸಲು ಆಸಕ್ತಿ ಹೊಂದಿಲ್ಲ ಎಂದರು.

2022ರಲ್ಲಿ ಮೊದಲ ಸೀಸನ್‌ನಿಂದ ಗುಜರಾತ್ ತಂಡದ ಮುಖ್ಯ ಕೋಚ್ ಆಗಿ ನೆಹ್ರಾ ಕಾರ್ಯನಿರ್ವಹಿಸುತ್ತಿದ್ದಾರೆ. ತಮ್ಮ ಮೊದಲ ಪ್ರಯತ್ನದಲ್ಲೇ ತಂಡವನ್ನು ಚಾಂಪಿಯನ್ ಮಾಡಿದ ಕೀರ್ತಿ ಅವರಿಗಿದೆ. ಅದಾದ ನಂತರ, 2023ರ ಸೀಸನ್‌ನಲ್ಲಿ ತಂಡವನ್ನು ಫೈನಲ್‌ಗೆ ಕೊಂಡೊಯ್ದರು. ಈ ವರ್ಷ ನಡೆದ ಐಪಿಎಲ್‌ನ 2026ರ ಸೀಸನ್‌ನಲ್ಲಿ ಗುಜರಾತ್ ತಂಡ ಫೈನಲ್ ತಲುಪುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ದೇಶದ ಅತ್ಯಂತ ಸಕ್ರಿಯ ತರಬೇತುದಾರರಲ್ಲಿ ಒಬ್ಬರೆಂದು ಕರೆಯಲ್ಪಡುವ ನೆಹ್ರಾ, ಪ್ರಸ್ತುತ ಫ್ರಾಂಚೈಸಿಯೊಂದಿಗೆ ಸಂತೋಷವಾಗಿರುವುದರಿಂದ ಸಿಎಸ್‌ಕೆ ನೀಡಿದ ಆಫರ್ ಅನ್ನು ಸ್ವಇಚ್ಛೆಯಿಂದ ಸ್ವೀಕರಿಸಲಿಲ್ಲ ಎಂದು ಹೇಳಿದರು.

ನೆಹ್ರಾ ಜೊತೆಗೆ, ಇತರ ಇಬ್ಬರು ಭಾರತೀಯ ದಂತಕಥೆಗಳು ಕೋಚಿಂಗ್ ಹುದ್ದೆಗೆ ಸ್ಪರ್ಧೆಯಲ್ಲಿದ್ದಾರೆ ಎಂದು ಅಶ್ವಿನ್ ಹೇಳಿದರು. ಕೆಲವು ವಿದೇಶಿ ತರಬೇತುದಾರರೊಂದಿಗೆ ಮಾತುಕತೆ ನಡೆಸಲಾಗಿತ್ತು. ಆದರೆ ವಿವಿಧ ಕಾರಣಗಳಿಂದಾಗಿ, ಆ ಒಪ್ಪಂದಗಳನ್ನು ತಲುಪಲು ಸಾಧ್ಯವಾಗಲಿಲ್ಲ ಎಂದು ಅವರು ಸ್ಪಷ್ಟಪಡಿಸಿದರು. ಕೆಲವರು ಒಂದು ವರ್ಷದ ಒಪ್ಪಂದಕ್ಕೆ ಒಪ್ಪಲಿಲ್ಲ, ಆದರೆ ಇತರರು ಇತರ ದೇಶೀಯ ಪಂದ್ಯಾವಳಿಗಳಲ್ಲಿ ಕೆಲಸ ಮಾಡಬಾರದು ಎಂಬ ಷರತ್ತಿನಿಂದ ಹಿಂದೆ ಸರಿದರು. ಇತರ ಲೀಗ್‌ಗಳಲ್ಲಿ ಕೆಲಸ ಮಾಡದಿದ್ದರೆ ಅವರು ಆರ್ಥಿಕವಾಗಿ ನಷ್ಟ ಅನುಭವಿಸುತ್ತಾರೆ ಎಂಬ ಆಕ್ಷೇಪಣೆಗಳು ವ್ಯಕ್ತವಾಗಿದ್ದವು. ಒಟ್ಟಾರೆಯಾಗಿ, ಅನೇಕ ಚರ್ಚೆಗಳ ನಂತರ, ಫ್ರಾಂಚೈಸಿ ಜಹೀರ್ ಖಾನ್ ಅವರನ್ನು ಮುಖ್ಯ ಕೋಚ್ ಆಗಿ ಆಯ್ಕೆ ಮಾಡಿತು ಎಂದು ಆರ್ ಅಶ್ವಿನ್ ಹೇಳಿದ್ದಾರೆ.





# ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್‌ಗೆ 1 ಕೋಟಿ ರೂ ಬಹುಮಾನ

**ಚಂಡೀಗಢ:** 2026ರ ಏಷ್ಯನ್ ಗೇಮ್ಸ್‌ನಲ್ಲಿ ಭಾರತ ಮಹಿಳಾ ಕ್ರಿಕೆಟ್ ತಂಡ ಚಿನ್ನದ ಪದಕ ಗೆದ್ದಿದ್ದು, ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರಿಗೆ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು 1 ಕೋಟಿ ರೂ. ನಗದು ಬಹುಮಾನ ಘೋಷಿಸಿದ್ದಾರೆ. ಏಷ್ಯನ್ ಗೇಮ್ಸ್ ಕ್ರೀಡಾಕೂಟದಲ್ಲಿ ಭಾರತಕ್ಕೆ ಕ್ರಿಕೆಟ್ ನಲ್ಲಿ ಮತ್ತೊಂದು ಚಿನ್ನದ ಪದಕ ಲಭಿಸಿದ್ದು, ಫೈನಲ್ ನಲ್ಲಿ ಶ್ರೀಲಂಕಾ ತಂಡವನ್ನು ಮಣಿಸಿದ ಭಾರತ ಮಹಿಳಾ ತಂಡ, ಸತತ 2ನೇ ಪದಕ ಬಾಚಿಕೊಂಡಿದೆ. ಚಿನ್ನದ ಪದಕ ಗೆದ್ದ ಭಾರತ ಮಹಿಳಾ ಕ್ರಿಕೆಟ್ ತಂಡವನ್ನು ಅಭಿನಂದಿಸಿರುವ ಭಗವಂತ್ ಮಾನ್, 'ತಂಡದ ಈ ಸಾಧನೆಯು ಪಂಜಾಬ್ ಮತ್ತು ಇಡೀ ದೇಶದ ಹೆಮ್ಮೆಯನ್ನು ಹೆಚ್ಚಿಸಿದೆ. ಪಂಜಾಬ್‌ನ ಮಗಳು ಹರ್ಮನ್‌ಪ್ರೀತ್ ಕೌರ್ ಬಗ್ಗೆ ನಮಗೆಲ್ಲರಿಗೂ ತುಂಬಾ ಹೆಮ್ಮೆ ಇದೆ' ಎಂದಿದ್ದಾರೆ. ಅಲ್ಲದೆ ಈ ಸಾಧನೆಗಾಗಿ ನಾಯಕಿ ಹರ್ಮನ್‌ಪ್ರೀತ್ ಕೌರ್ ಸೇರಿದಂತೆ ಇಡೀ ತಂಡವನ್ನು ಅವರು ಅಭಿನಂದಿಸಿದ್ದಾರೆ. ಮಂಗಳವಾರ ನಡೆದ ಫೈನಲ್‌ನಲ್ಲಿ ಶ್ರೀಲಂಕಾವನ್ನು 147 ರನ್‌ಗಳಿಂದ ಮಣಿಸಿದ ಭಾರತ, ಫೈನಲ್ ಗೆದ್ದು ಚಿನ್ನದ ಪದಕಕ್ಕೆ ಭಾಜನವಾಯಿತು. ಈ ಮೂಲಕ ಹ್ಯಾಂಗ್‌ಝೌ 2022ರಲ್ಲಿ ಗೆದ್ದಿದ್ದ ಚಿನ್ನದ ಪದಕವನ್ನು ಮತ್ತೊಮ್ಮೆ ತನ್ನದಾಗಿಸಿಕೊಂಡಿತು.

# ಥೈಲ್ಯಾಂಡ್ ವಿರುದ್ಧ ದಾಖಲೆಯ ಗೋಲುಗಳಿಂದ ಜಯಿಸಿದ ಭಾರತ ಮಹಿಳಾ ಹಾಕಿ ತಂಡ

**ಐಚಿ-ನಗೋಯಾ (ಜಪಾನ್):** ಇಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಮಹಿಳಾ ಹಾಕಿ ತಂಡದ ಗೆಲುವಿನ ನಾಗಾಲೋಟ ಮುಂದುವರಿದಿದೆ. ಕವಸಾಕಿ ಜುಕೊ ಕ್ರೀಡಾಂಗಣದಲ್ಲಿ ಬುಧವಾರ ನಡೆದ 'ಪೂಲ್ ಬಿ' ಪಂದ್ಯದಲ್ಲಿ ಥೈಲ್ಯಾಂಡ್ ವಿರುದ್ಧ 20–1 ಅಂತರದ ದಾಖಲೆಯ ಗೆಲುವು ದಾಖಲಿಸಿತು.

ಭಾರತದ ಪರ ದೀಪಿಕಾ 9 ಗೋಲು ಬಾರಿಸಿ ಜಯದ ರೂವಾರಿಯಾದರು. ಜೊತೆಗೆ, ನವನೀತ್ ಕೌರ್ 4, ರುತುಜಾ ದಾದಾಸೋ ಪಿಸಾಲ್ 3 ಗೋಲು ಗಳಿಸಿದರು. ಲಾಲ್‌ರೆಮ್ಸಿಯಾಮಿ, ನೇಹಾ, ಸಾಕ್ಷಿ ಮತ್ತು ಸಲಿಮಾ ಟೆಟೆ ತಲಾ ಒಂದು ಗೋಲು ಬಾರಿಸಿದರು. ಇದರೊಂದಿಗೆ, ಭಾರತ ಕೂಟದಲ್ಲಿ ಸತತ ಮೂರನೇ ಗೆಲುವು ಸಾಧಿಸಿತು.

**ಚೆಂಡಿನ ಮೇಲೆ ಭಾರತದ ಪಾರಮ್ಯ:** ಪಂದ್ಯದ ಶೇಕಡಾ 61 ರಷ್ಟು ಸಮಯ ಚೆಂಡಿನ ಮೇಲೆ ನಿಯಂತ್ರಣ ಸಾಧಿಸಿದ ಭಾರತದ ವನಿತೆಯರು, ಪಂದ್ಯದ ಪ್ರತಿ ಕ್ವಾರ್ಟರ್‌ನಲ್ಲೂ ಗೋಲು ಗಳಿಸಿದರು. ಮೊದಲ ಕ್ವಾರ್ಟರ್‌ನಲ್ಲಿ 6, ಎರಡನೇ ಕ್ವಾರ್ಟರ್‌ನಲ್ಲಿ 5, ಮೂರನೇ ಕ್ವಾರ್ಟರ್‌ನಲ್ಲಿ 5 ಮತ್ತು ಅಂತಿಮ ಕ್ವಾರ್ಟರ್‌ನಲ್ಲಿ 4 ಗೋಲುಗಳನ್ನು ಗಳಿಸಿತು. ಥೈಲ್ಯಾಂಡ್ ಪರ ಸಮನ್ಸೊ ಸುಪನ್ಸಾ 57ನೇ ನಿಮಿಷದಲ್ಲಿ ಏಕೈಕ ಗೋಲು ಗಳಿಸಿದರು.

ಇದಕ್ಕೂ ಮುನ್ನ ಭಾರತ ತಂಡ ಉಜ್ಬೇಕಿಸ್ತಾನದ ವಿರುದ್ಧ 19–0 ಅಂತರದ ಗೆಲುವಿನೊಂದಿಗೆ ತನ್ನ ಅಭಿಯಾನವನ್ನು ಆರಂಭಿಸಿತ್ತು. ಆ ಪಂದ್ಯದಲ್ಲಿ ದೀಪಿಕಾ 8 ಗೋಲುಗಳನ್ನು ಗಳಿಸಿದರೆ, ಇಶಿಕಾ ಹ್ಯಾಟ್ರಿಕ್ ಸಾಧನೆ ಮಾಡಿದ್ದರು. ನಂತರ ಇಂಡೋನೇಷ್ಯಾ ವಿರುದ್ಧ 17 ಗೋಲುಗಳನ್ನು ಗಳಿಸಿತ್ತು. ಭಾರತ ತಂಡವು ತನ್ನ ಉಳಿದ 'ಪೂಲ್ ಬಿ' ಪಂದ್ಯಗಳಲ್ಲಿ ಶುಕ್ರವಾರ ಆತಿಥೇಯ ಜಪಾನ್ ಮತ್ತು ಭಾನುವಾರ ಸಿಂಗಾಪುರದ ವಿರುದ್ಧ ಸೆಣಸಲಿದೆ.


ಏಷ್ಯನ್ ಗೇಮ್ಸ್

**ಉಳಿದ ಕ್ರೀಡೆಗಳ ಫಲಿತಾಂಶ ಹೀಗಿದೆ:** ಬುಧವಾರದ ಇತರ ಫಲಿತಾಂಶಗಳಲ್ಲಿ, ಭಾರತದ ಪುರುಷರ ಕಬಡ್ಡಿ ತಂಡವು ಬಾಂಗ್ಲಾದೇಶವನ್ನು 48–25 ಅಂಕಗಳ ಅಂತರದಿಂದ ಸೋಲಿಸಿ ಗುಂಪು ಹಂತದಲ್ಲಿ ಸತತ ಮೂರನೇ ಗೆಲುವು ದಾಖಲಿಸಿತು. ಹಾಗೆಯೇ, ಮಹಿಳಾ ತಂಡವು ಇರಾನ್ ವಿರುದ್ಧ 37–23 ಅಂತರದ ಜಯದೊಂದಿಗೆ ಸತತ ಎರಡನೇ ಗೆಲುವು ಪಡೆಯಿತು.

ವೈಯಕ್ತಿಕ ಸ್ಪರ್ಧೆಗಳಲ್ಲೂ ಬುಧವಾರ ಭಾರತಕ್ಕೆ ಉತ್ತಮ ದಿನವಾಗಿದೆ. ಒಲಿಂಪಿಕ್ ಪದಕ ವಿಜೇತೆ ಮೀರಾಬಾಯಿ ಚಾನು ಮಹಿಳೆಯರ 49 ಕೆಜಿ ವೇಟ್‌ಲಿಫ್ಟಿಂಗ್ ವಿಭಾಗದಲ್ಲಿ ಒಟ್ಟು 198 ಕೆಜಿ ಭಾರ ಎತ್ತುವ ಮೂಲಕ ಬೆಳ್ಳಿ ಪದಕ ಗೆದ್ದರು. ಮತ್ತೊಂದೆಡೆ, ಜಯ್ ಮೀನಾ ಸಾಫ್ಟ್ ಟೆನಿಸ್‌ನ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಕಂಚಿನ ಪದಕ ಗೆಲ್ಲುವ ಮೂಲಕ ಏಷ್ಯನ್ ಗೇಮ್ಸ್ ಇತಿಹಾಸದಲ್ಲಿಯೇ ದೇಶಕ್ಕೆ ಮೊದಲ ಪದಕ ತಂದುಕೊಟ್ಟರು.

**ಶೂಟಿಂಗ್:** ಭಾರತದ ಪುರುಷರ ಮತ್ತು ಮಹಿಳೆಯರ ಸ್ಕೀಟ್ ತಂಡಗಳು ಕಂಚಿನ ಪದಕಗಳನ್ನು ಗೆದ್ದವು. ರೈಜಾ ಧಿಲ್ಲೋನ್, ಪರಿನಾಜ್ ಧಲಿವಾಲ್ ಮತ್ತು ಮಹೇಶ್ವರಿ ಚೌಹಾಣ್ ಅವರಿದ್ದ ಮಹಿಳಾ ತಂಡ 331 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆಯಿತು. ಇತ್ತ ಪುರುಷರ ತಂಡವಾದ ಅನಂತ್‌ಜೀತ್ ಸಿಂಗ್ ನರುಕಾ, ಮೈರಾಜ್ ಅಹ್ಮದ್ ಖಾನ್ ಮತ್ತು ಭವ್‌ತೇಗ್ ಸಿಂಗ್ ಗಿಲ್ ಅವರು ಕಝಾಕಿಸ್ತಾನ್ ವಿರುದ್ಧದ 'ಶೂಟ್-ಆಫ್'ನಲ್ಲಿ ಜಯಗಳಿಸಿ ಕಂಚಿನ ಪದಕವನ್ನು ತಮ್ಮದಾಗಿಸಿಕೊಂಡರು.

**ಸ್ಕ್ವಾಷ್:** ಪುರುಷರ ಸಿಂಗಲ್ಸ್‌ನಲ್ಲಿ ಅಭಯ್ ಸಿಂಗ್ ಹಾಗೂ ಮಹಿಳಾ ಸಿಂಗಲ್ಸ್‌ನಲ್ಲಿ ತನ್ವಿ ಖನ್ನಾ ಜಯಗಳಿಸಿ ಪ್ರೀ-ಕ್ವಾರ್ಟರ್ ಫೈನಲ್ ತಲುಪಿದ್ದಾರೆ.

**ರೋಯಿಂಗ್ ಮತ್ತು ಕ್ಯಾನೋ ಸ್ಪ್ರಿಂಟ್:** ಭಾರತದ ರೋಯಿಂಗ್ ಮತ್ತು ಕ್ಯಾನೋ ಸ್ಪ್ರಿಂಟ್ ಕ್ರೀಡಾಪಟುಗಳು ಹೀಟ್ಸ್ ಹಂತದಲ್ಲಿ ಉತ್ತಮ ಪ್ರದರ್ಶನ ತೋರಿದ್ದು, ಹಲವರು ಫೈನಲ್ ಮತ್ತು ಸೆಮಿಫೈನಲ್ ಹಂತಗಳಿಗೆ ಅರ್ಹತೆ ಪಡೆದಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news